ಬುಧವಾರ, ಜುಲೈ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 193 | ಪುಟ 16

www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಹಲವು ಸ್ಟಾರ್ಟಪ್‌ಗಳು ಈಗ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಕೃಷಿ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ಪ್ರಯತ್ನ ನಡೆಸುತ್ತಿವೆ. ಸದ್ಯ 700 ಅಗ್ರಿಟೆಕ್ ಸ್ಟಾರ್ಟಪ್‌ಗಳು ಭಾರತದಲ್ಲಿವೆ!



ಆಳ-ಅಗಲ

ಎಐಎಡಿಎಂಕೆ: ಸತತ ಬಿಕ್ಕಟ್ಟಿನ ಅರ್ಧ ಶತಮಾನ

‘ಅಸ್ಪೃಶ್ಯತೆ ನಿವಾರಣೆಗೆ ಸಹನೆ ಅಗತ್ಯ’ 4

ಗೋವಾ ಕಾಂಗ್ರೆಸ್ ಭಿನ್ನಮತ ಶಮನ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
53,886	16,058	₹52,450 (ಬೆಂಗಳೂರು)	₹57,900 (ಬೆಂಗಳೂರು)	79.59



ಪ್ರಥಮ ಪಿಯುಸಿ ಪ್ರವೇಶ 30ರವರೆಗೆ ಅವಕಾಶ

ಬೆಂಗಳೂರು: ಪ್ರಥಮ ಪಿಯುಸಿಗೆ ಪ್ರವೇಶ ಪಡೆಯಲು ಜುಲೈ 30ರವರೆಗೆ ಅವಕಾಶ ಕಲ್ಪಿಸಿ ಪದವಿಪೂರ್ವ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಸಿಬಿಎಸ್‌ಇ, ಐಸಿಎಸ್‌ಇ ಬೋರ್ಡ್‌ಗಳ 10ನೇ ತರಗತಿ ಫಲಿತಾಂಶ ಪ್ರಕಟಣೆ ವಿಳಂಬದ ಕಾರಣ ಪೋಷಕರ ಮನವಿ, ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಪ್ರವೇಶದ ಅವಧಿ ವಿಸ್ತರಿಸಲಾಗಿದೆ. ಜುಲೈ 30ರ ನಂತರ ಪ್ರವೇಶ ಪಡೆಯಲು ಇಚ್ಛಿಸುವವರು ₹ 670 ದಂಡ ಶುಲ್ಕ ಸಹಿತ ಆ.6ರ ಒಳಗೆ, ₹ 2,890 ದಂಡ ಶುಲ್ಕ ಪಾವತಿಸಿ ಆ.12ರ ಒಳಗೆ ಪ್ರವೇಶ ಪಡೆಯಬಹುದು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ವರ್ಷಧಾರೆ: ಅಣಶಿ ಘಟ್ಟದಲ್ಲಿ ಮತ್ತೆ ಭೂಕುಸಿತ: ವಾಹನ ಸಂಚಾರ ನಿಷೇಧ

5 ಸಾವು, 431 ಮನೆಗಳಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಂಗಳವಾರ ಬೆಳಗಾವಿ ಹೊರತುಪಡಿಸಿ ಉಳಿದಂತೆ ಮಳೆಯ ಬಿರುಸು ತುಸು ತಗ್ಗಿದೆ. ಆದರೆ, ಮಳೆಯಿಂದಾಗಿ 431 ಮನೆಗಳಿಗೆ ಹಾನಿಯಾಗಿದೆ. ನದಿಗಳಲ್ಲಿ ಹರಿವು ಹೆಚ್ಚಿದ್ದು, ತೀರಪ್ರದೇಶಗಳ ಜನರ ಸಂಕಷ್ಟ ಹೆಚ್ಚಾಗಿದೆ.

ಮಳೆಯಿಂದಾಗಿ ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ 80 ಮನೆಗಳು ಕುಸಿದಿದ್ದರೆ, ಕರಾವಳಿ ಭಾಗದಲ್ಲಿ 30 ಮನೆಗಳು ಭಾಗಶಃ, 4 ಮನೆಗಳು ಪೂರ್ಣ ಕುಸಿದಿವೆ. ಬೆಳಗಾವಿ ಜಿಲ್ಲೆಯಲ್ಲಿ ಹಾನಿ ಪ್ರಮಾಣ ಹೆಚ್ಚಿದ್ದು, ಸುಮಾರು 317 ಮನೆಗಳಿಗೆ ಹಾನಿಯಾಗಿದೆ.

ದಕ್ಷಿಣ ಕನ್ನಡದಲ್ಲಿ ಕೊಂಬೆ ತೆರವು-ಗೊಳಿಸುವಾಗ ವಿದ್ಯುತ್ ತಂತಿ ತಗುಲಿ ಮೆಸ್ಕಾಂ ನೌಕರ, ಹಳಿಯಾಳದಲ್ಲಿ ಗೋಡೆ ಕುಸಿದು ಇಬ್ಬರು ಮೃತಪಟ್ಟಿದ್ದಾರೆ. ವಿಜಯಪುರದಲ್ಲಿ ಒಬ್ಬರು ಗಾಯಗೊಂಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಆರು ಜಾನುವಾರು ಮೃತಪಟ್ಟಿವೆ.

ಉಳಿದಂತೆ, ಹೊಳೆಗೆ ಕಾರು ಬಿದ್ದು, ನೀರು ಪಾಲಾಗಿದ್ದ ಚಾಲಕ ಸೇರಿದಂತೆ ಇಬ್ಬರ ಶವಗಳು ಮಂಗಳವಾರ ದಕ್ಷಿಣ ಕನ್ನಡ ಜಿಲ್ಲೆಯ ಕಾಣಿಯೂರು ಬಳಿ ಬೈತಡ್ಕ ಹೊಳೆಯಲ್ಲಿ ಪತ್ತೆಯಾಗಿವೆ.



ಕೊಡಗು ಜಿಲ್ಲೆಯ ಕೊಯನಾಡಿನಲ್ಲಿ ತೆರೆದಿರುವ ಕಾಳಜಿ ಕೇಂದ್ರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಗಳವಾರ ಭೇಟಿ ನೀಡಿ ಸಂತ್ರಸ್ತರ ಯೋಗಕ್ಷೇಮ ವಿಚಾರಿಸಿದರು. ಸಚಿವ ಆರ್‌. ಅಶೋಕ ಇದ್ದರು

ಸಂಚಾರ ಬಂದ್: ಜೊಯಿಡಾ ತಾಲ್ಲೂಕಿನ ಅಣಶಿ ಘಟ್ಟದಲ್ಲಿ ರಾಜ್ಯ ಹೆದ್ದಾರಿ 34ರ ಮೇಲೆ ಪದೇಪದೇ ಭೂ ಕುಸಿತವಾಗುತ್ತಿದೆ. ಹೀಗಾಗಿ, ಎಲ್ಲ ರೀತಿಯ ವಾಹನಗಳ ಸಂಚಾರವನ್ನು ಜಿಲ್ಲಾಡಳಿತ ನಿಷೇಧಿಸಿದೆ.

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಭಾರಿ ಮಳೆಯಿಂದಾಗಿ ಬೆಳಗಾವಿ ಜಿಲ್ಲೆಯಲ್ಲಿ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಪರಿಣಾಮ, ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಬಳಿಯ ದತ್ತ ಮಂದಿರ, ಯಕ್ಸಂಬಾ ಸಮೀಪದ ಮುಲ್ಲಾನ್ಕಿಯ ಮನ್ಸೂರ್‌ವಲಿ ದರ್ಗಾ ಜಲಾವೃತವಾಗಿವೆ. ಜಿಲ್ಲೆಯಲ್ಲಿ ಒಟ್ಟಾರೆ 117 ಹೆಕ್ಟೇರ್ ಭತ್ತದ ಗದ್ದೆ ಜಲಾವೃತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊಡಗು ಜಿಲ್ಲೆಯಲ್ಲಿ ಅತಿವೃಷ್ಟಿ ಸಂತ್ರಸ್ತರಿಗಾಗಿ ಒಟ್ಟು ಎರಡು ಕಾಳಜಿ ಕೇಂದ್ರಗಳನ್ನು ತೆರೆದಿದ್ದು, 84 ಜನರು ಆಶ್ರಯ ಪಡೆದಿದ್ದಾರೆ.

ಜಲಾಶಯದಿಂದ ನೀರು: ಆಲಮಟ್ಟಿ ಮತ್ತು ತುಂಗಭದ್ರಾ ಜಲಾಶಯ ಭರ್ತಿಯಾಗಿವೆ. ಆಲಮಟ್ಟಿಯಿಂದ 1 ಲಕ್ಷ ಕ್ಯುಸೆಕ್, ತುಂಗಭದ್ರಾದಿಂದ 85 ಸಾವಿರ ಕ್ಯುಸೆಕ್ ನೀರು ಹೊರಬಿಡಲಾಗುತ್ತಿದೆ.

‘ಪರಿಹಾರಕ್ಕೆ ಹಣದ ಕೊರತೆಯಿಲ್ಲ’

ಮೈಸೂರು/ಮಡಿಕೇರಿ: ‘ಮಳೆಯಿಂದ ಆಗಿರುವ ಭೂಕುಸಿತ, ಬೆಳೆ ಮತ್ತು ಜೀವಹಾನಿ ಕುರಿತು ಸಮೀಕ್ಷೆ ಹಾಗೂ ಪರಿಹಾರ ಕಾರ್ಯ ಭರದಿಂದ ಸಾಗಿದೆ. ಪರಿಹಾರ ಕಾರ್ಯಗಳಿಗೆ ಹಣದ ಕೊರತೆಯಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅತಿವೃಷ್ಟಿ ಬಾಧಿತ ಪ್ರದೇಶಗಳಿಗೆ ಪ್ರವಾಸ ತೆರಳುವ ಮುನ್ನ ಮೈಸೂರಿನಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಕೇಂದ್ರ ವಿಪತ್ತು ನಿರ್ವಹಣಾ ಪ್ರಾಧಿಕಾರದಲ್ಲಿ ₹ 739 ಕೋಟಿ ಲಭ್ಯವಿದೆ’ ಎಂದರು.

‘ಸಮೀಕ್ಷೆ ಕಾರ್ಯದ ಬಳಿಕ ಕೇಂದ್ರಕ್ಕೆ ವರದಿ ಸಲ್ಲಿಸುವ ಬಗ್ಗೆ ತೀರ್ಮಾನಿಸಲಾಗುವುದು’ ಎಂದು ತಿಳಿಸಿದರು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಪಿಎಸ್‌ಐ ಅಕ್ರಮ: ಗಣಪತಿ ಭಟ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಶಿರಸಿ: ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕು ಹೇರೂರಿನ ಗಣಪತಿ ಬಿ. ಭಟ್ (59) ಅವರನ್ನು ಸೋಮವಾರ ವಶಕ್ಕೆ ಪಡೆದಿದ್ದ ಸಿಐಡಿ ಪೊಲೀಸರು, ಬೆಂಗಳೂರಿಗೆ ಕರೆತಂದು ವಿಚಾರಣೆ ನಡೆಸಿ ಮಂಗಳವಾರ ಸಂಜೆ ಬಿಟ್ಟು ಕಳುಹಿಸಿದ್ದಾರೆ.



‘ಲಕ್ಷಾಂತರ ರೂಪಾಯಿ ನೀಡಿ ಅಕ್ರಮವಾಗಿ ಆಯ್ಕೆಯಾಗಿದ್ದ ಇಬ್ಬರು ಅಭ್ಯರ್ಥಿಗಳನ್ನು ಇತ್ತೀಚೆಗೆ ಬಂಧಿಸಲಾಗಿತ್ತು. ಅವರಿಬ್ಬರು ಗಣಪತಿ ಭಟ್ ಹೆಸರು ಪ್ರಸ್ತಾಪಿಸಿದ್ದರು. ಇದಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಲು ಗಣಪತಿ ಭಟ್ ಅವರನ್ನು ಕರೆತರಲಾಗಿತ್ತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ಸಿದ್ದಾಪುರದ ನೆಲೆಮಾಂವ ಸೇವಾ ಸಹಕಾರ ಸಂಸ್ಥೆಯ ಅಧ್ಯಕ್ಷರಾಗಿರುವ ಗಣಪತಿ, ರಾಜಕೀಯ ಮುಖಂಡರು ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಗುರುತಿಸಿಕೊಂಡಿದ್ದರು. ಕೆಲ ಪಿಎಸ್‌ಐ ಅಭ್ಯರ್ಥಿಗಳಿಗೆ ಮಧ್ಯವರ್ತಿಯಾಗಿ ಪೊಲೀಸ್ ಅಧಿಕಾರಿಗಳ ಜೊತೆ ಸಂಪರ್ಕವಿಟ್ಟುಕೊಂಡು ಹಣ ನೀಡಿದ್ದ ಮಾಹಿತಿಯೂ ಇತ್ತು. ಆದರೆ, ಪುರಾವೆಗಳು ಇರಲಿಲ್ಲ. ಇದೀಗ ಗಣಪತಿ ವಿಚಾರಣೆ ನಡೆಸಿ ಹೇಳಿಕೆ ಪಡೆದು ಕಳುಹಿಸಲಾಗಿದೆ. ಅಗತ್ಯವಿದ್ದರೆ, ಪುನಃ ವಿಚಾರಣೆಗೆ ಕರೆಸಲಾಗುವುದು’ ಎಂದೂ ತಿಳಿಸಿವೆ.

‘ನನ್ನ ಕಚೇರಿಯ ಸಿಬ್ಬಂದಿಯಲ್ಲ’

ಬೆಂಗಳೂರು: ‘ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಿಐಡಿ ಪೊಲೀಸರು ವಶಕ್ಕೆ ಪಡೆದಿರುವ ಶಿರಸಿಯ ಗಣಪತಿ ಭಟ್ ನನ್ನ ಕಚೇರಿಯ ಸಿಬ್ಬಂದಿಯಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದ್ದಾರೆ.

‘ಪೊಲೀಸರ ವಶದಲ್ಲಿರುವ ವ್ಯಕ್ತಿ ಸಿದ್ದಾಪುರದವರು. ಆ ವ್ಯಕ್ತಿ ದಲ್ಲಾಳಿ ಕೆಲಸ ಮಾಡಿಕೊಂಡಿದ್ದರು. ಗಣಪತಿ ಹೆಗಡೆ ಎಂಬುವವರು ನನ್ನ ಆಪ್ತ ಕಾರ್ಯದರ್ಶಿಯಾಗಿದ್ದಾರೆ’ ಎಂದು ಪ್ರತಿಕ್ರಿಯಿಸಿದ್ದಾರೆ.

10ನೇ ಪುಟ ನೋಡಿ

ಈದ್ಗಾ ಮೈದಾನಕ್ಕೆ ಜಯಚಾಮರಾಜೇಂದ್ರ ಒಡೆಯರ್ ಹೆಸರಿಡಲು ಸಾರ್ವಜನಿಕರ ಒತ್ತಾಯ

ಚಾಮರಾಜಪೇಟೆ ಬಂದ್‌ಗೆ ಪೂರ್ಣ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್ಗಾ ಮೈದಾನವನ್ನು ಸಾರ್ವಜನಿಕ ಆಟದ ಮೈದಾನವನ್ನಾಗಿ ಉಳಿಸಿಕೊಳ್ಳಬೇಕೆಂದು ಆಗ್ರಹಿಸಿ ಚಾಮರಾಜಪೇಟೆ ನಾಗರಿಕರ ಒಕ್ಕೂಟಗಳ ವೇದಿಕೆ ಕರೆ ನೀಡಿದ್ದ ಸ್ವಯಂ ಪ್ರೇರಿತ ಬಂದ್‌ಗೆ ಚಾಮರಾಜಪೇಟೆಯಲ್ಲಿ ಮಂಗಳವಾರ ಪೂರ್ಣ ಬೆಂಬಲ ವ್ಯಕ್ತವಾಯಿತು.

ಸಿರ್ಸಿ ವೃತ್ತದಿಂದ ಚಾಮರಾಜಪೇಟೆ ಮಕ್ಕಳ ಕೂಟದವರೆಗೂ ಎಲ್ಲ ರೀತಿಯ ವಾಣಿಜ್ಯ ಚಟುವಟಿಕೆಗಳು ಸ್ಥಗಿತಗೊಂಡಿದ್ದವು. ಈ ಭಾಗದಲ್ಲಿ ಮಂಗಳವಾರ ಬೆಳಿಗ್ಗೆ 8ರಿಂದ ಸಂಜೆ 5ರ ವರೆಗೆ ಹೋಟೆಲ್, ವಾಣಿಜ್ಯ ಮಳಿಗೆಗಳು, ಶಾಲೆಗಳು, ಟ್ರಾನ್ಸ್‌ಪೋರ್ಟ್ ಕಚೇರಿಗಳು ಸೇರಿ ಎಲ್ಲ ರೀತಿಯ ಮಳಿಗೆಗಳು ಬಂದ್ ಆಗಿದ್ದವು. ಆಸ್ಪತ್ರೆ, ಔಷಧಾಲಯ, ಹಾಲು–ತರಕಾರಿ ಮಳಿಗೆಗಳು ಎಂದಿನಂತಿದ್ದವು. ಬೀದಿ ಬದಿ ವ್ಯಾಪಾರವೂ ಇರಲಿಲ್ಲ.

ಚಾಮರಾಜಪೇಟೆಯ 30ಕ್ಕೂ ಹೆಚ್ಚು ಸಂಘಟನೆಗಳು ಈ ಬಂದ್‌ಗೆ ಕರೆ ನೀಡಿದ್ದವು. ಹೋಟೆಲ್, ಮಳಿಗೆಗಳು ಮಂಗಳವಾರ ಬಾಗಿಲು ತೆರೆಯಲಿಲ್ಲ.

ಸಂಘಟನೆಗಳ ಸದಸ್ಯರು ಈದ್ಗಾ ಮೈದಾನದ ಬಳಿ ಸೇರಿಕೊಂಡಿದ್ದರು. 'ಮೈದಾನವನ್ನು ಸಾರ್ವಜನಿಕ ಸ್ವತ್ತಾಗಿಯೇ ಉಳಿಸಬೇಕು. ಜಯಚಾಮರಾಜೇಂದ್ರ ಒಡೆಯರ್ ಹೆಸರಿಡಬೇಕು. ಗಣೇಶೋತ್ಸವ ಸೇರಿದಂತೆ ಎಲ್ಲ ರೀತಿಯ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶ ಮಾಡಿಕೊಡಬೇಕು. ರಾಷ್ಟ್ರ, ರಾಜ್ಯ ಧ್ವಜಾರೋಹಣ ನೆರವೇರಿಸಬೇಕು' ಎಂದು ಆಗ್ರಹಿಸಿದರು. ವೇದಿಕೆ ಅಧ್ಯಕ್ಷ ರಾಮೇಗೌಡ, ಬಿಬಿಎಂಪಿ ಮಾಜಿ ಸದಸ್ಯ ಬಿ.ವಿ. ಗಣೇಶ್ ಸೇರಿದಂತೆ ಹಲವು ಸಂಘಟನೆಗಳ ಸದಸ್ಯರಿದ್ದರು.

ನೂರಾರು ಜನ ಸೇರಿಕೊಂಡಿದ್ದರಿಂದ ಕೆಲವು ಸಮಯ ಬಿಗುವಿನ ವಾತಾವರಣ ಸೃಷ್ಟಿಯಾಯಿತು. ಎಲ್ಲರೂ 'ಮೈದಾನ ಸಾರ್ವಜನಿಕ-ರದ್ದು' ಎಂದು ಕೂಗುತ್ತಿದ್ದರು. ಈ ಸಂದರ್ಭದಲ್ಲಿ ಹಲವರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ನಂತರ ಪರಿಸ್ಥಿತಿ ತಿಳಿಗೊಂಡಿತು.

ಸಂಚಾರದ ದಟ್ಟಣೆ: ಮಂಗಳವಾರ ಮಧ್ಯಾಹ್ನ 1 ಗಂಟೆಯವರೆಗೂ ಮೈದಾನದ ಬಳಿ ಹೆಚ್ಚು ಜನರು ಇದ್ದಿದ್ದರಿಂದ, ವಾಹನ ಸಂಚಾರ ನಿಧಾನಗತಿಯಲ್ಲಿತ್ತು. ಮೈಸೂರು ರಸ್ತೆ ಹಾಗೂ ಚಾಮರಾಜಪೇಟೆ ಕಡೆಯ ರಸ್ತೆಗಳಲ್ಲಿ ವಾಹನ ದಟ್ಟಣೆ ಇತ್ತು.

ಮಕ್ಕಳ ಆಟ: ಚಾಮರಾಜಪೇಟೆ ಬಂದ್ ಸಂದರ್ಭದಲ್ಲಿ ಈದ್ಗಾ ಮೈದಾನಕ್ಕೆ ಯಾರೂ ಪ್ರವೇಶಿಸದಂತೆ ಪೊಲೀಸರು ಕ್ರಮ ವಹಿಸಿದ್ದರು. ಮಧ್ಯಾಹ್ನದ ನಂತರ ಪೊಲೀಸರ ಬಂದೋಬಸ್ತ್ ನಡುವೆಯೇ ಮಕ್ಕಳು ಆಟವಾಡುತ್ತಿದ್ದದ್ದು ಗಮನಸೆಳೆಯಿತು. ಬಂದ್ ಬಗ್ಗೆ ಮಾಹಿತಿ ಇಲ್ಲದ ಕೆಲವರು ಎಂದಿನಂತೆ ಕೆಲವು ಹೋಟೆಲ್‌ಗಳಲ್ಲಿ ಊಟ ಮಾಡಲು ಬಂದಾಗ ಅವರಿಗೆ ನಿರಾಸೆಯಾಗಿತ್ತು. 'ಪಾದರಾಯನಪುರ ದಾಟಿ ಹೋದರೆ ಅಥವಾ ಬಸವನಗುಡಿ ಕಡೆಗೆ ಹೋದರೆ ಊಟ ಸಿಗುತ್ತೆ' ಎಂದು ಸ್ಥಳೀಯರು ಹೇಳಿ ಕಳುಹಿಸಿದರು.

ಮನವಿ: 'ಚಾಮರಾಜಪೇಟೆ ನಾಗರಿಕರ ಒಕ್ಕೂಟಗಳ ವೇದಿಕೆ ವತಿಯಿಂದ ಸಂಸದರ ನೇತೃತ್ವದಲ್ಲಿ ಈ ವಾರದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಲಾಗುವುದು. ಸಾರ್ವಜನಿಕ ಸ್ವತ್ತಾಗಿ ಉಳಿಸಿಕೊಂಡು, ಮೈದಾನಕ್ಕೆ ನಾಮಕರಣ ಮಾಡಲು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಲಾಗುತ್ತದೆ ಎಂದು ವೇದಿಕೆ ಸದಸ್ಯ ಶಶಾಂಕ್ ತಿಳಿಸಿದರು.



ಚಾಮರಾಜಪೇಟೆ ನಾಗರಿಕರ ಒಕ್ಕೂಟಗಳ ವೇದಿಕೆ ಸದಸ್ಯರು ಮಂಗಳವಾರ ಈದ್ಗಾ ಮೈದಾನ ಬಳಿ ಬೇಡಿಕೆ ಈಡೇರಿಸಲು ಆಗ್ರಹಿಸಿದರು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.



ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಕಂಡುಬಂದ ಪಾರಿವಾಳಗಳ ಹಾರಾಟ



ಚಾಮರಾಜಪೇಟೆಯಲ್ಲಿ ಸ್ವಯಂ ಪ್ರೇರಿತವಾಗಿ ಬಂದ್ ಆಗಿದ್ದ ಅಂಗಡಿಗಳು


ಪೊಲೀಸರ ವಶಕ್ಕೆ

ಈದ್ಗಾ ಮೈದಾನದಲ್ಲಿ ಒಂದಷ್ಟು ಜನರ ಗುಂಪು ಘೋಷಣೆಯನ್ನು ಕೂಗಿದರು. ಮೈದಾನದತ್ತ ಗುಂಪಾಗಿ ಹೋಗಲು ಮುಂದಾದಾಗ ಪೊಲೀಸರು ಅವರನ್ನು ವಶಕ್ಕೆ ಪಡೆದರು. ಇದು ಎರಡು–ಮೂರು ಬಾರಿ ನಡೆಯಿತು. ಒಟ್ಟು 41 ಜನರನ್ನು ಪೊಲೀಸರು ವಶಕ್ಕೆ ಪಡೆದು, ಸಂಜೆ ಬಿಡುಗಡೆ ಮಾಡಿದರು.

ಸುದ್ದಿ 2 ನಿಮಿಷ

ನಿರ್ಮಾಪಕ ಕಿಶೋರ್‌ಗೆ ಚಿಕಿತ್ಸೆ ಮುಂದುವರಿಕೆ

ಬೆಂಗಳೂರು: ಇತ್ತೀಚೆಗೆ ಶಸ್ತ್ರ-ಚಿಕಿತ್ಸೆಗೆ ಒಳಗಾಗಿದ್ದ ಚಲನಚಿತ್ರ ನಿರ್ಮಾಪಕ ಕಿಶೋರ್ ಪತ್ತಿಕೊಂಡ ಅವರಿಗೆ ವೈದ್ಯಕೀಯ ತೀವ್ರ ನಿಗಾ ಘಟಕದಲ್ಲಿ (ಎಂಐಸಿಯು) ಚಿಕಿತ್ಸೆ ಮುಂದುವರಿದಿದೆ ಎಂದು ಅಪೋಲೊ ಆಸ್ಪತ್ರೆ ತಿಳಿಸಿದೆ.



ಅಧಿಕ ರಕ್ತದೊತ್ತಡದಿಂದ ಪ್ರಜ್ಞಾಹೀನ ಸ್ಥಿತಿಯಲ್ಲಿ ಇದೇ 4ರಂದು ಅವರು ಆಸ್ಪತ್ರೆಗೆ ದಾಖಲಾಗಿದ್ದರು. ತಲೆಯಲ್ಲಿ ರಕ್ತಸ್ರಾವ ಆಗಿರುವುದನ್ನು ಗುರುತಿಸಿದ ವೈದ್ಯರು, ಅವರಿಗೆ ಶಸ್ತ್ರಚಿಕಿತ್ಸೆ ನಡೆಸಿ, ಐಸಿಯುನಲ್ಲಿ ಇರಿಸಿದ್ದರು. ವೆಂಟಿಲೇಟರ್ ಸಂಪರ್ಕದೊಂದಿಗೆ ಚಿಕಿತ್ಸೆ ಪಡೆಯುತ್ತಿದ್ದ ಅವರು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ ಎಂದು ಆಸ್ಪತ್ರೆ ಹೇಳಿದೆ.

ಅವರಿಗೆ ವೆಂಟಿಲೇಟರ್ ಸಂಪರ್ಕ ತೆಗೆಯಲಾಗಿದೆ. ಸದ್ಯ ಅವರು ವೈದ್ಯಕೀಯ ಆಮ್ಲಜನಕ ಸಂಪರ್ಕದಲ್ಲಿದ್ದಾರೆ. ಫಿಸಿಯೋಥೆರಪಿಗೆ ಒಳಗಾಗಿರುವ ಅವರು, ಚಿಕಿತ್ಸೆಗೆ ಸ್ಪಂದಿಸುತ್ತಿ-ದ್ದಾರೆ ಎಂದು ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

ಸಿದ್ದರಾಮಯ್ಯಗೆ ಸಂವಿಧಾನವೇ ಪಂಚಾಂಗ: ಶಿವಣ್ಣ ತಿರುಗೇಟು

ಬೆಂಗಳೂರು: 'ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಅಂಬೇಡ್ಕರ್‌ರವರ ಸಂವಿಧಾನವೇ ಪಂಚಾಂಗ. ಬಿಜೆಪಿ ಸೇರಿರುವ ವಿ. ಶ್ರೀನಿವಾಸ್ ಪ್ರಸಾದ್ ಬೇಕಿದ್ದರೆ ಒಂಟಿಕೊಪ್ಪಲು ಪಂಚಾಂಗ ಆಶ್ರಯಿಸಲಿ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಶಿವಣ್ಣ ತಿರುಗೇಟು ನೀಡಿದ್ದಾರೆ.

'ಒಂಟಿಕೊಪ್ಪಲು ಪಂಚಾಂಗದಲ್ಲಿ ಸಿದ್ದರಾಮೋತ್ಸವ ಸೇರಿಸಲಿ' ಎಂದು ಬಿಜೆಪಿ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಅವರು ಚಾಮರಾಜನಗರದಲ್ಲಿ ಸೋಮವಾರ ನೀಡಿದ್ದ ಹೇಳಿಕೆಗೆ ಪ್ರತಿಕ್ರಿಯಿಸಿದ ಶಿವಣ್ಣ, 'ಬಿಜೆಪಿ ಸೇರಿ ಆರೆಸ್ಸೆಸ್ ಚಡ್ಡಿ ತೊಟ್ಟಿರುವ ಅವರಿಗೆ ಸಂವಿಧಾನದ ಅರ್ಥವೇ ಗೊತ್ತಿಲ್ಲ. ಗೊತ್ತಿದ್ದರೆ, ಸಂವಿಧಾನದ ಮೌಲ್ಯಗಳಿಗೆ ಸದಾ ಬದ್ಧರಾಗಿರುವ ಸಿದ್ದರಾಮಯ್ಯ ವಿರುದ್ಧ ಇಂಥ ಹೇಳಿಕೆ ನೀಡುತ್ತಿರಲಿಲ್ಲ' ಎಂದಿದ್ದಾರೆ.

'ಸಿದ್ದರಾಮಯ್ಯ ಅವರ ಸೋಲಿನ ಬಗ್ಗೆ ಮಾತನಾಡುವ ನೈತಿಕತೆಯನ್ನು ಶ್ರೀನಿವಾಸ್ ಪ್ರಸಾದ್ ಉಳಿಸಿಕೊಂಡಿಲ್ಲ. ಏಕೆಂದರೆ, ಎಲ್ಲರೂ ಸೇರಿಕೊಂಡು ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ರೂಪಿಸಿ, ಸೋಲಿಸಿದ್ದರು' ಎಂದಿದ್ದಾರೆ.

ವಸತಿನಿಲಯಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿವಾನ್‌ಸರ್‌ಕೆ.ಪಿ.ಪುಟ್ಟಣ್ಣಶೆಟ್ಟಿ ವೀರಶೈವ ಉಚಿತ ವಿದ್ಯಾರ್ಥಿ ನಿಲಯವು 2022–23ನೇ ಶೈಕ್ಷಣಿಕ ಸಾಲಿನ ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ವಿವಿಧ ತಾಂತ್ರಿಕ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ವೀರಶೈವ ವಿದ್ಯಾರ್ಥಿಗಳು ಅಗಸ್ಟ್ 15ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ www.kppchostel.org, 9611989795ಗೆ ಸಂಪರ್ಕಿಸಿ.

ನವೀಕರಣಕ್ಕೆ ಕಾದಿದೆ ರಸೆಲ್ ಮಾರುಕಟ್ಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಒಂದಾದ ಶಿವಾಜಿನಗರದ ರಸೆಲ್ ಮಾರುಕಟ್ಟೆ ನವೀಕರಣಕ್ಕಾಗಿ ಕಾದು ನಿಂತಿದೆ.

ಅತ್ಯಂತ ಜನನಿಬಿಡ ಪ್ರದೇಶ ಆಗಿರುವ ಶಿವಾಜಿನಗರದಲ್ಲಿ ರಸೆಲ್ ಮಾರುಕಟ್ಟೆ ತನ್ನದೇ ಆದ ವಿಶೇಷ ಆಕರ್ಷಣೆಯನ್ನು ಇಂದಿಗೂ ಉಳಿಸಿಕೊಂಡಿದೆ. ಹೂವು, ಹಣ್ಣು, ತರಕಾರಿ, ಮಾಂಸ ಮತ್ತು ಮೀನಿನ ಅಂಗಡಿಗಳನ್ನು ಒಳಗೊಂಡಿದೆ. ಪ್ರವೇಶದ್ವಾರದ ಬಳಿ ಹೂವಿನ ಅಂಗಡಿಗಳಿದ್ದರೆ, ಕೊನೆಯಲ್ಲಿ ಮೀನಿನ ಅಂಗಡಿಗಳಿವೆ. ಒಟ್ಟಾರೆ 484 ಅಂಗಡಿಗಳು ಮಾರುಕಟ್ಟೆಯೊಳಗೆ ವ್ಯಾಪಾರ ವಹಿವಾಟು ನಡೆಸುತ್ತಿವೆ.

1857ರಲ್ಲಿ ನಿರ್ಮಾಣವಾದ ಶಿವಾಜಿನಗರ ಮಾರುಕಟ್ಟೆ 1927ರಲ್ಲಿ ವಿಸ್ತರಣೆಗೊಂಡಿತು. ಮೊದಲಿಗೆ ಅರ್ಧದಷ್ಟು ಮಾತ್ರ ಇದ್ದ ಮಾರುಕಟ್ಟೆ ಕಟ್ಟಡ 1927ರಲ್ಲಿ ಮುಂಭಾಗದ ಕಟ್ಟಡ ನಿರ್ಮಾಣವಾಯಿತು. ಕಟ್ಟಡದಲ್ಲಿ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿ ಕಾಲಕಾಲಕ್ಕೆ ನಡೆದಿದ್ದರೂ, ಕಳೆದ 10 ವರ್ಷಗಳಿಂದ ಯಾವುದೇ ಕಾಮಗಾರಿ ನಡೆದಿಲ್ಲ.

'ಈ ಮಾರುಕಟ್ಟೆ ನವೀಕರಣಕ್ಕೆ ಜೆಡಿಎಸ್–ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ₹16 ಕೋಟಿ ಅನುದಾನವನ್ನು ಸರ್ಕಾರ ನೀಡಿತ್ತು. ಸರ್ಕಾರ ಬದಲಾಗಿ, ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಆ ಅನುದಾನ ವಾಪಸ್ ಪಡೆದುಕೊಂಡಿದ್ದರಿಂದ ಮಾರುಕಟ್ಟೆ ನವೀಕರಣ ಪ್ರಸ್ತಾವ ಅಲ್ಲೇ ಉಳಿದುಕೊಂಡಿದೆ' ಎನ್ನುತ್ತಾರೆ ಇಲ್ಲಿನ ವ್ಯಾಪಾರಿಗಳು.



ಮೊಹಮದ್ ಪರ್ವೇಜ್

'ಮಾರುಕಟ್ಟೆ ಸುತ್ತಲೂ ಸ್ಮಾರ್ಟ್ ಸಿಟಿ ಯೋಜನೆಯಡಿ ಕಾಮಗಾರಿ ನಡೆಯುತ್ತಿದೆ. ಈ ಕಾಮಗಾರಿಗಳು ಮುಗಿದ ಬಳಿಕ ರಸೆಲ್ ಮಾರುಕಟ್ಟೆ ನವೀಕರಣ ಯೋಜನೆ ಕೈಗೆತ್ತಿಕೊಳ್ಳಲಾಗುವುದು ಎಂದು ಶಾಸಕ ರಿಜ್ವಾನ್ ಅರ್ಷದ್ ಅವರು ಭರವಸೆ ನೀಡಿದ್ದಾರೆ. ತಾತ್ಕಾಲಿಕವಾಗಿ ಬೇಕಿರುವ ರಸ್ತೆ ಸೌಕರ್ಯ ಕಲ್ಪಿಸಲು ಪ್ರಯತ್ನಿಸಿದ್ದಾರೆ' ಎಂದು ರಸೆಲ್ ಮಾರುಕಟ್ಟೆ ತರಕಾರಿ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮೊಹಮದ್ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

'ಅವರು ಶಾಸಕರಾದ ಬಳಿಕ ಶಿವಾಜಿನಗರದಲ್ಲಿ ಅಭಿವೃದ್ಧಿ ಕಾಮಗಾರಿಗಳು ಚುರುಕುಗೊಂಡಿವೆ. ಹಲವು ವರ್ಷಗಳಿಂದ ಇರುವ ಸಮಸ್ಯೆಗಳನ್ನು ಸರಿಪಡಿಸಲು ಇನ್ನಷ್ಟು ಕಾಲಾವಕಾಶ ಬೇಕಾಗುತ್ತದೆ' ಎಂದರು.

'ರಸೆಲ್ ಮಾರುಕಟ್ಟೆಗೆ ಸದ್ಯ ವಾಹನಗಳು ಬಂದು ಹೋಗಲು ರಸ್ತೆ ಸಮಸ್ಯೆ ಇದೆ. ಕೋವಿಡ್ ಬಳಿಕ ವ್ಯಾಪಾರ–ವಹಿವಾಟು ಹಿಂದಿಗಿಂತ ಕಡಿಮೆಯೇ ಇದೆ. ರಸ್ತೆ ಬದಿಯಲ್ಲಿ ವ್ಯಾಪಾರ–ವಹಿವಾಟು ನಡೆಸಲು ಅವಕಾಶ ನೀಡಿರುವುದರಿಂದ ಜನ ಇಲ್ಲಿಗೆ ಬರುವುದು ಕಡಿಮೆಯಾಗಿದೆ' ಎಂದು ತಿಳಿಸಿದರು.



ಶಿವಾಜಿನಗರದ ರಸೆಲ್ ಮಾರುಕಟ್ಟೆ – ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್



ರಸೆಲ್ ಮಾರುಕಟ್ಟೆ ನವೀಕರಣಕ್ಕೆ ನೀಡಿದ್ದ ₹16 ಕೋಟಿ ಅನುದಾನವನ್ನು ಬಿಜೆಪಿ ಸರ್ಕಾರ ವಾಪಸ್ ಪಡೆದಿದೆ. ಮುಂದಿನ ಅವಧಿಯಲ್ಲಿ ಅನುದಾನ ತಂದು ಮಾರುಕಟ್ಟೆ ದುರಸ್ತಿಗೊಳಿಸಲಾಗುವುದು

ರಿಜ್ವಾನ್ ಅರ್ಷದ್
ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ

ಶಿವಾಜಿನಗರ: 'ಜನಸ್ಪಂದನ' ಶನಿವಾರ

ಜನಸ್ಪಂದನ ಸಿಟಿಜನ್ಸ್ ಫಾರ್ ಚೇಂಜ್

ಶಿವಾಜಿನಗರ ವಿಧಾನಸಭಾ ಕ್ಷೇತ್ರದ ಜನರ ಅಹವಾಲು ಆಲಿಸುವ ಸಲುವಾಗಿ 'ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹವು ಶನಿವಾರ (ಇದೇ 16) ವಸಂತ ನಗರದ ತಿಮ್ಮಯ್ಯ ರಸ್ತೆಯ ಕಾವೇರಪ್ಪ ಬಡಾವಣೆಯ ಬಂಜಾರ ಭವನದಲ್ಲಿ 'ಜನಸ್ಪಂದನ' ಕಾರ್ಯಕ್ರಮ ಏರ್ಪಡಿಸಿದೆ.

ಈ ಕ್ಷೇತ್ರದ ಶಾಸಕ ರಿಜ್ವಾನ್ ಅರ್ಷದ್ ಹಾಗೂ ಬಿಬಿಎಂಪಿ, ಜಲಮಂಡಳಿ, ಬಿಡಿಎ, ಬೆಸ್ಕಾಂ, ಪೊಲೀಸ್ ಇಲಾಖೆಗಳ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಾರ್ವಜನಿಕರ ಅಹವಾಲು ಆಲಿಸಲಿದ್ದಾರೆ.

ಆಸಕ್ತರು ಬೆಳಿಗ್ಗೆ 9ರಿಂದ ಸ್ಥಳದಲ್ಲೇ ಹೆಸರು ನೋಂದಾಯಿಸಬಹುದು. ಮೊದಲು ನೋಂದಣಿ ಮಾಡಿಸಿದವರಿಗೆ ಆದ್ಯತೆ. ಬೆಳಿಗ್ಗೆ 10 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ.

ನಗರದಲ್ಲಿ ಇಂದು

ಸ್ಥಳೀಯ ಔಷಧೀಯ ಸಸ್ಯಗಳ ಸಂರಕ್ಷಣೆ ಕುರಿತು ವಿಚಾರಸಂಕಿರಣ: ಅತಿಥಿಗಳು: ಲಿಂಗರಾಜ ಗಾಂಧಿ, ಸುದರ್ಶನ್ ಜಿ.ಎ., ಅನಿತಾ ಎಸ್. ಅರೆಕಲ್, ಶ್ರೀಧರ್ ಸಿ.ಎನ್., ವಿ. ಲೋಕೇಶ್, ರಘು.ಜಿ.ಪಿ., ವಿ.ಆರ್. ದೇವರಾಜ್, ಆಯೋಜನೆ: ಕರ್ನಾಟಕ ರಾಜ್ಯ ಔಷಧೀಯ ಸಸ್ಯಗಳ ಪ್ರಾಧಿಕಾರ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಸ್ಯ ವಿಜ್ಞಾನ ವಿಭಾಗ, ಸ್ಥಳ: ಜ್ಞಾನಜ್ಯೋತಿ ಸೆಮಿನಾರ್ ಹಾಲ್, ಸೆಂಟ್ರಲ್ ಕಾಲೇಜು, ಬೆಳಿಗ್ಗೆ 10

ನ್ಯಾಯಾಂಗ ಮತ್ತು ಮಾಧ್ಯಮ ವಿಷಯದ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ: ಸಂಪನ್ಮೂಲ ವ್ಯಕ್ತಿಗಳು: ಎನ್.ಕೆ. ಸುಧೀಂದ್ರ ರಾವ್, ಎಸ್.ಎನ್. ನಾಗರಾಜ ರೆಡ್ಡಿ, ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 11

ಮಹಾಮೇರು ಪಂಚಗಣಪತಿ ದೇವರ 13ನೇ ವಾರ್ಷಿಕೋತ್ಸವ ಹಾಗೂ ಗುರು ಪೂರ್ಣಿಮೆ ಕಾರ್ಯಕ್ರಮ: ಸಾನ್ನಿಧ್ಯ: ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಎಚ್.ಡಿ. ಕುಮಾರಸ್ವಾಮಿ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಕೆಂಗೇರಿ, ಬೆಳಿಗ್ಗೆ 11.30

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಭಕ್ತಿ ಗೀತೆಗಳು: ಗಾಯನ: ಧನಂಜಯ್ ಹೆಗಡೆ, ವಿನಾಯಕ್ ತೊರವಿ, ತಬಲಾ: ಗುರುಮೂರ್ತಿ ವೈದ್ಯ, ಹಾರ್ಮೋನಿಯಂ: ಅಶ್ವಿನ್ ವಾಲವಾಲ್ಕರ್, ಮಂಜೀರಾ: ರಚಿತ್ ಹೆಗಡೆ, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಸಂಜೆ 5

ಭಜನೆ, ಪ್ರವಚನ ಮತ್ತು ಹರಿನಾಮ ಸಂಕೀರ್ತನೆ: **ಪ್ರಸ್ತುತಿ:** ಸರಸ್ವತಿ ಗಾನ ಮಂಡಲಿ, ಚಿಕ್ಕಲ್ಲಸಂದ್ರ, 'ಭಾಗವತದಲ್ಲಿ ಶ್ರೀಕೃಷ್ಣನ ಮಹಿಮೆ' ಧಾರ್ಮಿಕ ಪ್ರವಚನ: ಕಲ್ಲಾಪುರ ಪವಮಾನಾಚಾರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮಪ್ರಚಾರ ಪರಿಷತ್ ಹಾಗೂ ಬೆಂಗಳೂರು ಕಾಶಿ ಮಠ, ಸ್ಥಳ: ಬೆಂಗಳೂರು ಕಾಶಿ ಮಠ, ಮಲ್ಲೇಶ್ವರ, ಸಂಜೆ 7



ಪವಮಾನಾಚಾರ್

ನಾಳೆಯಿಂದ ಕೃಷಿ ಸಚಿವರ ರಾಷ್ಟ್ರೀಯ ಸಮ್ಮೇಳನ

ಬೆಂಗಳೂರು: ಯಶವಂತಪುರದ ತಾಜ್ ಹೋಟೆಲ್‌ನಲ್ಲಿ ಜುಲೈ 14 ಮತ್ತು 15ರಂದು ವಿವಿಧ ರಾಜ್ಯಗಳ ಕೃಷಿ ಮತ್ತು ತೋಟಗಾರಿಕೆ ಸಚಿವರ ರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ ಆಯೋಜಿಸುತ್ತಿರುವ ಈ ಸಮ್ಮೇಳನದಲ್ಲಿ ಕೇಂದ್ರ ಸಚಿವರಾದ ನರೇಂದ್ರ ಸಿಂಗ್ ತೋಮರ್, ಶೋಭಾ ಕರಂದ್ಲಾಜೆ, ಕೈಲಾಶ್ ಚೌಧರಿ ಭಾಗವಹಿಸುವರು.

ಒಂದು ರಾಷ್ಟ್ರ ಒಂದು ಮಾರುಕಟ್ಟೆ ಪರಿಸರ ವ್ಯವಸ್ಥೆಯ ರಚನೆ, ಡಿಜಿಟಲ್ ಕೃಷಿ, ನೈಸರ್ಗಿಕ ಕೃಷಿ ಸೇರಿದಂತೆ 9 ವಿಷಯಗಳ ಕುರಿತು ಸಮ್ಮೇಳನದಲ್ಲಿ ಚರ್ಚೆಗಳು ನಡೆಯಲಿವೆ. ರೈತರು ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಪಡೆಯಲು, ವ್ಯಾಪಾರ ಮತ್ತು ಮಾರುಕಟ್ಟೆ ಉತ್ತೇಜಿಸಲು ಇ-ನ್ಯಾಮ್ ಪ್ಲಾಟ್‌ಫಾರಂ ವೇದಿಕೆಯನ್ನು ಸಮ್ಮೇಳನದಲ್ಲೇ ಆರಂಭಿಸಲಾಗುತ್ತಿದೆ. ಬಹು ಸಂಖ್ಯೆಯ ಮಾರುಕಟ್ಟೆಗಳು, ಖರೀದಿದಾರರು, ಸೇವಾ ಪೂರೈಕೆದಾರರು ಡಿಜಿಟಲ್ ಮೂಲಕ ರೈತರ ಭಾಗವಹಿಸುವಿಕೆ ಹೆಚ್ಚಿಸಲು ಅವಕಾಶ ನೀಡಲಿದೆ ಎಂದು ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ದೇಶದ ವಿವಿಧ ರಾಜ್ಯಗಳು ಕೃಷಿ ವಲಯದಲ್ಲಿ ಅಳವಡಿಸಿಕೊಂಡಿರುವ ಉತ್ತಮ ಅಂಶಗಳ ಕುರಿತು ಪ್ರತ್ಯೇಕ ಚರ್ಚೆಗಳು ನಡೆಯಲಿವೆ.

ತಿರುಮಲ: 346 ಕೊಠಡಿ ಫೆಬ್ರುವರಿಗೆ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರ ತಿರುಪತಿ ತಿರುಮಲದಲ್ಲಿ ನಿರ್ಮಿಸುತ್ತಿರುವ ಸುಸಜ್ಜಿತ ಕರ್ನಾಟಕ ಭವನದ ಕಾಮಗಾರಿ ಬಿರುಸಿನಿಂದ ಸಾಗಿದ್ದು, 2023ರ ಫೆಬ್ರುವರಿಯಲ್ಲಿ ಭಕ್ತರ ಬಳಕೆಗೆ ಲಭ್ಯವಾಗಲಿದೆ ಎಂದು ತಿರುಪತಿ ತಿರುಮಲ ದೇವಸ್ಥಾನಂ ಟ್ರಸ್ಟ್‌ನ ಸದಸ್ಯರಾಗಿರುವ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಹೇಳಿದರು.

ತಿರುಮಲದಲ್ಲಿ ನಡೆಯುತ್ತಿರುವ ಕಾಮಗಾರಿ ವೀಕ್ಷಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಟ್ಟು 346 ಕೊಠಡಿಗಳು ಮುಂದಿನ ವರ್ಷಾರಂಭಕ್ಕೆ ಭಕ್ತರ ಬಳಕೆಗೆ ಸಿಗಬೇಕು ಎಂಬುದು ಕರ್ನಾಟಕದ ಸರ್ಕಾರದ ಅಪೇಕ್ಷೆ. 3 ಲಕ್ಷ ಚದರಡಿ ವಿಸ್ತೀರ್ಣದಲ್ಲಿ ಸಂಪಿಗೆ, ಸೇವಂತಿಕೆ, ತಾವರೆ ಮತ್ತು ಮಲ್ಲಿಗೆ ಹೆಸರಿನ ನಾಲ್ಕು ಕಟ್ಟಡಗಳು ಈ ಭವನದಲ್ಲಿ ಇರಲಿವೆ' ಎಂದು ವಿವರಿಸಿದರು.

ತಿರುಮಲ ಬೆಟ್ಟದಲ್ಲಿ ಕರ್ನಾಟಕ ಸರ್ಕಾರಕ್ಕೆ ಸೇರಿದ ಸುಮಾರು 7 ಎಕರೆ ಜಾಗವಿದೆ. ಇಲ್ಲಿದ್ದ ಹಳೆಯ ಕಟ್ಟಡವನ್ನು ಕೆಡವಿ ಹೊಸ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಬೇರೆ ಯಾವುದೇ ರಾಜ್ಯವು ಇಷ್ಟು ಬೃಹತ್ ಪ್ರಮಾಣದ ಕಟ್ಟಡವನ್ನು ನಿರ್ಮಿಸುತ್ತಿಲ್ಲ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಜತೆಯಾಗಿ ಶಂಕುಸ್ಥಾಪನೆ ನೆರವೇರಿಸಿದ್ದರು. ಈಗಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಅನುದಾನ ಬಿಡುಗಡೆ ಮಾಡಿದ್ದಾರೆ ಎಂದರು.

ಬೆಟ್ಟದ ಕೆಳಗೆ ತಿರುಪತಿಯಲ್ಲಿಯೂ ಕರ್ನಾಟಕದ ಜಮೀನಿದೆ. ಅಲ್ಲಿಯೂ ಅತಿಥಿಗೃಹ ನಿರ್ಮಿಸಲಾಗುವುದು ಎಂದು ಅವರು ಹೇಳಿದರು.



ತಿರುಮಲದಲ್ಲಿ ನಡೆಯುತ್ತಿರುವ ಕಾಮಗಾರಿ ವೀಕ್ಷಿಸಿದ ಎಸ್‌ಆರ್‌ ವಿಶ್ವನಾಥ್‌ ಬಿಜೆಪಿ ಮಾಧ್ಯಮ ಪ್ರಮುಖ ಕರುಣಾಕರ ಖಾಸಲೆ ಮತ್ತಿತರರು ಇದ್ದರು

ಹೊಸ ಕಟ್ಟಡದ ಕಾಮಗಾರಿ ಮುಗಿದು ಬಳಕೆಗೆ ಲಭ್ಯವಾದರೆ 1800 ಜನರು ವಾಸ್ತವ್ಯ ಹೂಡಬಹುದು. ದೇವಸ್ಥಾನದ ಸಮೀಪವೇ ಭವನ ಇರುವುದರಿಂದ ಭಕ್ತರಿಗೆ ಅನುಕೂಲವಾಗಲಿದೆ

ಎಸ್.ಆರ್. ವಿಶ್ವನಾಥ್, ಟಿಟಿಡಿ ಸದಸ್ಯ


ಸೆನ್ಸೆಕ್ಸ್ 508 ಅಂಶ ಕುಸಿತ

ವಲಯವಾರು ಇಳಿಕೆ (ಬಿಎಸ್‌ಇ)

ಐ.ಟಿ.	1.29
ತಂತ್ರಜ್ಞಾನ	1.21
ಲೋಹ	1.16
ಆಟೊಮೊಬೈಲ್	1.13
ಎಫ್‌ಎಂಸಿಜಿ	1.03
ಬ್ಯಾಂಕ್	0.94
ಬಂಡವಾಳ ಸರಕು	0.91

ಮುಂಬೈ (ಪಿಟಿಐ): ಹೂಡಿಕೆದಾರರು ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್ ಮತ್ತು ಎಫ್‌ಎಂಸಿಜಿ ವಲಯಗಳ ಷೇರು ಮಾರಾಟ ಮುಂದುವರಿಸಿದ ಕಾರಣ ದೇಶದ ಷೇರುಪೇಟೆ ಸೂಚ್ಯಂಕಗಳು ಮಂಗಳವಾರ ಕುಸಿತ ದಾಖಲಿಸಿದವು.

ವಿದೇಶಿ ಬಂಡವಾಳದ ಹೊರಹರಿವು ನಿಂತಿಲ್ಲದಿರುವುದು, ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇನ್ನಷ್ಟು ಕುಸಿತ ಕಂಡಿರುವುದು ಕೂಡ ಸೂಚ್ಯಂಕಗಳ ಕುಸಿತಕ್ಕೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.



ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 508 ಅಂಶ, ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 157 ಅಂಶ ಕುಸಿದವು. ಇನ್ಫೊಸಿಸ್ ಷೇರುಗಳು ಗರಿಷ್ಠ ಪ್ರಮಾಣದ ಕುಸಿತ ಕಂಡವು.

'ಹಣದುಬ್ಬರದ ಅಂಕಿ-ಅಂಶಗಳು ಬಿಡುಗಡೆ ಆಗಿರುವ ಕಾರಣ ಬಡ್ಡಿ ದರ ಹೆಚ್ಚಳದ ಭೀತಿ ಮತ್ತೆ ಕಾಡಲಾರಂಭಿಸಿದೆ. ಹಣದುಬ್ಬರದ ಒತ್ತಡದಿಂದಾಗಿ ಅಮೆರಿಕದಲ್ಲಿ ಬಡ್ಡಿ ದರವು ಇನ್ನಷ್ಟು ಜಾಸ್ತಿಯಾಗುವ ಸಾಧ್ಯತೆ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 2.37ರಷ್ಟು ಕಡಿಮೆ ಆಗಿದ್ದು ಪ್ರತಿ ಬ್ಯಾರಲ್‌ಗೆ 104.6 ಡಾಲರ್‌ಗೆ ತಲುಪಿದೆ.



'ಸಿದ್ದರಾಮಯ್ಯ-75': ಪೂರ್ವಭಾವಿ ಸಭೆ ಇಂದು

ಪ್ರಜಾವಾಣಿ ವಾರ್ತೆ


ಬೆಂಗಳೂರು: ಆಗಸ್ಟ್ 3ರಂದು ದಾವಣಗೆರೆಯಲ್ಲಿ ನಡೆಯಲಿರುವ 'ಸಿದ್ದರಾಮಯ್ಯ- 75- ಅಮೃತ ಮಹೋತ್ಸವ' ಹಿನ್ನೆಲೆಯಲ್ಲಿ ಕಾಂಗ್ರೆಸ್ ಪದಾಧಿಕಾರಿಗಳು, ಜಿಲ್ಲಾ ಘಟಕಗಳ ಅಧ್ಯಕ್ಷರ ಸಭೆ ಬುಧವಾರ ಅರಮನೆ ಮೈದಾನದಲ್ಲಿ ನಡೆಯಲಿದೆ.

ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಈ ಸಭೆಯಲ್ಲಿ ಸಮಾವೇಶದ ರೂಪುರೇಷೆಯ ಕುರಿತು ಚರ್ಚೆ ನಡೆಯಲಿದೆ. ಸಭೆಯಲ್ಲಿ 800ಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆ ಇದೆ. ಸಂಜೆ 6 ಗಂಟೆಗೆ ಏಟ್ರಿಯಾ ಹೋಟೆಲ್‌ನಲ್ಲಿ ಸಿದ್ದರಾಮಯ್ಯ ಅಮೃತ ಮಹೋತ್ಸವ ಸಮಿತಿಯ ಸಭೆ ನಡೆಯಲಿದೆ.

ಸಮಾವೇಶದ ಬಗ್ಗೆ ಮಾತನಾಡಿದ ಕಾಂಗ್ರೆಸ್ ಮುಖಂಡ ಪಿ.ಎಂ. ಅಶೋಕ ಪಟ್ಟಣ, 'ಈ ಕಾರ್ಯಕ್ರಮ 130 ಎಕರೆ ಜಾಗದಲ್ಲಿ ನಡೆಯಲಿದೆ' ಎಂದರು.

'ಪ್ರತಿ ತಾಲ್ಲೂಕಿನಿಂದ ಬಸ್, ಟ್ರ್ಯಾಕ್ಟರ್‌ಗಳಲ್ಲಿ ಸಿದ್ದರಾಮಯ್ಯ ಅವರ ಅಭಿಮಾನಿಗಳು, ಹಿತೈಷಿಗಳು ಬರಲಿದ್ದು, ಸುಮಾರು ಐದು ಲಕ್ಷಕ್ಕೂ ಹೆಚ್ಚು ಜನರು ಸೇರುವ ಸಾಧ್ಯತೆ ಇದೆ. ವಾಹನ ನಿಲುಗಡೆಗೆ 50 ಎಕರೆ, ಸಮಾವೇಶಕ್ಕೆ 50 ಹಾಗೂ ಭೋಜನ ವ್ಯವಸ್ಥೆಗೆ 30 ಎಕರೆ ಗುರುತಿಸಲಾಗಿದೆ. ಬೆಳಗ್ಗಿನಿಂದ ಸಂಜೆಯವರೆಗೂ ಊಟದ ವ್ಯವಸ್ಥೆ ಇರಲಿದೆ' ಎಂದರು.









ವರ್ಷಧಾರೆ, ನಲುಗಿದ ಧರೆ

ಮೆಟ್ಟೂರು: 103 ಅಡಿಗೆ ಏರಿಕೆ

ಚೆನ್ನೈ: ಕರ್ನಾಟಕದ ಕಬಿನಿ ಮತ್ತು ಕೆಆರ್‌ಎಸ್ ಜಲಾಶಯಗಳಿಂದ ನೀರು ಹೊರಬಿಟ್ಟಿರುವ ಕಾರಣ ತಮಿಳುನಾಡಿನ ಮೆಟ್ಟೂರಿನಲ್ಲಿರುವ ಸ್ಟ್ಯಾನ್ಲಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಜಲಾಶಯದ ಗರಿಷ್ಠ ಮಟ್ಟ 120 ಅಡಿ. ಮಂಗಳವಾರ ರಾತ್ರಿ 8 ಗಂಟೆಗೆ ನೀರಿನ ಮಟ್ಟ 103.07 ಅಡಿಗೆ ಏರಿಕೆಯಾಗಿತ್ತು.

ಕರ್ನಾಟಕದಿಂದ ಸೋಮವಾರ 45 ಸಾವಿರ ಕ್ಯುಸೆಕ್ ಮತ್ತು ಮಂಗಳವಾರ 1.10 ಲಕ್ಷ ಕ್ಯುಸೆಕ್‌ನಷ್ಟು ನೀರು ಹರಿದಿರುವುದು ಕರ್ನಾಟಕ– ತಮಿಳು ನಾಡು ಗಡಿಯಲ್ಲಿರುವ ಬಿಳಿಗುಂಡ್ಲು ಮಾಪನ ಕೇಂದ್ರದಲ್ಲಿ ದಾಖಲಾಗಿದೆ.

ಮೆಟ್ಟೂರು ಜಲಾಶಯಕ್ಕೆ ಮಂಗಳವಾರ ರಾತ್ರಿ 8ಕ್ಕೆ 95,515 ಕ್ಯುಸೆಕ್ ಒಳಹರಿವು ಮತ್ತು 15,000 ಕ್ಯುಸೆಕ್ ಹೊರಹರಿವು ಇತ್ತು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	122.44	60,786	56,076
ಹಾರಂಗಿ	2,859	2,853	10,020	10,000
ಕಬಿನಿ	2284.00	2,283	34,200	38,000
ಹೇಮಾವತಿ	2,922	2,920.50	22,354	6,725
ಲಿಂಗನಮಕ್ಕಿ	1,819	1782.50	53,412	-
ಸೂಪಾ (ಮೀ)	564	532.30	40,125	-
ಮಾಣಿ	595	579.28	9,341	-
ತುಂಗಭದ್ರಾ	1,633	1,630.75	85,676	30,650
ಮಲಪ್ರಭಾ	2079.5	2,058.80	10,773	194
ಘಟಪ್ರಭಾ	2175	2,120.53	22,184	113
ಭದ್ರಾ	186	177.7	40,920	156
ಆಲಮಟ್ಟಿ (ಮೀ)	519.6	517.28	1,04,852	1,00,000
ನಾರಾಯಣಪುರ (ಮೀ)	492.25	491.33	95,000	1,04,924

*ನೆಲಮಟ್ಟದಿಂದ


ಕರಾವಳಿ, ಕಲ್ಯಾಣ ಕರ್ನಾಟಕದಲ್ಲಿ ತಗ್ಗಿದ ಮಳೆ • ಬೆಳಗಾವಿಯಲ್ಲಿ ಬಿರುಸು

ದೇವಸ್ಥಾನ, ದರ್ಗಾ, ಭತ್ತದ ಗದ್ದೆ ಜಲಾವೃತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ವ್ಯಾಪಕ ಮಳೆಯಿಂದಾಗಿ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷ್ಣಾ ನದಿಗೆ 99 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದೆ. ಪರಿಣಾಮ ನದಿ ದಡದ ಕೆಲವು ದೇವಸ್ಥಾನ, ದರ್ಗಾಗಳು ಜಲಾವೃತವಾಗಿವೆ. ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವ ಜೊತೆಗೆ ಜಾನುವಾರು, ಕೃಷಿ ಸಲಕರಣೆಗಳನ್ನು ಸ್ಥಳಾಂತರಿಸುವುದು ಸಾಮಾನ್ಯವಾಗಿದೆ.

ನಗರ ಹೊರವಲಯದಲ್ಲಿ ಬಳ್ಳಾರಿ ನಾಲೆ ಉಕ್ಕಿ ಹರಿದು 117 ಹೆಕ್ಟೇರ್ ಭತ್ತದ ಗದ್ದೆಗಳಿಗೆ ನುಗ್ಗಿದೆ. ತಾಲ್ಲೂಕಿನ ಯಳ್ಳೂರ, ಅನಗೋಳ, ಧಾಮಣೆ, ವಡಗಾವಿ ಸೀಮೆಯಲ್ಲಿ ಬೆಳೆದ ಭತ್ತದ ಗದ್ದೆಗಳಲ್ಲಿ ಮೊಣಕಾಲೆತ್ತರಕ್ಕೆ ನೀರು ನಿಂತಿದೆ. ಇನ್ನೊಂದೆಡೆ, ಸೋಮವಾರ ರಾತ್ರಿಯಿಡೀ ಅಥಣಿ, ಚಿಕ್ಕೋಡಿ, ರಾಯಬಾಗ, ಖಾನಾಪುರ ಹಾಗೂ ಚನ್ನಮ್ಮನ ಕಿತ್ತೂರು ತಾಲ್ಲೂಕುಗಳಲ್ಲಿ ಭಾರಿ ಮಳೆಯಾಗಿದೆ. ಶಿರಸಿ, ಮುಂಡಗೋಡ, ಯಲ್ಲಾಪುರ, ಕಾರವಾರ, ಹೊನ್ನಾವರ ಹಾಗೂ ಭಟ್ಕಳ ಭಾಗದಲ್ಲಿ ಆಗಾಗ ಮಳೆಯಾಯಿತು.



ಆಲಮಟ್ಟಿ ಜಲಾಶಯದ ಎಲ್ಲಾ ಗೇಟ್‌ಗಳನ್ನು ತೆರೆದು ನೀರು ಹರಿಸಲಾಯಿತು ಪ್ರಜಾವಾಣಿ ಚಿತ್ರ: ಚಂದ್ರಶೇಖರ ಕೋಳೇಕರ

ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ಕೊಂಚ ತಗ್ಗಿದೆ. ಸೋಮವಾರಪೇಟೆ, ಶನಿವಾರಸಂತೆ ಬಿರುಸಾಗಿಯೇ ಸುರಿದಿದೆ. ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 25 ಸಾವಿರದಿಂದ 10 ಸಾವಿರ ಕ್ಯುಸೆಕ್‌ಗೆ ಇಳಿದಿದೆ.

ಆಗುಂಬೆ ಘಾಟಿ, ಸಂಚಾರ ಆರಂಭ: (ಶಿವಮೊಗ್ಗ ವರದಿ): ಜಿಲ್ಲೆಯಲ್ಲಿ ಮಳೆಯ ಅಬ್ಬರ ಮುಂದುವರಿದಿದೆ. ಆಗುಂಬೆ ಘಾಟಿ ಗುಡ್ಡ ಕುಸಿತದ ದುರಸ್ತಿ ಪೂರ್ಣಗೊಂಡಿದ್ದು, ಮಂಗಳವಾರ ಬೆಳಿಗ್ಗೆ ಲಘು ವಾಹನ ಸಂಚಾರ ಆರಂಭವಾಗಿದೆ. ಸಾಗರ ತಾಲ್ಲೂಕಿನ ತಾಳಗುಪ್ಪ ಹೋಬಳಿಯ ಬೀಸನಗದ್ದೆ ಗ್ರಾಮ ಜಲಾವೃತಗೊಂಡಿರುವ ಕಾರಣ ಗ್ರಾಮಸ್ಥರ ಓಡಾಟಕ್ಕೆ ದೋಣಿ ವ್ಯವಸ್ಥೆ ಮಾಡಲಾಗಿದೆ.

ಕಲ್ಯಾಣ ಕರ್ನಾಟಕದ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಕೌಠಾ ಬಳಿ ಮಾಂಜ್ರಾ ನದಿ ಮೈತುಂಬಿ ಹರಿಯುತ್ತಿದ್ದು, ಕಮಲನಗರ-ಬೆಳಕುಣಿ (ಬಿ) ಗ್ರಾಮಗಳ ಮಧ್ಯದ ಕೆಳಸೇತುವೆ ಜಲಾವೃತಗೊಂಡಿದೆ.

ಶೋಭಾ ಕರಂದ್ಲಾಜೆ ವಿರುದ್ಧ ಪ್ರತಿಭಟನೆ: ಗುಡ್ಡೆತೋಟ (ಚಿಕ್ಕಮಗಳೂರು): ಮಳೆ ಹಾನಿ ಪರಿಶೀಲನೆಗೆ ಬಂದಿದ್ದ ಕೇಂದ್ರ ಸಚಿವ ಶೋಭಾ ಕರಂದ್ಲಾಜೆ ಅವರು ಅಹವಾಲು ಆಲಿಸಲಿಲ್ಲ ಎಂದು ಕೊಪ್ಪ ತಾಲ್ಲೂಕಿನ ಗುಡ್ಡತೋಟದಲ್ಲಿ ಜನರು ಆಕ್ರೋಶ ವ್ಯಕ್ತಪಡಿಸಿದ್ದು, ಪ್ರತಿಭಟನೆ ನಡೆಸಿದರು.

ಗ್ರಾಮ ಪಂಚಾಯಿತಿ ಕಚೇರಿ ಬಳಿ ಸಚಿವೆಗೆ ಸಮಸ್ಯೆ ತಿಳಿಸಲು ಜನರು ಕಾಯುತ್ತಿದ್ದರು. ಆದರೆ, ಶೋಭಾ ಅವರು ಗುಡ್ಡದ ಮಣ್ಣು ಜರುಗಿದ್ದ ಸ್ಥಳ ವೀಕ್ಷಿಸಿ ತೆರಳಿದರು. ಆಕ್ರೋಶಗೊಂಡ ಗ್ರಾಮಸ್ಥರು ಮಳೆಯಲ್ಲೇ ಪ್ರತಿಭಟಿಸಿ, ಘೋಷಣೆ ಕೂಗಿದರು.

ಸಚಿವೆ ಶೋಭಾ ಅವರು ಸಂತ್ರಸ್ತರ ಸಂಕಷ್ಟ ಆಲಿಸದೆ ತೆರಳಿದರು' ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಕೀರ್ತಿ ರಾಜ್ ಅಸಮಾಧಾನ ವ್ಯಕ್ತಪಡಿಸಿದರು.

'ಕಡಲ್ಕೊರೆತ ತಡೆಗೆ ಶಾಶ್ವತ ಕಾಮಗಾರಿ'

ಮಂಗಳೂರು: 'ಕಡಲ್ಕೊರೆತ ತಡೆಗೆ ಸೀ ವೇವ್ ಬ್ರೇಕರ್ ತಂತ್ರಜ್ಞಾನ ಬಳಸಿ ಶಾಶ್ವತ ಕಾಮಗಾರಿ ಕೈಗೊಳ್ಳುತ್ತೇವೆ. ಸಮಸ್ಯೆ ಪರಿಹಾರಕ್ಕೆ ಸಮಗ್ರ ಅಧ್ಯಯನ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಉಳ್ಳಾಲ ತಾಲ್ಲೂಕಿನ ಸೋಮೇಶ್ವರ ಬಳಿಯ ಬಟ್ಟಪ್ಪಾಡಿ ಪ್ರದೇಶದಲ್ಲಿ ಕಡಲ್ಕೊರೆತ ಉಂಟಾಗುತ್ತಿರುವ ಪ್ರದೇಶಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

'ಸೀ ವೇವ್ ಬ್ರೇಕರ್ ತಂತ್ರಜ್ಞಾನ ಕುರಿತು ಸಂಸ್ಥೆಯೊಂದು ಪ್ರಾತ್ಯಕ್ಷಿಕೆ ನೀಡಿದೆ. ಬಟ್ಟಾಪ್ಪಾಡಿ ಪ್ರದೇಶದಲ್ಲೇ ಪ್ರಾಯೋಗಿಕವಾಗಿ ಕಾಮಗಾರಿ ನಡೆಸಲಾಗುವುದು' ಎಂದು ತಿಳಿಸಿದರು.

ಶಿರಾಡಿ ಘಾಟಿ: ಮಳೆಗಾಲದ ಬಳಿಕ ಸುರಂಗ: 'ಘಾಟಿ ಪ್ರದೇಶದಲ್ಲಿ ಕಾಮಗಾರಿ ಸರಿಯಾಗಿ ಆಗುತ್ತಿಲ್ಲ ಎಂಬ ದೂರುಗಳಿವೆ. ಇಲ್ಲಿ ಶಾಶ್ವತ ರಸ್ತೆಗಳ ನಿರ್ಮಾಣ ಕುರಿತು ಬಗ್ಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಜೊತೆಗೆ ಚರ್ಚಿಸಿದ್ದೇನೆ. ಸದ್ಯ ನಾಲ್ಕು ಪಥಗಳ ರಸ್ತೆ ನಿರ್ಮಿಸುತ್ತೇವೆ' ಎಂದೂ ಹೇಳಿದರು.

ಕರಾವಳಿ, ಮಲೆನಾಡಿನಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಜಿಲ್ಲೆಗಳು ಹಾಗೂ ಮಲೆನಾಡು ಭಾಗದ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಜಿಲ್ಲೆಯ ಕೆಲವೆಡೆ ಮುಂದಿನ 24 ಗಂಟೆಯ ಅವಧಿಯಲ್ಲಿ ಭಾರಿ ಮಳೆ ಮುಂದುವರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಧಾರವಾಡ, ಹಾವೇರಿ, ಕಲಬುರಗಿ, ವಿಜಯಪುರ, ಯಾದಗಿರಿ, ದಕ್ಷಿಣ ಒಳನಾಡಿನ ಹಾಸನ ಜಿಲ್ಲೆಯ ಕೆಲವು ಭಾಗದಲ್ಲೂ ಜೋರು ಮಳೆ ಸುರಿಯುವ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ಶಿಕ್ಷಣ ಸುಧಾರಣೆ ಸಲಹೆಗಾರರಾಗಿ ದೊರೆಸ್ವಾಮಿ



ಪ್ರೊ. ಎಂ.ಆರ್. ದೊರೆಸ್ವಾಮಿ

ಬೆಂಗಳೂರು: ಪಿಇಎಸ್ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಪ್ರೊ. ಎಂ.ಆರ್. ದೊರೆಸ್ವಾಮಿ ಅವರನ್ನು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಗಳ ಸಲಹೆಗಾರರನ್ನಾಗಿ ನೇಮಿಸಲಾಗಿದೆ.

ಶಿಕ್ಷಣ ತಜ್ಞರಾದ ದೊರೆಸ್ವಾಮಿ ಅವರು ರಾಜ್ಯದ ಮೇಲ್ಮನೆ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಇವರನ್ನು ಶಿಕ್ಷಣ ಸುಧಾರಣೆಗಳ ಸಲಹೆಗಾರರನ್ನಾಗಿ ನೇಮಕ ಮಾಡಲಾಗಿತ್ತು. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ, ಕೆಲವರ ಅವಧಿಯನ್ನು ವಿಸ್ತರಿಸಿರಲಿಲ್ಲ. ಈಗ ಮತ್ತೆ ನೇಮಕ ಮಾಡಲಾಗಿದ್ದು, ರಾಜ್ಯ ಸಚಿವ ದರ್ಜೆಯ ಸ್ಥಾನಮಾನ ನೀಡಿ ಆದೇಶ ಹೊರಡಿಸಲಾಗಿದೆ.

'19 ಜಿಲ್ಲೆಯಲ್ಲಿ ಭಾಷಾ ಪ್ರಯೋಗಾಲಯ'

ಮೈಸೂರು: 'ರಾಜ್ಯದ ಗಡಿ ಜಿಲ್ಲೆಗಳಲ್ಲಿ ಕನ್ನಡ ಜೀವಂತಿಕೆಗೆ 'ಕನ್ನಡ ಭಾಷಾ ಪ್ರಯೋಗಾಲಯ'ವನ್ನು ಪ್ರಾಧಿಕಾರ ಇನ್ನೊಂದು ತಿಂಗಳಲ್ಲಿ ಅನುಷ್ಠಾನಗೊಳಿಸಲಿದೆ. ಅದಕ್ಕಾಗಿ 19 ಜಿಲ್ಲೆಗಳ 38 ಶಾಲೆಗಳನ್ನು ಗುರುತಿಸಿ, ಶಿಕ್ಷಕರನ್ನೂ ಆಯ್ಕೆ ಮಾಡಲಾಗಿದೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದರು.

ಸುದ್ದಿಗೋಷ್ಠಿ ನಡೆಸಿದ ಅವರು, 'ಪ್ರಾದೇಶಿಕ ಭಾಷಾ ಕೇಂದ್ರದ ನೆರವಿನೊಂದಿಗೆ ಟೂಲ್‌ಕಿಟ್ ಸಿದ್ಧಪಡಿಸಲಾಗಿದೆ. ಗಡಿ ನಿವಾಸಿಗಳು ಅವರ ಮನೆಯಲ್ಲಿ ಮಾತೃಭಾಷೆಯನ್ನು ಬಳಸಬಹುದು. ಶಾಲೆಯಲ್ಲಿ ಕನ್ನಡ ಬಳಕೆಗೆ ಪ್ರಯೋಗಾಲಯ ನೆರವಾಗಲಿದೆ. ಸ್ಮಾರ್ಟ್ ಕ್ಲಾಸ್ ಮೂಲಕ ಆಡಿಯೊ– ವಿಡಿಯೊ ವಿಧಾನದಲ್ಲಿಯೂ ಕನ್ನಡ ಕಲಿಕೆ ಅನುಷ್ಠಾನವಾಗಲಿದೆ' ಎಂದರು.

'ಛಂದ ಪುಸ್ತಕ': ಹಸ್ತಪ್ರತಿ ಆಹ್ವಾನ

ಬೆಂಗಳೂರು: ಹೊಸ ಕತೆಗಾರರ ಪುಸ್ತಕಗಳನ್ನು ಪ್ರಕಟಿಸುತ್ತಿರುವ ಛಂದ ಪುಸ್ತಕವು ಈ ಸಾಲಿನ 'ಛಂದಪುಸ್ತಕ' ಬಹುಮಾನಕ್ಕೆ ಹಸ್ತಪ್ರತಿಗಳನ್ನು ಆಹ್ವಾನಿಸಿದೆ.

ಈವರೆಗೆ ಕಥಾಸಂಕಲನ ಪ್ರಕಟಿಸದ ಲೇಖಕರಿಗೆ ಮಾತ್ರ ಅವಕಾಶ ಇದೆ. ₹ 40 ಸಾವಿರ ಬಹುಮಾನ ನೀಡುವ ಜತೆಗೆ ಅವರ ಕಥಾಸಂಕಲನವನ್ನು ಪ್ರಕಟಿಸಲಾಗುತ್ತದೆ. ಕತೆಗಳನ್ನು ಇದೇ 31ರೊಳಗೆ ಛಂದ ಪುಸ್ತಕ, C/O ವಸುಧೇಂದ್ರ, ಐ-004, ಮಂತ್ರಿ ಪ್ಯಾರಡೈಸ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560 076 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ಕೋರಿದೆ.

ಸಂಪರ್ಕಕ್ಕೆ: 98444 22782

ಮಠಾಧೀಶರೊಂದಿಗಿನ ಸಂವಾದದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್

ಅಸ್ಪೃಶ್ಯತೆ ನಿವಾರಣೆಗೆ ಸಹನೆ ಅಗತ್ಯ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಅಸ್ಪೃಶ್ಯತೆ ಮತ್ತು ಅಸಮಾನತೆ ಹಿಂದೂ ಸಮಾಜದ ಪ್ರಮುಖ ಸಮಸ್ಯೆ. ಇವು ಪ್ರತಿಯೊಬ್ಬರ ಮನಸ್ಸಿನಲ್ಲಿವೆಯೇ ಹೊರತು ಶಾಸ್ತ್ರದಲ್ಲಿ ಅಲ್ಲ. ಇದರ ಪರಿಹಾರಕ್ಕೆ ಸಮಯ ಬೇಕಾಗುತ್ತದೆ. ಅಲ್ಲಿಯವರೆಗೆ ಸಹನೆ, ಧೈರ್ಯ ಇರಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಅಭಿಪ್ರಾಯಪಟ್ಟರು.

ಇಲ್ಲಿನ ಮಾದಾರ ಚನ್ನಯ್ಯ ಗುರುಪೀಠದಲ್ಲಿ ದಲಿತ ಮತ್ತು ಹಿಂದುಳಿದ ಜನಾಂಗದ ಮಠಾಧೀಶರೊಂದಿಗೆ ಮಂಗಳವಾರ ಹಮ್ಮಿಕೊಂಡಿದ್ದ ಸಂವಾದದಲ್ಲಿ ಅವರು ಮಾತನಾಡಿದರು.

'ಅಸ್ಪೃಶ್ಯತೆ, ಅಸಮಾನತೆಯಂತಹ ಸಮಸ್ಯೆಗಳು ಶತಮಾನಗಳಿಂದ ಮನಸ್ಸಿನಲ್ಲಿ ಉಳಿದಿವೆ. ಇವನ್ನು ನಿಧಾನವಾಗಿ ಮನಸ್ಸಿನಿಂದ ತೆಗೆಯುವ ಕೆಲಸ ಆಗಬೇಕಿದೆ. ಈ ನಿಟ್ಟಿನಲ್ಲಿ ಸಂಘ ಕಾರ್ಯನಿರತವಾಗಿದೆ. ಇದರಲ್ಲಿ ಖಂಡಿತ ಯಶಸ್ಸು ಸಿಗುತ್ತದೆ' ಎಂದು ಹೇಳಿದರು.

'ಸಾಮಾಜಿಕ ಸಂಪರ್ಕ ಕಡಿತಗೊಂಡ ಪರಿಣಾಮ ಹಿಂದೂ ಸಮಾಜದ ಕೆಲವು ಭಾಗ ಹಿಂದುಳಿಯಿತು. ಸಮಾಜದ ಎಲ್ಲ ಅಂಗಗಳನ್ನು ಸುಸ್ಥಿತಿಯಲ್ಲಿಡುವುದು ನಮ್ಮೆಲ್ಲರ ಕರ್ತವ್ಯ. ಸಂಘದ ಸ್ವಯಂ ಸೇವಕರು ಮತ್ತು ಮಠಾಧೀಶರು ಆಗಾಗ ಭೇಟಿ ಆಗುತ್ತಿರಬೇಕು. ಪರಸ್ಪರ ಅರಿವು ಹೆಚ್ಚಾಗಿ ಅಪನಂಬಿಕೆ, ಸಂಶಯಗಳು ದೂರವಾಗುತ್ತವೆ' ಎಂದರು.

'ಆರ್‌ಎಸ್‌ಎಸ್‌ಗೆ ಒಂದು ಪ್ರಾಕೃತಿಕ ಶೈಲಿ ಇದೆ. ಆ ಶೈಲಿಯಲ್ಲಿಯೇ ನಾವು ಮುನ್ನಡೆಯುತ್ತೇವೆ. ಇದು ನಿಧಾನಗತಿ ಇರಬಹುದು. ನಿಧಾನವಾಗಿ ನಡೆದರೆ ದೂರಸಾಗಲು ಸಾಧ್ಯವಿದೆ. ಮಠಾಧೀಶರು ಸಂಘವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಸಂಘ ಸದಾಕಾಲ ಮಠಾಧೀಶರೊಂದಿಗೆ ಇರಲಿದೆ' ಎಂದು ಅವರು ಅಭಯ ನೀಡಿದರು.

ರಾಜ್ಯದ ವಿವಿಧೆಡೆಯ 21 ಮಠಾಧೀಶರು ಸಂವಾದದಲ್ಲಿ ಪಾಲ್ಗೊಂಡಿದ್ದರು. ಆರ್‌ಎಸ್‌ಎಸ್ ಸಹಸರಕಾರ್ಯವಾಹ ಮುಕುಂದ, ಕ್ಷೇತ್ರೀಯ ಪ್ರಚಾರಕ ಸುಧೀರ, ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ, ಪಟ್ಟಾಭಿರಾಮ, ಸಾಮರಸ್ಯ ವೇದಿಕೆಯ ವಾದಿರಾಜ ಇದ್ದರು.



ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಮಠಾಧೀಶರೊಂದಿಗೆ ಮಂಗಳವಾರ ಸಂವಾದ ನಡೆಸಿದರು. ಪುರುಷೋತ್ತಮಾನಂದಪುರಿ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಶಾಂತವೀರ ಸ್ವಾಮೀಜಿ, ಬಸವ ನಾಗಿದೇವ ಸ್ವಾಮೀಜಿ, ಶಾಂತಭೀಷ್ಮ ಅಂಬಿಗರ ಚೌಡಯ್ಯ ಸ್ವಾಮೀಜಿ ಇದ್ದರು.

ಆಧುನಿಕ ಪದ್ಧತಿಯ ಶಿಕ್ಷಣದಿಂದ ವಿದ್ಯಾಭ್ಯಾಸ ಸಿಗುತ್ತಿದೆ. ಆದರೆ, ಸಂಸ್ಕಾರ ದೂರವಾಗುತ್ತಿದೆ. ಸಂಸ್ಕಾರಯುತ ಸಮಾಜ ನಿರ್ಮಿಸುವ ಹೊಣೆ ಮಠಾಧೀಶರು, ಸಂಘದ ಮೇಲಿದೆ.

ಮೋಹನ್ ಭಾಗವತ್, ಸರಸಂಘಚಾಲಕ, ರಾಷ್ಟ್ರೀಯ ಸ್ವಯಂ ಸೇವಕ ಸಂಘ

ಎಲ್ಲರನ್ನೂ ಸಮಾನವಾಗಿ ಕೊಂಡೊಯ್ಯುವ ಕೆಲಸವನ್ನು ಸರ್ಕಾರ ಮಾಡಬೇಕು. ಎಲ್ಲರಿಗೂ ನ್ಯಾಯಯುತ ಮೀಸಲಾತಿ ಸಿಗಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು.

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠ

ಮತಾಂತರ ತಡೆಯಲು ಸಲಹೆ

'ಮತಾಂತರವು ಪ್ರತ್ಯೇಕತೆಯನ್ನು ಸೃಷ್ಟಿಸುತ್ತದೆ. ಮೂಲ ಬೇರಿನಿಂದ ಸಂಪರ್ಕ ಕಡಿದುಕೊಂಡು ದೂರವಾಗುವಂತೆ ಮಾಡುತ್ತದೆ. ನಾವೆಲ್ಲರೂ ಮತಾಂತರವನ್ನು ತಡೆಯಲು ಪ್ರಯತ್ನಿಸಬೇಕಿದೆ' ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಸಲಹೆ ನೀಡಿದರು.

'ಈ ದೇಶವು ಭಾರತವಾಗಿ ಉಳಿಯಬೇಕಾದರೆ ಮೊದಲು ನಾವು ನಾವಾಗಿರಬೇಕು. ಇಲ್ಲದಿದ್ದರೆ ಭಾರತ ಉಳಿಯುವುದಿಲ್ಲ. ಧರ್ಮ ಎಲ್ಲೆಡೆ ಉಳಿಯುವಂತೆ ನೋಡಿಕೊಳ್ಳಬೇಕಿದೆ. ಸಂಘಕ್ಕೆ ರಾಜಕೀಯಕ್ಕಿಂತ ಧರ್ಮ ಮತ್ತು ಅಧ್ಯಾತ್ಮ ಮುಖ್ಯ. ಹಾಗಾಗಿ ರಾಜಕೀಯ ನಾಯಕರಿಗಿಂತ ಮಠಾಧೀಶರ ಸಾಮೀಪ್ಯವನ್ನು ಸಂಘ ಬಯಸುತ್ತದೆ' ಎಂದು ಹೇಳಿದರು.

ಭಾಗವಹಿಸಿದ್ದ ಮಠಾಧೀಶರು

ಕುಂಚಿಟಿಗ ಮಹಾಸಂಸ್ಥಾನದ ಶಾಂತವೀರ ಸ್ವಾಮೀಜಿ, ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಭಗೀರಥ ಗುರುಪೀಠದ ಪುರುಷೋತ್ತಮಾನಂದಪುರಿ ಸ್ವಾಮೀಜಿ, ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, ಮಡಿವಾಳ ಮಾಚಿದೇವ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ, ಅನ್ನದಾನಿ ಭಾರತಿ ಅಪ್ಪಣ್ಣ ಸ್ವಾಮೀಜಿ, ಬಸವಕುಂಬಾರ ಗುಂಡಯ್ಯ ಸ್ವಾಮೀಜಿ, ರೇಣುಕಾನಂದ ಸ್ವಾಮೀಜಿ, ವೇಮನಾನಂದ ಸ್ವಾಮೀಜಿ, ಶಾಂತಭೀಷ್ಮ ಅಂಬಿಗರ ಚೌಡಯ್ಯ ಸ್ವಾಮೀಜಿ, ಬಸವ ಭೃಂಗೀಶ್ವರ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ದಯಾನಂದಪುರಿ ಸ್ವಾಮೀಜಿ, ಇಮ್ಮಡಿ ಕೇತೇಶ್ವರ ಸ್ವಾಮೀಜಿ, ಬಸವ ನಾಗಿದೇವ ಸ್ವಾಮೀಜಿ, ಜ್ಞಾನಾನಂದಪುರಿ ಸ್ವಾಮೀಜಿ, ಮಾತಾ ಬಿಷ್ಠದೇವಿ, ಬಸವ ಹರಳಯ್ಯ ಸ್ವಾಮೀಜಿ, ಪೂರ್ಣಾನಂದ ಭಾರತಿ ಸ್ವಾಮೀಜಿ, ಶ್ರೀಧರಾನಂದ ಸ್ವಾಮೀಜಿ ಭಾಗವಹಿಸಿದ್ದರು.

'ಪರಿಹಾರಕ್ಕೆ ಹಣದ ಕೊರತೆಯಿಲ್ಲ'

ಒಂದನೇ ಪುಟದಿಂದ...

'ಬಾಧಿತ ಪ್ರದೇಶಗಳ ಪೈಕಿ ಭೂ ಕುಸಿತ ಆಗುತ್ತಿರುವ ಸೂಕ್ಷ್ಮ ಪ್ರದೇಶಗಳ ಜನರಿಗೆ ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ಮನವೊಲಿಸಲಾಗುವುದು' ಎಂದು ತಿಳಿಸಿದರು.

'ಅತಿವೃಷ್ಟಿಯಿಂದ ರಾಜ್ಯದ ವಿವಿಧೆಡೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ಕೊಡಗಿನಲ್ಲಿ ಲಘು ಭೂಕಂಪ– ಭೂ ಕುಸಿತ, ಕರಾವಳಿಯಲ್ಲಿ ಕಡಲ ಕೊರೆತ ಹಾಗೂ ಉತ್ತರ ಕರ್ನಾಟಕದ ನದಿಪಾತ್ರಗಳಲ್ಲಿ ಪ್ರವಾಹದಿಂದ ಹಾನಿಯಾಗಿದೆ. ನದಿ ಪಾತ್ರದಲ್ಲಿ ಹಾನಿ ತಡೆಗೆ ಶಾಶ್ವತ ಪರಿಹಾರ ಹಾಗೂ ಮನೆಗಳ ಸ್ಥಳಾಂತರಕ್ಕೆ ತಜ್ಞರ ಅಭಿಪ್ರಾಯ ಕೇಳಲಾಗಿದೆ' ಎಂದು ಮುಖ್ಯಮಂತ್ರಿ ಅವರು ತಿಳಿಸಿದರು.

'ಉಡುಪಿ, ಮಂಗಳೂರು, ಕೊಡಗು ಹಾಗೂ ಉತ್ತರ ಕನ್ನಡ ಸೇರಿ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಇಡೀ ಸರ್ಕಾರ ಹಾನಿ ಪ್ರದೇಶಗಳಿಗೆ ಭೇಟಿ ನೀಡುತ್ತಿದೆ. ಸರ್ಕಾರ ಸಕ್ರಿಯವಾಗಿಲ್ಲ ಎಂಬ ಆರೋಪ ಸುಳ್ಳು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಎಲ್ಲ ಸಂತ್ರಸ್ತರಿಗೂ ಪಡಿತರ: ಮಡಿಕೇರಿಯಲ್ಲಿ ಮಾತನಾಡಿದ ಅವರು, 'ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದಿರುವವರು ಮನೆಗೆ ಮರಳುವಾಗ ಹಾಗೂ ಸಂಬಂಧಿಕರ ಮನೆಗಳಲ್ಲಿ ಆಶ್ರಯ ಪಡೆದವರಿಗೂ ಪಡಿತರ ವಿತರಿಸಲಾಗುವುದು' ಎಂದು ತಿಳಿಸಿದರು.

'ಕೊಡಗು ಜಿಲ್ಲೆಯಲ್ಲಿ ಪದೇ ಪದೇ ಭೂಕಂಪನ ಆಗುತ್ತಿರುವ ಸ್ಥಳದ ಅಧ್ಯಯನಕ್ಕೆ ತಜ್ಞರನ್ನು ಆಹ್ವಾನಿಸಲಾಗಿದೆ. ನ್ಯಾಷನಲ್ ಜಿಯಾಗ್ರಫಿಕ್ ಇನ್‌ಸ್ಟಿಟ್ಯೂಟ್, ಮೈಸೂರು ವಿಶ್ವವಿದ್ಯಾನಿಲಯದ ತಜ್ಞರು ಮುಂದಿನ ವಾರ ಇಲ್ಲಿಗೆ ಬಂದು ಅಧ್ಯಯನ ನಡೆಸುವರು. ಅವರ ವರದಿಯ ಅನುಸಾರ ರಕ್ಷಣಾ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಭೂಕುಸಿತ ಪ್ರಕರಣ ಕುರಿತು ಅಮೃತ ವಿಶ್ವವಿದ್ಯಾಲಯದ ತಜ್ಞರು ಅಧ್ಯಯನ ನಡೆಸಿ ಈಗಾಗಲೇ ಪ್ರಾಥಮಿಕ ವರದಿ ನೀಡಿದ್ದಾರೆ. ಅಂತಿಮ ವರದಿ ನೀಡಿದ ಬಳಿಕ, ಶಿಫಾರಸುಗಳನ್ನು ಮುಂದಿನ ಮಳೆಗಾಲಕ್ಕೂ ಮುನ್ನ ಜಾರಿಗೆ ತರಲಾಗುವುದು' ಎಂದು ಹೇಳಿದರು.

ಮಳೆಯಿಂದ ಹಾನಿಗೀಡಾದ ಮಡಿಕೇರಿಯ ಮಲ್ಲಿಕಾರ್ಜುನ ನಗರ, ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ಕರ್ತೋಜಿ ಸಮೀಪದ ಕುಸಿಯುತ್ತಿರುವ ಮಣ್ಣು, ಕೊಯನಾಡಿನ ಕಾಳಜಿ ಕೇಂದ್ರಕ್ಕೆ ಮುಖ್ಯಮಂತ್ರಿ ಭೇಟಿ ನೀಡಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಳೆ: ಎಲ್ಲಿ, ಎಷ್ಟು?

ಸೆಂಟಿ ಮೀಟರ್‌ಗಳಲ್ಲಿ	
ಕೆರೆಕಟ್ಟೆ (ಚಿಕ್ಕಮಗಳೂರು)	14
ಕಿಗ್ಗಾ (ಚಿಕ್ಕಮಗಳೂರು)	10.2
ಆಗುಂಬೆ (ಶಿವಮೊಗ್ಗ)	15.1
ಕಣಕುಂಬಿ (ಬೆಳಗಾವಿ)	13
ತೀರ್ಥಹಳ್ಳಿ (ಶಿವಮೊಗ್ಗ)	12.9
ಗೇರುಸೊಪ್ಪ (ಶಿವಮೊಗ್ಗ)	10.5
ಸೂಪಾ (ಉತ್ತರ ಕನ್ನಡ)	7.1
ಕದ್ರಾ (ಕಾರವಾರ)	7.0

'ಲೇಖಕರಿಗೆ ಬೆದರಿಕೆ ಪತ್ರ ಸರ್ಕಾರದ ನಿರ್ಲಕ್ಷ್ಯ ಸಲ್ಲದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬರಹಗಾರರು, ಚಿಂತಕರು ಮತ್ತು ವಿರೋಧ ಪಕ್ಷಗಳ ಮುಖಂಡರಿಗೆ ಬರುತ್ತಿರುವ ಜೀವಬೆದರಿಕೆ ಕರೆ ಹಾಗೂ ಪತ್ರಗಳನ್ನು ನಿರ್ಲಕ್ಷಿಸಬಾರದು' ಎಂದು ರಾಜ್ಯ ಸರ್ಕಾರಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಅವರು, 'ದಾವಣಗೆರೆ, ಭದ್ರಾವತಿ, ಅಜ್ಜಂಪುರ ಮುಂತಾದ ಊರುಗಳಿಂದ ಜೀವಬೆದರಿಕೆ ಪತ್ರಗಳು ಬಂದಿವೆ. ಕುಂ. ವೀರಭದ್ರಪ್ಪನವರಿಗೆ ಆರು, ಬಂಜಗೆರೆ ಜಯಪ್ರಕಾಶ್‌ಗೆ ಐದು ಪತ್ರ, ಬಿ.ಟಿ. ಲಲಿತಾ ನಾಯಕ್, ಬಿ.ಎಲ್. ವೇಣು, ಚಂದ್ರಶೇಖರ್ ತಾಳ್ಯ ಅವರಿಗೆ ತಲಾ ಎರಡು ಪತ್ರ, ಎಸ್.ಜಿ. ಸಿದ್ಧರಾಮಯ್ಯ ಮತ್ತು ವಸುಂಧರಾ ಭೂಪತಿ ಅವರಿಗೆ ಒಂದೊಂದು ಪತ್ರ ಬಂದಿದೆ' ಎಂದಿದ್ದಾರೆ.

'ನನಗೂ ಹಲವು ಬೆದರಿಕೆ ಪತ್ರಗಳು ಬಂದಿವೆ. ಡಿಜಿಯವರಿಗೆ ನಾನು ಈ ಬಗ್ಗೆ ಮಾತನಾಡಿದ್ದೆ. ಇತ್ತೀಚೆಗೆ ಟಿವಿ ಮಾಧ್ಯಮವೊಂದರಲ್ಲಿ ವೀರೇಶ್ ಎಂಬಾತ ಕೆಪಿಸಿಸಿ ಅಧ್ಯಕ್ಷರಾದ ಡಿ.ಕೆ. ಶಿವಕುಮಾರ್ ಮತ್ತು ನನಗೆ ಗುಂಡು ಹಾರಿಸಬೇಕೆಂದು ಹೇಳಿಕೆ ಕೊಟ್ಟಿದ್ದ. ಈ ಬೆದರಿಕೆಯ ಹೇಳಿಕೆ ಮತ್ತು ಪತ್ರಗಳ ಕುರಿತು ದೂರು ದಾಖಲಿಸಲಾಗಿದೆ. ಆದರೆ, ಈವರೆಗೂ ಎಫ್‌ಐಆರ್ ದಾಖಲು ಮಾಡಿದಿರುವುದು ಸರ್ಕಾರದ ಬೇಜವಾಬ್ದಾರಿ ನಡವಳಿಕೆ' ಎಂದಿದ್ದಾರೆ.

ಬಂಜಗೆರೆ ಜಯಪ್ರಕಾಶ್‌ಗೆ ಭದ್ರತೆ

ರಾಮನಗರ: ಜೀವ ಬೆದರಿಕೆ ಪತ್ರದ ಹಿನ್ನೆಲೆಯಲ್ಲಿ ಸಾಹಿತಿ ಬಂಜಗೆರೆ ಜಯಪ್ರಕಾಶ್ ಅವರಿಗೆ ಪೊಲೀಸ್ ಇಲಾಖೆಯು ಭದ್ರತೆ ನೀಡಿದ್ದು, ಅಂಗರಕ್ಷಕರೊಬ್ಬರನ್ನು ನಿಯೋಜಿಸಿದೆ.

'ಪಠ್ಯಪುಸ್ತಕ ಪರಿಷ್ಕರಣೆ ಕುರಿತಾಗಿ ನೀಡಿದ ಹೇಳಿಕೆ ಖಂಡಿಸಿ 'ಸಹಿಷ್ಣು ಹಿಂದು' ಹೆಸರಿನಲ್ಲಿ ಬಂಜಗೆರೆ ಅವರಿಗೆ ನಿರಂತರವಾಗಿ ಬೆದರಿಕೆ ಪತ್ರಗಳು ಬರುತ್ತಿವೆ. ಅದರಲ್ಲಿ ಬಂಜಗೆರೆ ಸೇರಿದಂತೆ ಇತರ ಸಾಹಿತಿಗಳಿಗೆ ಕೊಲೆ ಬೆದರಿಕೆ ಹಾಕಲಾಗಿದೆ. ಈ ಹಿನ್ನೆಲೆಯಲ್ಲಿ ಕ್ರಮ ಕೈಗೊಂಡಿದ್ದು, ಅಂಗರಕ್ಷಕ ಸೇವೆ ಒದಗಿಸಿದ್ದೇವೆ. ನ್ಯಾಯಾಲಯದ ಅನುಮತಿ ಮೇರೆಗೆ ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿ ತನಿಖೆಯನ್ನೂ ಕೈಗೊಂಡಿದ್ದೇವೆ' ಎಂದು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಬಾಬು 'ಪ್ರಜಾವಾಣಿ'ಗೆ ತಿಳಿಸಿದರು.



ಜಯದೇವಶ್ರೀ ಪ್ರಶಸ್ತಿ ಪ್ರದಾನ

ದಾವಣಗೆರೆಯಲ್ಲಿ ಮಂಗಳವಾರ ನಡೆದ ಜಯದೇವ ಮುರುಘರಾಜೇಂದ್ರ ಸ್ವಾಮೀಜಿಯವರ 65ನೇ ಸ್ಮರಣೋತ್ಸವದಲ್ಲಿ ಸಾಹಿತಿ ಪ್ರೊ.ಎಚ್.ಎ. ಭಿಕ್ಷಾವರ್ತಿಮಠ ಅವರಿಗೆ 'ಶೂನ್ಯಪೀಠ ಚನ್ನಬಸವ', ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ 'ಜಯದೇವಶ್ರೀ' ಹಾಗೂ ವಿಧಾನ ಪರಿಷತ್ ಮಾಜಿ ಸಭಾಪತಿ ಡಾ.ಡಿ.ಎಚ್. ಶಂಕರಮೂರ್ತಿ ಅವರಿಗೆ 'ಶೂನ್ಯಪೀಠ ಅಲ್ಲಮಪ್ರಭು' ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಾಜಿ ಸಚಿವರಾದ ಎಚ್.ಆಂಜನೇಯ, ಎಸ್.ಎಸ್. ಮಲ್ಲಿಕಾರ್ಜುನ, ಚಿತ್ರದುರ್ಗದ ಮುರುಘಾ ಮಠದ ಡಾ.ಶಿವಮೂರ್ತಿ ಮುರುಘಾ ಶರಣರು, ಇಳಕಲ್‌ನ ಗುರುಮಹಾಂತ ಸ್ವಾಮೀಜಿ, ವಿರಕ್ತಮಠದ ಬಸವಪ್ರಭು ಸ್ವಾಮೀಜಿ ಇದ್ದಾರೆ. –ಪ್ರಜಾವಾಣಿ ಚಿತ್ರ

ಮಹಾರಾಷ್ಟ್ರ–ಗುಜರಾತ್‌ನಲ್ಲಿ ಮಳೆ: 9 ಮಂದಿ ಸಾವು

ಅಹಮದಾಬಾದ್/ಮುಂಬೈ/ಪಾಲ್ಘರ್ (ಪಿಟಿಐ): ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ ಮಳೆ ಮುಂದುವರಿದಿದ್ದು, ಮಂಗಳವಾರ 9 ಮಂದಿ ಮೃತಪಟ್ಟಿದ್ದಾರೆ.

'ಗುಜರಾತ್‌ನ ವಿವಿಧೆಡೆ ಧಾರಾಕಾರ ಮಳೆ ಸುರಿಯುತ್ತಿದೆ. ಹಿಂದಿನ 24 ಗಂಟೆಗಳಲ್ಲಿ 6 ಮಂದಿ ಅಸುನೀಗಿದ್ದಾರೆ. ಇದರೊಂದಿಗೆ ಜೂನ್ 1ರಿಂದ ಈವರೆಗೆ ಮೃತಪಟ್ಟವರ ಸಂಖ್ಯೆ 69ಕ್ಕೆ ಹೆಚ್ಚಿದೆ. ಒಟ್ಟು 27,896 ಮಂದಿಯನ್ನು ನೆರೆಪೀಡಿತ ಪ್ರದೇಶಗಳಿಂದ ಸುರಕ್ಷಿತ ಜಾಗಕ್ಕೆ ಸ್ಥಳಾಂತರಿಸಲಾಗಿದೆ' ಎಂದು ಸಚಿವ ರಾಜೇಂದ್ರ ತ್ರಿವೇದಿ ಹೇಳಿದ್ದಾರೆ.

'ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ನೆರೆಪೀಡಿತ ಬೊಡೇಲಿ ನಗರಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಜೊತೆಗೆ ಇತರ ಪ್ರದೇಶಗಳ ವೈಮಾನಿಕ ಸಮೀಕ್ಷೆಯನ್ನೂ ಕೈಗೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಕಚೇರಿ ತಿಳಿಸಿದೆ.

'ಅಂಜಾರ್ ತಾಲ್ಲೂಕಿನಲ್ಲಿ ಆರು ಗಂಟೆಗಳಲ್ಲಿ 167 ಮಿ.ಮೀ. ಮಳೆಯಾಗಿದೆ. ಗಾಂಧಿಧಾಮ ತಾಲ್ಲೂಕಿನಲ್ಲಿ 145 ಮಿ.ಮೀ. ಮಳೆ ಸುರಿದಿದೆ. ಹಲವು ಪ್ರದೇಶಗಳಲ್ಲಿ 'ರೆಡ್ ಅಲರ್ಟ್' ಘೋಷಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಭಾರಿ ಮಳೆಯಿಂದಾಗಿ ಮೂವರು ಮೃತರಾಗಿದ್ದಾರೆ. ಪ್ರವಾಹ ಪೀಡಿತ ಪ್ರದೇಶದಿಂದ 95 ಮಂದಿಯನ್ನು ಸ್ಥಳಾಂತರಿಸಲಾಗಿದೆ' ಎಂದು ಮಹಾರಾಷ್ಟ್ರ ಸರ್ಕಾರ ಮಂಗಳವಾರ ತಿಳಿಸಿದೆ.

'ಶಾಸಕರ ಪುತ್ರ, ಸಹೋದರ ಶಾಮೀಲು'

ಸಿಐಡಿ ಸಲ್ಲಿಸಿರುವ ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಅಫಜಲಪುರದ ಕಾಂಗ್ರೆಸ್ ಶಾಸಕ ಎಂ.ವೈ. ಪಾಟೀಲ ಅವರ ಪುತ್ರ ಅರುಣಕುಮಾರ್ ಪಾಟೀಲ ಹಾಗೂ ಶಾಸಕರ ಸಹೋದರ ಎಸ್.ವೈ. ಪಾಟೀಲ ಶಾಮೀಲಾಗಿದ್ದರು. ಈ ಸಂಬಂಧ ನನ್ನೊಂದಿಗೆ ಮತ್ತು ಮಂಜುನಾಥ ಮೇಳಕುಂದಿಯೊಂದಿಗೆ ಮಾತನಾಡಿದ್ದರು' ಎಂದು ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಸಿಐಡಿ ಅಧಿಕಾರಿಗಳ ಎದುರು ಒಪ್ಪಿದ್ದಾರೆ.

ಈ ವಿಚಾರವನ್ನು ಏಪ್ರಿಲ್ 24ರಂದು ತಮ್ಮ ಎದುರು ವಿಚಾರಣೆ ವೇಳೆ ತಿಳಿಸಿದ್ದಾಗಿ ಸಿಐಡಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ವಿವರಿಸಿದ್ದಾರೆ.

'ಪರೀಕ್ಷೆಗೂ ಮೊದಲು ನನಗೆ ಕರೆ ಮಾಡಿದ್ದ ಶಾಸಕರ ಪುತ್ರ ಅರುಣ ಕುಮಾರ್ ತಂದೆಯವರ ಗನ್‌ಮ್ಯಾನ್ ಹಯ್ಯಾಳಿ ದೇಸಾಯಿ ಪಿಎಸ್‌ಐ ಪರೀಕ್ಷೆ ಬರೆದಿದ್ದು, ಆತನನ್ನು ಪಾಸ್ ಮಾಡಿಸಬೇಕು ಎಂದು ಹೇಳಿದರು. ಅದಕ್ಕೆ ನಾನು ಮಂಜುನಾಥ ಮೇಳಕುಂದಿ ಮೊಬೈಲ್ ನಂಬರ್ ಕೊಟ್ಟಿದ್ದೆ. ನಂತರ ನನಗೆ ಕರೆ ಮಾಡಿದ ಮೇಳಕುಂದಿ, ಹಯ್ಯಾಳಿ ಪಾಸ್ ಮಾಡಿಸಲು ಹಣ ಯಾರು ಕೊಡುತ್ತಾರೆ ಎಂದು ಅರುಣಕುಮಾರಗೆ ಕೇಳಿದೆ. ಹಣವನ್ನು ನನ್ನ ಚಿಕ್ಕಪ್ಪ ಎಸ್.ವೈ. ಪಾಟೀಲ ಕೊಡುತ್ತಾರೆ ಎಂದು ಹೇಳಿದ್ದಾಗಿ ತಿಳಿಸಿದರು. ನಂತರ ₹40 ಲಕ್ಷ ಕೊಡುವಂತೆ ಹೇಳು ಎಂದು ಮಂಜುನಾಥ ಹೇಳಿದ್ದ. ಅಂತಿಮವಾಗಿ ₹ 30 ಲಕ್ಷಕ್ಕೆ ಡೀಲ್ ಮುಗಿಯಿತು. ಮುಂಗಡ ಹಣವಾಗಿ ₹10 ಲಕ್ಷವನ್ನು ಕೊಡಲು ಒಪ್ಪಿದರು. ಒಂದು ಬಾರಿ ನಾನು ಹೋಗಿ ₹5 ಲಕ್ಷ, ಮತ್ತೊಂದು ಬಾರಿ ₹5 ಲಕ್ಷವನ್ನು ನನ್ನ ಅಣ್ಣ ಮಹಾಂತೇಶ ಪಾಟೀಲ ಪಡೆದಿದ್ದೇವೆ' ಎಂದು ತಿಳಿಸಿದ್ದಾಗಿ ದೋಷಾರೋಪಪಟ್ಟಿಯಲ್ಲಿ ವಿವರಿಸಲಾಗಿದೆ.

ನಿಗಮ–ಮಂಡಳಿ: 52 ಅಧ್ಯಕ್ಷರ ನೇಮಕ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆಯ ಮೇರೆಗೆ ಸರ್ಕಾರದ ಮುಖ್ಯಕಾರ್ಯದರ್ಶಿಯವರು ವಿವಿಧ ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳಿಗೆ ಸೇರಿದ 52 ಅಧ್ಯಕ್ಷರ ನಾಮನಿರ್ದೇಶನವನ್ನು ರದ್ದುಪಡಿಸಿ ಆದೇಶ ಹೊರಡಿಸಿದ್ದಾರೆ.

ಹೊಸಬರ ನೇಮಕಕ್ಕೆ ಈಗಾಗಲೇ ಪಟ್ಟಿ ಸಿದ್ಧವಾಗಿದ್ದು, ಯಾವುದೇ ಕ್ಷಣದಲ್ಲಿ ಅದು ಹೊರಬೀಳಬಹುದು. ಅದಕ್ಕೂ ಮುನ್ನ ಇನ್ನೂ 13 ನಿಗಮ–ಮಂಡಳಿಗಳ ಅಧ್ಯಕ್ಷರನ್ನು ಹುದ್ದೆಯಿಂದ ಕೈಬಿಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಅನಂತ ಹೆಗಡೆ ಆಶೀಸರ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ಪ್ರಾಧಿಕಾರದ ಕೆ.ರತ್ನಪ್ರಭ, ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ ತಮ್ಮೇಶ್ ಗೌಡ, ಕರ್ನಾಟಕ ಪುಸ್ತಕ ಪ್ರಾಧಿಕಾರದ ಎಂ.ಎನ್.ನಂದೀಶ್ ಹಂಚೆ, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸುನೀಲ್ ಪುರಾಣಿಕ್, ಸಾವಯವ ಕೃಷಿ ಉತ್ಪನ್ನ ಮಟ್ಟದ ಅಧಿಕಾರಯುಕ್ತ ಸಮಿತಿಯ ಆನಂದ್ ಆ. ಶ್ರೀ, ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಪ್ರಮೀಳಾ ನಾಯ್ಡು, ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ ಬೇಳೂರು ರಾಘವೇಂದ್ರ ಶೆಟ್ಟಿ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಶೃತಿ ಅವರು ಹುದ್ದೆ ಕಳೆದುಕೊಂಡ ಪ್ರಮುಖರು.

ಆದರೆ, ಶಾಸಕ ಬಿ.ಎಸ್.ಯಡಿಯೂರಪ್ಪ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ರುದ್ರೇಶ್, ಸಿದ್ದಲಿಂಗಸ್ವಾಮಿ ಮತ್ತು ಚಂದು ಪಾಟೀಲ ಅವರನ್ನು ಕೈಬಿಟ್ಟಿಲ್ಲ. 13 ಅಧ್ಯಕ್ಷರನ್ನು ಕೈಬಿಡುವ ಪಟ್ಟಿಯಲ್ಲಿ ಇವರದ್ದೂ ಸೇರಿರಬಹುದು ಎಂದು ಮೂಲಗಳು ಹೇಳಿವೆ.

ಯಾವುದೇ ಅಧ್ಯಕ್ಷರನ್ನು ಉಳಿಸಿ ಎಂದು ಯಡಿಯೂರಪ್ಪ ಅವರು ಮುಖ್ಯಮಂತ್ರಿ ಅವರಿಗೆ ದೂರವಾಣಿ ಕರೆ ಮಾಡಿಲ್ಲ. ಯಾರನ್ನೂ ಕೈಬಿಡುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿಲ್ಲ, ಉಳಿದಿರುವ ಅವಧಿಗೆ ಬೇರೆಯವರಿಗೆ ನೀಡಬಹುದು ಎಂದು ಅವರು ಹೇಳಿದ್ದಾಗಿ ಯಡಿಯೂರಪ್ಪ ಆಪ್ತರು ಹೇಳಿದ್ದಾರೆ.

ಪಕ್ಷದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಬಿಎಸ್‌ವೈ ಅವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸಿದ್ದರು.

ವಿರೋಧ ಪಕ್ಷಗಳು, ಸಾಮಾಜಿಕ ಕಾರ್ಯಕರ್ತರ ತೀವ್ರ ಆಕ್ಷೇಪ

‘ರಾಷ್ಟ್ರ ಲಾಂಛನ ತಿರುಚಿದ ಬಿಜೆಪಿ’

ನವದೆಹಲಿ (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ರಾಷ್ಟ್ರ ಲಾಂಛನದ ಸ್ವರೂಪವನ್ನು ತಿರುಚಿದೆ ಎಂದು ವಿರೋಧ ಪಕ್ಷಗಳು ಮತ್ತು ಸಾಮಾಜಿಕ ಕಾರ್ಯಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ‘ಅಶೋಕ ಸ್ತಂಭದಿಂದ ಆಯ್ಕೆ ಮಾಡಿಕೊಳ್ಳಲಾಗಿರುವ ಲಾಂಛನದಲ್ಲಿರುವ ಸಿಂಹಗಳು ಘನಗಂಭೀರ ಭಾವದಲ್ಲಿವೆ. ಆದರೆ, ನಿರ್ಮಾಣ ಹಂತದಲ್ಲಿರುವ ನೂತನ ಸಂಸತ್ ಭವನದ ಕಟ್ಟಡದ ಮೇಲೆ ಪ್ರಧಾನಿ ನರೇಂದ್ರ ಮೋದಿ ಅವರು ಅನಾವರಣ ಮಾಡಿರುವ ಲಾಂಛನದಲ್ಲಿರುವ ಸಿಂಹಗಳು ಕೆರಳಿದ ರೂಪದಲ್ಲಿವೆ’ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಲಾಂಛನವನ್ನು ಬದಲಿಸುವಂತೆ ಆಗ್ರಹಿಸಿವೆ.

ನಿರ್ಮಾಣ ಹಂತದ ಕಟ್ಟಡದ ಮೇಲೆ ಸ್ಥಾಪಿಸಲಾಗಿರುವ 9.5 ಟನ್ ತೂಕದ ಲಾಂಛನವನ್ನು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಅನಾವರಣ ಮಾಡಿದ್ದರು. ಆ ಕಾರ್ಯಕ್ರಮಕ್ಕೆ ರಾಷ್ಟ್ರಪತಿ, ವಿರೋಧ ಪಕ್ಷಗಳ ನಾಯಕರಿಗೆ ಆಹ್ವಾನ ನೀಡಿರಲಿಲ್ಲ. ಇದಕ್ಕೂ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಮೂಲ ಲಾಂಛನದ ಚಿತ್ರ ಮತ್ತು ಪ್ರಧಾನಿ ಅನಾವರಣ ಮಾಡಿದ ಲಾಂಛನದ ಚಿತ್ರವನ್ನು ವಿರೋಧ ಪಕ್ಷಗಳ ಹಲವು ನಾಯಕರು ಟ್ವೀಟ್ ಮಾಡಿದ್ದಾರೆ. ಜತೆಗೆ ‘ಭಾರತದ ರಾಷ್ಟ್ರ ಲಾಂಛನ (ಅಸಮಂಜಸ ಬಳಕೆ ನಿಷೇಧ) ಕಾಯ್ದೆ–2005’ರಲ್ಲಿರುವ ಲಾಂಛನದ ವಿನ್ಯಾಸವನ್ನೂ ಹಂಚಿಕೊಂಡಿದ್ದಾರೆ.

‘ಇದು ನಮ್ಮ ರಾಷ್ಟ್ರ ಲಾಂಛನಕ್ಕೆ ಮಾಡಿದ ಅವಮಾನ. ಎಡಭಾಗದಲ್ಲಿರುವುದು, ಮೂಲ ಲಾಂಛನದಲ್ಲಿರುವ ಆಕರ್ಷಕ ಮತ್ತು ರಾಜಗಾಂಭೀರ್ಯದಿಂದ ಇರುವ ಸಿಂಹಗಳು. ಬಲಭಾಗದಲ್ಲಿರುವುದು, ನೂತನ ಸಂಸತ್ ಭವನದ ಮೇಲೆ ಸ್ಥಾಪಿಸಲಾಗಿರುವ ಲಾಂಛನದಲ್ಲಿರುವ ಸಿಡಿಗುಟ್ಟುತ್ತಿರುವ ಮತ್ತು ಅನಗತ್ಯವಾಗಿ ಕೆರಳಿರುವ ಸಿಂಹಗಳು. ನಾಚಿಕೆಯಾಗಬೇಕು. ಇದನ್ನು ತಕ್ಷಣವೇ ಬದಲಿಸಿ’ ಎಂದು ಎರಡು ಲಾಂಛನಗಳ ಚಿತ್ರಗಳ ಜೊತೆಗೆ ಟಿಎಂಸಿ ರಾಜ್ಯಸಭಾ ಸದಸ್ಯ ಜವಾಹರ್ ಸರ್ಕಾರ್ ಟ್ವೀಟ್ ಮಾಡಿದ್ದಾರೆ.

‘ನರೇಂದ್ರ ಮೋದಿ ಜೀ, ಲಾಂಛನದಲ್ಲಿರುವ ಸಿಂಹಗಳ ಮುಖ ನೋಡಿ. ಅವು ಸಾರಾನಾಥದಲ್ಲಿರುವ ಅಶೋಕ ಸ್ತಂಭದ ಸಿಂಹಗಳನ್ನು ಹೋಲುತ್ತವೆಯೇ ಅಥವಾ ಗಿರ್ ಅರಣ್ಯದ ಸಿಂಹದ ವಿಕೃತ ರೂಪವನ್ನು ಹೋಲುತ್ತದೆಯೇ ಎಂಬುದನ್ನು ಗಮನಿಸಿ. ಅಗತ್ಯವಿದ್ದರೆ ಅದನ್ನು ಸರಿಪಡಿಸಿ’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧಿರ್ ರಂಜನ್ ಚೌಧರಿ ಟ್ವೀಟ್ ಮಾಡಿದ್ದಾರೆ.

‘ಅಶೋಕ ಸ್ತಂಭದಲ್ಲಿದ್ದ ಸಿಂಹಗಳನ್ನು ರಾಷ್ಟ್ರಲಾಂಛನವಾಗಿ ನಾವು 1950ರಲ್ಲೇ ಅಳವಡಿಸಿಕೊಂಡಿದ್ದೇವೆ. ನಮ್ಮ ಈ ಸಿಂಹಗಳು ಕೆರಳಿದಂತೆ ಮತ್ತು ಕ್ರೋಧಭರಿತವಾಗಿ ಏಕೆ ಕಾಣಬೇಕು’ ಎಂದು ಇತಿಹಾಸ ತಜ್ಞ ಎಸ್.ಇರ್ಫಾನ್ ಹಬೀಬ್ ಪ್ರಶ್ನಿಸಿದ್ದಾರೆ.

ಸರ್ಕಾರ ತಿರುಗೇಟು: ವಿರೋಧ ಪಕ್ಷಗಳ ಈ ಆಕ್ಷೇಪಕ್ಕೆ ಕೇಂದ್ರ ಸರ್ಕಾರ ಪ್ರತಿಕ್ರಿಯೆ ನೀಡಿದೆ. ‘ಸೌಂದರ್ಯವು ನೋಡುವವರ ನೋಟದಲ್ಲಿದೆ’ ಎಂದು ಕೇಂದ್ರ ವಸತಿ ಮತ್ತು ನಗರಾಡಳಿತ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ. ‘ಮೂಲ ಲಾಂಛನದ ಯಥಾವತ್ ಪ್ರತಿಕೃತಿಯನ್ನು ಅಷ್ಟು ಎತ್ತರದಲ್ಲಿ ಇರಿಸಿದರೆ, ಅದು ಕಾಣುವುದೇ ಇಲ್ಲ. ಹೀಗಾಗಿ ಅದರ ಗಾತ್ರವನ್ನು ಹೆಚ್ಚಿಸಲಾಗಿದೆ. ವಿರೋಧ ಪಕ್ಷಗಳು ರಾಜಕೀಯ ಕಾರಣಕ್ಕೆ ಇದನ್ನು ವಿವಾದವಾಗಿಸುತ್ತಿವೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.



ಟಿಎಂಸಿ ನಾಯಕ ಜವಾಹರ್ ಸರ್ಕಾರ್ ಅವರು ಟ್ವೀಟ್ ಮಾಡಿರುವ ಲಾಂಛನದ ಚಿತ್ರದಲ್ಲಿರುವ ಸಿಂಹ



ನೂತನವಾಗಿ ನಿರ್ಮಿಸುತ್ತಿರುವ ಸಂಸತ್ ಭವನದ ಮೇಲಿನ ಲಾಂಛನದಲ್ಲಿರುವ ಸಿಂಹ –ಎಎಫ್‌ಪಿ ಚಿತ್ರ

ಗಾಂಧಿಯಿಂದ ಗೋಡ್ಸೆವರೆಗೂ ನಮ್ಮ ರಾಷ್ಟ್ರ ಲಾಂಛನದಲ್ಲಿನ ಸಿಂಹಗಳು ಘನತೆ ಮತ್ತು ಶಾಂತಿಯಿಂದ ಕುಳಿತಿದ್ದವು. ಮೋದಿಯ ನವ ಭಾರತದಲ್ಲಿ ಸಿಂಹಗಳು ವ್ಯಗ್ರವಾಗಿವೆ

ಪ್ರಶಾಂತ್ ಭೂಷಣ್
ಸಾಮಾಜಿಕ ಕಾರ್ಯಕರ್ತ


ಲಾಂಛನ ಅನಾವರಣ ಕಾರ್ಯಕ್ರಮಕ್ಕೆ ವಿರೋಧ ಪಕ್ಷಗಳನ್ನು ಆಹ್ವಾನಿಸಿಲ್ಲ. ಸಂಸತ್ತಿನಲ್ಲಿ ತಾವೊಬ್ಬರೇ ಇರುವುದು ಎಂದು ಮೋದಿ ಭಾವಿಸಿದ್ದಾರೆಯೇ?

ಅಸಾದುದ್ದೀನ್ ಒವೈಸಿ
ಎಐಎಂಐಎಂ ಅಧ್ಯಕ್ಷ

ಕಾಯ್ದೆ ಹೇಳುವುದೇನು...

ರಾಷ್ಟ್ರ ಲಾಂಛನದ ವಿನ್ಯಾಸ ಹೇಗಿರಬೇಕು ಎಂಬುದನ್ನು ‘ಭಾರತದ ರಾಷ್ಟ್ರ ಲಾಂಛನ (ಅಸಮಂಜಸ ಬಳಕೆ ನಿಷೇಧ) ಕಾಯ್ದೆ–2005’ರ, ‘ವಿವರ ಮತ್ತು ವಿನ್ಯಾಸ’ ಪರಿಚ್ಛೇದದಲ್ಲಿ ವಿವರಿಸಲಾಗಿದೆ. ಈ ಪರಿಚ್ಛೇದದ ಅನುಬಂಧ–1ರಲ್ಲಿ ಲಾಂಛನದ ಒಂದು ವಿನ್ಯಾಸವನ್ನು ನೀಡಲಾಗಿದೆ. ಸರ್ಕಾರಿ ಮುದ್ರೆಗಳು, ಲೆಟರ್‌ಹೆಡ್‌ಗಳಲ್ಲಿ ಬಳಸಲು ರೂಪಿಸಿರುವ ಲಾಂಛನದ ವಿನ್ಯಾಸವನ್ನು ಈ ಅನುಬಂಧದಲ್ಲಿ ನೀಡಲಾಗಿದೆ. ದೊಡ್ಡ ಗಾತ್ರದಲ್ಲಿ ಮರು ತಯಾರಿಸಲು, ಮತ್ತೊಂದು ರೀತಿಯ ವಿನ್ಯಾಸವನ್ನು ನೀಡಲಾಗಿದೆ. ಆ ವಿನ್ಯಾಸದ ಚಿತ್ರವನ್ನು ಇದೇ ಪರಿಚ್ಛೇದದ ಅನುಬಂಧ–2ರಲ್ಲಿ ನೀಡಲಾಗಿದೆ. ‘ಅನುಬಂಧ–1 ಮತ್ತು ಅನುಬಂಧ–2ರಲ್ಲಿ ನೀಡಲಾಗಿರುವ ವಿನ್ಯಾಸಗಳಿಗೆ ರಾಷ್ಟ್ರ ಲಾಂಛನವು ಬದ್ಧವಾಗಿರಬೇಕು’ ಎಂದು ‘ವಿವರ ಮತ್ತು ವಿನ್ಯಾಸ’ ಪರಿಚ್ಛೇದದಲ್ಲಿ ಸೂಚಿಸಲಾಗಿದೆ.

ನಟ ಶಿವರಂಜನ್ ಮೇಲೆ ಗುಂಡಿನ ದಾಳಿ ಅಪಾಯದಿಂದ ಪಾರು



ಬೈಲಹೊಂಗಲ: ಪಟ್ಟಣದಲ್ಲಿ ಮಂಗಳವಾರ ರಾತ್ರಿ, ಚಿತ್ರನಟ ಶಿವರಂಜನ್ ಬೋಳಣ್ಣವರ ಅವರ ಮೇಲೆ ವ್ಯಕ್ತಿಯೊಬ್ಬ ಗುಂಡಿನ ದಾಳಿ ಮಾಡಿದ್ದಾನೆ. ಅದೃಷ್ಟವಶಾತ್ ಶಿವರಂಜನ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇಲ್ಲಿನ ಹಳೆಯ ಹಣಮಂತ ದೇವರ ದೇವಸ್ಥಾನ ಹತ್ತಿರದ ಅವರ ಮನೆ ಎದುರು ಗುಂಡಿನ ದಾಳಿ ನಡೆದಿದೆ. ಬೈಕ್ ಮೇಲೆ ಬಂದ ಆರೋಪಿ ಮೂರು ಸುತ್ತು ಗುಂಡು ಹಾರಿಸಿದ. ಆದರೆ, ಗುರಿ ತಪ್ಪಿದ್ದರಿಂದ ಕೂದಲೆಳೆ ಅಂತರದಲ್ಲೇ ನಟ ಪಾರಾದರು ಎಂದು ಪ್ರತ್ಯಕ್ಷದರ್ಶಿ ತಿಳಿಸಿದ್ದಾರೆ.

ಆರೋಪಿ ಪರಾರಿಯಾಗಿದ್ದು, ಪತ್ತೆಗೆ ಜಾಲ ಬೀಸಲಾಗಿದೆ.

ಎಸ್‌ಪಿ ಡಾ.ಸಂಜೀವ ಪಾಟೀಲ, ಡಿಎಸ್ಪಿ ಶಿವಾನಂದ ಕಟಗಿ, ಸಿಪಿಐ ಯು.ಎಚ್. ಸಾತೇನಹಳ್ಳಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲಂಚ ಪ್ರಕರಣದ ಜಾಮೀನು ಅರ್ಜಿ

ವಿಚಾರಣೆಗೆ ತಾತ್ಕಾಲಿಕ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಉಪ ತಹಶೀಲ್ದಾರ್ ಜಾಮೀನು ಅರ್ಜಿ ವಿಚಾರಣೆಯನ್ನು ಮೂರು ದಿನಗಳ ಕಾಲ ತಡೆ ಹಿಡಿಯುವಂತೆ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

ಜಾಮೀನು ಅರ್ಜಿಯ ವಿಚಾರಣೆಯ ವೇಳೆ ನ್ಯಾಯಮೂರ್ತಿ ಎಚ್.ಪಿ ಸಂದೇಶ್ ಅವರು ಎಸಿಬಿ ಎಡಿಜಿಪಿ ಸೀಮಂತ್ ಕುಮಾರ್ ಸಿಂಗ್ ಕಾರ್ಯವೈಖರಿ ವಿರುದ್ಧ ಟೀಕಿಸಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ತ್ರಿಸದಸ್ಯ ಪೀಠ ಈ ನಿರ್ದೇಶನ ನೀಡಿದೆ.

ಮಂಗಳವಾರ ವಿಚಾರಣೆಯ ವೇಳೆ ಕರ್ನಾಟಕ ಸರ್ಕಾರದ ಪರವಾಗಿ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಎಸಿಬಿ ಕಾರ್ಯವೈಖರಿ ಟೀಕಿಸಿದ ಕಾರಣಕ್ಕೆ ವರ್ಗಾವಣೆ ಬೆದರಿಕೆ ಬಂದಿದೆ ಎಂಬ ನ್ಯಾಯಮೂರ್ತಿ ಸಂದೇಶ್ ಅವರ ಹೇಳಿಕೆ ಹಾಗೂ ಸೀಮಂತ್ ಕುಮಾರ್ ಸಿಂಗ್ ಅವರ ಮೇಲ್ಮನವಿ ಪ್ರಕರಣಗಳನ್ನು ಮಂಗಳವಾರ ವಿಚಾರಣೆ ನಡೆಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ತಿಳಿಸಿತ್ತು. ಸುಪ್ರೀಂ ಕೋರ್ಟ್ ತುರ್ತಾಗಿ ವಿಚಾರಣೆ ಕೈಗೆತ್ತಿಕೊಳ್ಳಲು ಒಪ್ಪಿದ ನಂತರವೂ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿಯ ವಿಚಾರಣೆ ನಡೆಸಲಾಗಿದೆ. ಇದನ್ನು ತಡೆಯಬಹುದಾಗಿತ್ತು’ ಎಂದು ವಾದಿಸಿದರು.

‘ಜಾಮೀನು ಅರ್ಜಿಯ ವಿಚಾರಣೆ ವೇಳೆಗೆ ನ್ಯಾಯಮೂರ್ತಿ ಸಂದೇಶ್ ಅವರು ಎಸಿಬಿ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂಬ ಹೇಳಿಕೆ ನೀಡಿದ್ದಾರೆ. ಜತೆಗೆ, ಎಸಿಬಿ ವಿರುದ್ಧ ತನಿಖೆಗೆ ಆದೇಶ ನೀಡಿದ್ದಾರೆ. ಇದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಜಾಮೀನು ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಂತೆ ಪರಿಗಣಿಸುವುದು ಸರಿಯಲ್ಲ’ ಎಂದೂ ಆಕ್ಷೇಪಿಸಿದರು.

ಎಸಿಬಿ ಪರವಾಗಿ ಹಾಜರಾದ ಹಿರಿಯ ವಕೀಲ ಅಮಿತ್ ಕುಮಾರ್, ‘ನನ್ನ ಕಕ್ಷಿದಾರರ ವಾರ್ಷಿಕ ಗೋಪ್ಯ ವರದಿಗಳನ್ನು ತೆರೆದ ನ್ಯಾಯಾಲಯದಲ್ಲಿ ಓದಲಾಗಿದೆ. ಅವರ ಪರ ವಾದವನ್ನು ಆಲಿಸದೆ ನಿರ್ದೇಶನಗಳನ್ನು ನೀಡಲಾಗಿದೆ’ ಎಂದು ಆಕ್ಷೇಪಿಸಿದರು.

ವಾದವನ್ನು ಆಲಿಸಿದ ನ್ಯಾಯಪೀಠವು, ಜುಲೈ 11ರಂದು ನೀಡಿದ ಆದೇಶ ಸೇರಿದಂತೆ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಆದೇಶಗಳ ವಿವರ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತು.

ಲಂಚ ಪ್ರಕರಣದಲ್ಲಿ ಆರೋಪಿಯಾಗಿರುವ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಕಳೆದ ವಾರ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಚ್.ಪಿ.ಸಂದೇಶ್, ಎಸಿಬಿಯ ಕಾರ್ಯವೈಖರಿ ವಿರುದ್ಧ ಕೆಂಡ ಕಾರಿದ್ದರು. ಎಸಿಬಿಯ ಮುಖ್ಯಸ್ಥ ಎಡಿಜಿಪಿಯೇ ಕಳಂಕಿತ ಅಧಿಕಾರಿ ಎಂದೂ ಕಿಡಿಕಾರಿದ್ದರು. ಎಸಿಬಿ ಮುಖ್ಯಸ್ಥರನ್ನು ಟೀಕಿಸಿದ್ದಕ್ಕೆ ವರ್ಗಾವಣೆ ಬೆದರಿಕೆ ಬಂದಿದೆ ಎಂದೂ ಹೇಳಿದ್ದರು.



ಗುಜರಾತ್‌ನ ಮುಂದ್ರಾ ಬಂದರಿನಲ್ಲಿ ಮಾದಕವಸ್ತು ಪತ್ತೆ

₹376 ಕೋಟಿ ಮೌಲ್ಯದ ಹೆರಾಯಿನ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಭಯೋತ್ಪಾದನೆ ತಡೆ ಘಟಕವು (ಎಟಿಎಸ್) ₹376 ಕೋಟಿ ಮೌಲ್ಯದ 75 ಕೆ.ಜಿ.ಗೂ ಹೆಚ್ಚು ಹೆರಾಯಿನ್ ಅನ್ನು ಮುಂದ್ರಾ ಬಂದರಿನಲ್ಲಿದ್ದ ಕಂಟೇನರ್ ಒಂದರಿಂದ ಮಂಗಳವಾರ ವಶಕ್ಕೆ ಪಡೆದಿದೆ. ಎರಡು ತಿಂಗಳ ಹಿಂದೆಯೇ ಈ ಕಂಟೇನರ್ ಬಂದರು ತಲುಪಿತ್ತು. ಅರಬ್ ಸಂಯುಕ್ತ ಸಂಸ್ಥಾನದಿಂದ (ಯುಎಇ) ಬಂದ ಈ ಕಂಟೇನರ್ ಅನ್ನು ಪಂಜಾಬ್‌ಗೆ ಸಾಗಿಸಲು ಉದ್ದೇಶಿಸಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಅನುಮಾನಾಸ್ಪದವಾದ ಕಂಟೇನರ್ ಒಂದು ಮುಂದ್ರಾ ಬಂದರಿನಲ್ಲಿ ಸುಮಾರು ಎರಡು ತಿಂಗಳುಗಳಿಂದ ಇದೆ ಎಂಬ ಮಾಹಿತಿಯ ಆಧಾರದಲ್ಲಿ ದಾಳಿ ನಡೆಸಿದ ಎಟಿಎಸ್, ಹೆರಾಯಿನ್ ವಶಕ್ಕೆ ಪಡೆದಿದೆ. ಕಂಟೇನರ್‌ನಲ್ಲಿ 4,000 ಕೆ.ಜಿ. ಬಟ್ಟೆ ಇತ್ತು. 450 ಸುರುಳಿಗಳಾಗಿ ಈ ಬಟ್ಟೆಯನ್ನು ಸುತ್ತಲಾಗಿತ್ತು. ಇವುಗಳ ಪೈಕಿ 64 ಸುರುಳಿಗಳ ಒಳಗೆ ಅತ್ಯುತ್ತಮ ಗುಣಮಟ್ಟದ ಹೆರಾಯಿನ್ ಅನ್ನು ಅಡಗಿಸಿ ಇರಿಸಲಾಗಿತ್ತು. ಎಕ್ಸ್‌ರೇ ಪರಿಶೀಲನೆ ಸಂದರ್ಭದಲ್ಲಿ ಪತ್ತೆಯಾಗುವುದನ್ನು ತಡೆಯುವುದಕ್ಕೆ ನೀಲಿ ಸೆಲ್ಲೋ ಟೇಪ್‌ನಲ್ಲಿ ಹೆರಾಯಿನ್ ಅನ್ನು ಸುತ್ತಿ ಇರಿಸಲಾಗಿತ್ತು.

ಕಾರ್ಯಾಚರಣೆಯಲ್ಲಿ ಪಂಜಾಬ್ ಪೊಲೀಸರೂ ಭಾಗಿಯಾಗಿದ್ದರು.

- 2020ರ ಬಳಿಕ ₹5000 ಕೋಟಿ ಮೌಲ್ಯದ ಸಾವಿರ ಕೆ.ಜಿ. ಹೆರಾಯಿನ್ ಅನ್ನು ಎಟಿಎಸ್ ವಶಕ್ಕೆ ಪಡೆದಿದೆ
- ₹20,000 ಕೋಟಿ ಮೌಲ್ಯದ 3,000 ಕಿಲೋ ಹೆರಾಯಿನ್ ಅನ್ನು ರೆವೆನ್ಯೂ ಗುಪ್ತಚರ ನಿರ್ದೇಶನಾಲಯವು ಕಳೆದ ವರ್ಷ ಪತ್ತೆ ಮಾಡಿತ್ತು

ಯುಎಇಯ ಅಜ್ಮಾನ್‌ನಲ್ಲಿರುವ ಗ್ರೀನ್ ಫಾರೆಸ್ಟ್ ಜನರಲ್ ಟ್ರೇಡಿಂಗ್ ಎಂಬ ಕಂಪನಿಯಿಂದ ಈ ಕಂಟೇನರ್ ಅನ್ನು ಕಳುಹಿಸಲಾಗಿದೆ. ಈ ಪ್ರಕರಣದಲ್ಲಿ ಯಾರೆಲ್ಲ ಭಾಗಿಯಾಗಿದ್ದಾರೆ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆದಿದೆ. ಪಶ್ಚಿಮ ಬಂಗಾಳದ ಗಾಂಧಿಧಾಮ್ ಎಂಬ ಸಂಸ್ಥೆಯ ಕಚ್ ಶಾಖೆಯಲ್ಲಿ ಕೆಲಸ ಮಾಡುತ್ತಿರುವ ಡೆಲಿವರಿ ಏಜೆಂಟ್ ಒಬ್ಬನನ್ನು ಗುರುತಿಸಲಾಗಿದೆ.

ಬಂದರಿನಲ್ಲಿಯೇ ಹೆರಾಯಿನ್ ಕಂಟೇನರ್ ಅನ್ನು ಬಿಟ್ಟು ಹೋದ ಎರಡನೇ ಪ್ರಕರಣ ಇದು ಎಂದು ಎಟಿಎಸ್ ಹೇಳಿದೆ. ‘ಸಿಕ್ಕಿ ಬೀಳದ ರೀತಿಯಲ್ಲಿ ಒಯ್ಯುವ ಉದ್ದೇಶದಿಂದಲೇ ಕಂಟೇನರ್ ಅನ್ನು ಬಂದರಿನಲ್ಲಿ ಬಿಟ್ಟಿದ್ದರು ಎಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಆದರೆ, ಖಚಿತವಾಗಿ ಏನನ್ನೂ ಹೇಳಲಾಗದು’ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಬಿ.ಪಿ. ರೋಜಿಯ ಹೇಳಿದ್ದಾರೆ.

ಹೈಕೋರ್ಟ್ ಚಾಟಿ ಬೆನ್ನಲ್ಲೇ ಅಧಿಕಾರಿಗಳು ಚುರುಕು

ತನಿಖಾ ಪ್ರಗತಿಯ ಬೆನ್ನುಹತ್ತಿದ ಎಸಿಬಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಕಾರ್ಯವೈಖರಿ ಕುರಿತು ಹೈಕೋರ್ಟ್ ಚಾಟಿ ಬೀಸಿರುವ ಬೆನ್ನಲ್ಲೇ, ಆರು ವರ್ಷಗಳ ಅವಧಿಯಲ್ಲಿ ದಾಖಲಿಸಿದ ಪ್ರಕರಣಗಳ ಸ್ಥಿತಿಗತಿ ಕುರಿತು ತನಿಖಾ ಸಂಸ್ಥೆ ಅವಲೋಕನಕ್ಕೆ ಇಳಿದಿದೆ.

ಪ್ರತಿ ಪ್ರಕರಣವನ್ನೂ ಪ್ರತ್ಯೇಕವಾಗಿ ಪರಿಶೀಲಿಸಿ ತನಿಖಾ ಪ್ರಗತಿಯ ವರದಿ ಸಿದ್ಧಪಡಿಸಲಾಗುತ್ತಿದೆ. ಎಲ್ಲ ಜಿಲ್ಲೆಗಳಿಂದಲೂ ತನಿಖಾಧಿಕಾರಿಗಳು ಎಸಿಬಿ ಕೇಂದ್ರ ಕಚೇರಿಗೆ ದೌಡಾಯಿಸಿ, ಭ್ರಷ್ಟಾಚಾರ ಪ್ರಕರಣಗಳ ತನಿಖೆ ಕುರಿತು ವರದಿ ಸಲ್ಲಿಸುತ್ತಿದ್ದಾರೆ.

2016 ಮಾರ್ಚ್ 14ರಂದು ಎಸಿಬಿ ಅಸ್ತಿತ್ವಕ್ಕೆ ಬಂದಿದೆ. ಈವರೆಗೆ 350ಕ್ಕೂ ಹೆಚ್ಚು ಎಫ್‌ಐಆರ್‌ಗಳನ್ನು ದಾಖಲಿಸಿ, ತನಿಖೆ ನಡೆಸಿದೆ. ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಅನುಕೂಲಕರ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆದ ಆರೋಪದ ಮೇಲೆ ಬಂಧಿತರಾಗಿರುವ ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಉಪ ತಹಶೀಲ್ದಾರ್ ಮಹೇಶ್ ಅವರ ಜಾಮೀನು ಅರ್ಜಿ ವಿಚಾರಣೆ ವೇಳೆ, ಎಸಿಬಿ ದಾಖಲಿಸಿದ ಪ್ರಕರಣಗಳ ತನಿಖಾ ಪ್ರಗತಿಯ ವಿಷಯ ಚರ್ಚೆಗೆ ಬಂದಿತ್ತು.

ಎಫ್‌ಐಆರ್ ದಾಖಲು, ಆರೋಪಪಟ್ಟಿ ಸಲ್ಲಿಕೆ, ‘ಬಿ’ ವರದಿ ಸಲ್ಲಿಕೆ ಕುರಿತು ಖಚಿತ ಮಾಹಿತಿಯೊಂದಿಗೆ ಸಮಗ್ರ ವರದಿ ಸಲ್ಲಿಸುವಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು. ಆ ಬಳಿಕ ಎಲ್ಲ ಪ್ರಕರಣಗಳ ಸ್ಥಿತಿಗತಿ ಕುರಿತು ಪರಿಶೀಲನೆ ಆರಂಭಿಸಲಾಗಿತ್ತು. ಈ ಪ್ರಕ್ರಿಯೆ ಮುಂದುವರಿದಿದ್ದು, ಮಂಗಳವಾರವೂ ತನಿಖಾ ಸಂಸ್ಥೆಯ ಅಧಿಕಾರಿಗಳು ಹಲವು ಸುತ್ತಿನ ಸಭೆ ನಡೆಸಿದ್ದಾರೆ.

ಜಿಲ್ಲಾವಾರು ಅವಲೋಕನ: ‘ಪ್ರತಿ ಜಿಲ್ಲೆಯಲ್ಲೂ ಎಸಿಬಿ ಘಟಕಗಳಿವೆ. ಆಯಾ ಜಿಲ್ಲೆಯಲ್ಲಿ ದಾಖಲಾದ ಪ್ರಕರಣಗಳ ಕುರಿತು ಪ್ರತ್ಯೇಕವಾಗಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಆಯಾ ವಲಯದ ಎಸ್‌ಪಿಗಳು ಮತ್ತು ಜಿಲ್ಲಾ ಘಟಕದ ಮುಖ್ಯಸ್ಥರ ಜತೆ ಚರ್ಚಿಸಿ, ತನಿಖಾ ಪ್ರಗತಿ ಪರಿಶೀಲಿಸಲಾಗುತ್ತಿದೆ. ‘ಬಿ’ ವರದಿ ಸಲ್ಲಿಸಿರುವ ಪ್ರಕರಣಗಳಲ್ಲಿ ತನಿಖಾಧಿಕಾರಿಗಳಿಂದಲೇ ವಿವರಣೆ ಪಡೆಯಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

‘ಹಲವು ಪ್ರಕರಣಗಳಲ್ಲಿ ಆರೋಪಿತ ಸರ್ಕಾರಿ ನೌಕರರ ವಿರುದ್ಧ ಆರೋಪಪಟ್ಟಿ ಸಲ್ಲಿಸಲು ಸರ್ಕಾರದ ವಿವಿಧ ಇಲಾಖೆಗಳಿಂದ ಅನುಮತಿ ದೊರಕಬೇಕಿದೆ. ಅಂತಹ ಪ್ರಕರಣಗಳನ್ನೂ ಪಟ್ಟಿ ಮಾಡುತ್ತಿದ್ದು, ಆರೋಪಪಟ್ಟಿ ಸಲ್ಲಿಸಲು ತ್ವರಿತವಾಗಿ ಅನುಮತಿ ನೀಡುವಂತೆ ಸಕ್ಷಮ ಪ್ರಾಧಿಕಾರಗಳಿಗೆ ಪತ್ರ ಬರೆಯಲು ಎಸಿಬಿ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ’ ಎಂದು ಮೂಲಗಳು ಹೇಳಿವೆ.

105 ಪ್ರಕರಣಗಳಲ್ಲಿ ‘ಬಿ’ ವರದಿ

ಎಸಿಬಿ ಈವರೆಗೆ 105 ಪ್ರಕರಣಗಳಲ್ಲಿ ‘ಬಿ’ ವರದಿ ಸಲ್ಲಿಸಿದೆ ಎಂದು ತನಿಖಾ ಸಂಸ್ಥೆಯ ಪರ ವಕೀಲರು ಶುಕ್ರವಾರ ಹೈಕೋರ್ಟ್‌ಗೆ ಮಾಹಿತಿ ನೀಡಿದ್ದರು. ಆದರೆ, ಅಂಕಿಅಂಶ ನಿಖರವಾಗಿಲ್ಲ ಎಂದು ನ್ಯಾಯಾಲಯ ಆಕ್ಷೇಪ ವ್ಯಕ್ತಪಡಿಸಿತ್ತು.

ಜ್ಞಾನಭಾರತಿ ಆವರಣದ ಕೆಂಪೇಗೌಡ ಅಧ್ಯಯನ ಕೇಂದ್ರಕ್ಕೆ ಟೆಂಡರ್

ಮೊತ್ತ ಶೇ 25.73ರಷ್ಟು ಹೆಚ್ಚಳ!

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಟೆಂಡರ್ ಮೊತ್ತಕ್ಕಿಂತ ಶೇ 5ಕ್ಕಿಂತ ಹೆಚ್ಚಿನ ಮೊತ್ತವನ್ನು ಗುತ್ತಿಗೆದಾರರು ನಮೂದಿಸಿದ್ದರೆ ಅದನ್ನು ಅಂಗೀಕರಿಸಬಾರದು ಎಂಬ ಆರ್ಥಿಕ ಇಲಾಖೆ ಸುತ್ತೋಲೆಯನ್ನು ಸರ್ಕಾರ ಮತ್ತೊಮ್ಮೆ ಉಲ್ಲಂಘಿಸಿದೆ. ಶೇ 25.73ರಷ್ಟು ಹೆಚ್ಚಿನ ಮೊತ್ತದ ಟೆಂಡರ್‌ಗೆ ಅನುಮೋದನೆ ನೀಡಿದೆ.

ಜ್ಞಾನಭಾರತಿ ವಾರ್ಡ್‌ನಲ್ಲಿ (ಬೆಂಗಳೂರು ವಿಶ್ವವಿದ್ಯಾಲಯ) ಕೆಂಪೇಗೌಡ ಅಧ್ಯಯನ ಕೇಂದ್ರ ನಿರ್ಮಿಸಲು ಟೆಂಡರ್ ಮೊತ್ತವನ್ನು ₹38.70 ಕೋಟಿಗೆ ನಿಗದಿಪಡಿಸಿ ಟೆಂಡರ್ ಆಹ್ವಾನಿಸಲಾಗಿತ್ತು. ಕಡಿಮೆ ಮೊತ್ತ ದಾಖಲಿಸಿದ್ದ ಎಂ.ಆರ್.ಕನ್‌ಸ್ಟ್ರಕ್ಷನ್ಸ್‌ಗೆ ಟೆಂಡರ್ ಅಂತಿಮಗೊಳಿಸಲು 2021ರ ಜೂನ್ 24ರಂದು ಅಧಿಕಾರಯುಕ್ತ ಸಮಿತಿ ನಿರ್ಧರಿಸಿತ್ತು. ಆ ಕಂಪನಿಯವರು ಹೆಚ್ಚಿನ ದರ ನಮೂದಿಸಿದ್ದರಿಂದ ಶೇ 5ರಷ್ಟು ಮೊತ್ತವನ್ನಷ್ಟೆ ಹೆಚ್ಚಿಸಿ ₹40.63 ಕೋಟಿಗೆ ಅಂತಿಮಗೊಳಿಸಬಹುದು ಎಂದು ಸಮಿತಿ ತಿಳಿಸಿತ್ತು. ಆದರೆ, ಸಂಧಾನಕ್ಕೆ ಗುತ್ತಿಗೆದಾರರು ಒಪ್ಪದಿದ್ದರಿಂದ ಟೆಂಡರ್ ಪ್ರಕ್ರಿಯೆ ರದ್ದುಗೊಳಿಸಿ ಮರು ಟೆಂಡರ್ ಕರೆಯಲಾಯಿತು.

ಪ್ರಜಾವಾಣಿ ವಿಶೇಷ

2022ರ ಜನವರಿ 20ರಂದು ಬಿಡ್ ತೆರೆಯಲಾಗಿದ್ದು, ಮತ್ತೊಮ್ಮೆ ಟೆಂಡರ್ ಸಲ್ಲಿಸಿದ್ದ ಎಂ.ಆರ್. ಕನ್‌ಸ್ಟ್ರಕ್ಷನ್ಸ್ ₹49.14 ಕೋಟಿ ದಾಖಲಿಸಿತ್ತು. ಟೆಂಡರ್ ಸಲ್ಲಿಸಿದ್ದ ಮತ್ತೊಬ್ಬ ಗುತ್ತಿಗೆದಾರರು ₹51.93 ಕೋಟಿ ದಾಖಲಿಸಿದ್ದರು. ಈ ಇಬ್ಬರಲ್ಲಿ ಎಂ.ಆರ್.ಕನ್‌ಸ್ಟ್ರಕ್ಷನ್ಸ್ ಕಡಿಮೆ ಮೊತ್ತ ದಾಖಲಿಸಿದ್ದರೂ, ಟೆಂಡರ್‌ಗಿಟ್ಟ ಮೊತ್ತಕ್ಕಿಂತ (₹38.70 ಕೋಟಿ) ಶೇ 26.99ರಷ್ಟು ಹೆಚ್ಚಾಗಿತ್ತು. ಆದ್ದರಿಂದ ಮತ್ತೊಮ್ಮೆ ಸಂಧಾನ ನಡೆಸಲು ಸಮಿತಿ ತಿಳಿಸಿತ್ತು. ಗುತ್ತಿಗೆದಾರರು ₹48.66 ಕೋಟಿ ದಾಖಲಿಸಿ ಅಂತಿಮ ದರಪಟ್ಟಿ ಸಲ್ಲಿಸಿದ್ದರು.

2021ರ ನ.2ರಂದು ಚಾಲ್ತಿಯಲ್ಲಿದ್ದ ಪರಿಷ್ಕೃತ ದರಗಳಿಗೆ ಹೋಲಿಸಿದರೆ ಶೇ 18.12ರಷ್ಟು ಹೆಚ್ಚುವರಿ ಹಾಗೂ 2022ರ ಮಾರ್ಚ್ 18ರಂದು ಜಾರಿ ಬಂದಿರುವ ಲೋಕೋಪಯೋಗಿ ಇಲಾಖೆ ಏಕರೂಪ ಅನುಸೂಚಿತ ದರ ಪಟ್ಟಿಗೆ ಹೋಲಿಸಿದರೆ ಶೇ 9.89ರಷ್ಟು ಹೆಚ್ಚುವರಿಯಾಗುತ್ತದೆ ಎಂದು ಸಮಿತಿ ಅಭಿಪ್ರಾಯಪಟ್ಟಿತ್ತು. ಈ ವಿಷಯದಲ್ಲಿ ಅಂತಿಮ ತೀರ್ಮಾನವನ್ನು ಮುಖ್ಯಮಂತ್ರಿ ಅವರ ವಿವೇಚನೆಗೆ ಬಿಡಲು ನಿರ್ಧರಿಸಿತ್ತು.

ಮುಖ್ಯಮಂತ್ರಿ ಅವರ ಅನುಮೋದನೆ ಪಡೆದು ಜೂನ್ 8ರಂದು ಸರ್ಕಾರ ಆದೇಶ ಹೊರಡಿಸಿದ್ದು, ₹48.66 ಕೋಟಿಗೆ ಟೆಂಡರ್ ಮೊತ್ತವನ್ನು ಅಂತಿಮಗೊಳಿಸಲಾಗಿದೆ. ಒಟ್ಟಾರೆ ಶೇ 25.73ರಷ್ಟು ಹೆಚ್ಚುವರಿ ಮೊತ್ತಕ್ಕೆ ಟೆಂಡರ್ ಅಂತಿಮಗೊಂಡಿದೆ. ಹೊಸ ದರಕ್ಕೆ ಹೋಲಿಸಿದರೂ ಶೇ 9.89ರಷ್ಟು ಹೆಚ್ಚಾಗಿದೆ.

ನೆಪಮಾತ್ರವಾದ ಸುತ್ತೋಲೆ

‘ಟೆಂಡರ್ ಮೊತ್ತಕ್ಕಿಂತ ಶೇ 5ಕ್ಕೂ ಹೆಚ್ಚಿನ ಮೊತ್ತ ಇದ್ದರೆ ಯಾವುದೇ ಕಾರಣಕ್ಕೂ ಅಂಗೀಕರಿಸಬಾರದು’ ಎಂದು ಆರ್ಥಿಕ ಇಲಾಖೆ ಮೇ 10ರಂದು ಸುತ್ತೋಲೆ ಹೊರಡಿಸಿದೆ.

‘ವಿಶೇಷ ಪ್ರಕರಣಗಳಲ್ಲಿ ಸಮರ್ಥನೀಯ ಕಾರಣಗಳನ್ನು ದಾಖಲಿಸಿ ಉನ್ನತ ಪ್ರಾಧಿಕಾರದ ಅನುಮೋದನೆ ಪಡೆಯಬೇಕು’ ಎಂದು ತಿಳಿಸಿದೆ.

‘ಮುಖ್ಯಮಂತ್ರಿ ಅವರಿಂದ ಅನುಮೋದನೆ ಪಡೆದು ಟೆಂಡರ್ ಮೊತ್ತ ಹೆಚ್ಚಿಸಿಕೊಳ್ಳುವುದು ಇತ್ತೀಚೆಗೆ ಹೆಚ್ಚಾಗಿದೆ. ಬಸವೇಶ್ವರನಗರ ಜಂಕ್ಷನ್‌ನಲ್ಲಿ ಹೆಚ್ಚುವರಿ ಮೇಲ್ಸೇತುವೆ ಕಾಮಗಾರಿ ಟೆಂಡರ್ ಮೊತ್ತವನ್ನೂ ಇದೇ ರೀತಿ ಹೆಚ್ಚಿಸಲಾಗಿತ್ತು’ ಎಂದು ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಮಾನ್ಯತಾ ರೆಸಿಡೆನ್ಸಿ ವೃತ್ತಕ್ಕೆ ಶಿವರಾಜ್‌ಕುಮಾರ್ ಹೆಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಶಿವರಾಜ್‌ಕುಮಾರ್ ಅವರ 60ನೇ ಜನ್ಮದಿನದ ಅಂಗವಾಗಿ ಥಣಿಸಂದ್ರದ ಮಾನ್ಯತಾ ರೆಸಿಡೆನ್ಸಿ ನಿವಾಸಿಗಳು ತಮ್ಮ ಬಡಾವಣೆಯ ವೃತ್ತಕ್ಕೆ ‘ಡಾ. ಶಿವರಾಜ್‌ಕುಮಾರ್ ವೃತ್ತ’ ಎಂದು ಮಂಗಳವಾರ ನಾಮಕರಣ ಮಾಡಿದ್ದಾರೆ.

‘ಬಡಾವಣೆಯಲ್ಲಿ ಕೆಲವು ಪ್ರಮುಖ ಫಲಕಗಳನ್ನು ಅಳವಡಿಸಲು ಬಯಸಿದ್ದೆವು. ನಮ್ಮ ಬಡಾವಣೆಯ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುವ ಶಿವರಾಜ್‌ಕುಮಾರ್ ಅವರಿಗೆ ಗೌರವ ಸಲ್ಲಿಸುವುದಕ್ಕೆ ಇದು ಸೂಕ್ತ ಸಮಯ ಎಂದು ನಾವು ಭಾವಿಸಿ, ಹೆಸರಿಸಿದ್ದೇವೆ’ ಎಂದು ಮಾನ್ಯತಾ ರೆಸಿಡೆನ್ಸಿ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಖಜಾಂಜಿ ಸುಧಾ ಸುಕುಮಾರನ್ ಹೇಳಿದರು.

‘ಶಿವರಾಜ್‌ಕುಮಾರ್ ಅವರು ಬಡಾವಣೆಯ ಹಲವು ವಿಷಯಗಳಿಗಾಗಿ ಹೋರಾಡಿದ್ದಾರೆ. ನಮ್ಮ ಬಡಾವಣೆಯ ಸುತ್ತಮುತ್ತ ಸಾಕಷ್ಟು ವಾಹನ ದಟ್ಟಣೆ ಉಂಟಾಗುತ್ತಿತ್ತು. ಹೊರ ವರ್ತುಲ ರಸ್ತೆಯಲ್ಲಿ ಸಾಕಷ್ಟು ಕಾಮಗಾರಿಗಳು ನಡೆಯುತ್ತಿರುವುದರಿಂದ ಪ್ರತಿಯೊಂದು ಅಡ್ಡರಸ್ತೆ, ಮುಖ್ಯರಸ್ತೆಯಲ್ಲೂ ವಾಹನ ದಟ್ಟಣೆ ಇರುತ್ತಿತ್ತು. ಈ ಸಂದರ್ಭದಲ್ಲಿ ನಮ್ಮ ಹೋರಾಟಕ್ಕೆ ಶಿವರಾಜ್‌ಕುಮಾರ್ ಜೊತೆಗೂಡಿದ್ದರು’ ಎಂದು ಸುಧಾ ಹೇಳಿದರು.



ಮಾನ್ಯತಾ ರೆಸಿಡೆನ್ಸಿಯ ವೃತ್ತಕ್ಕೆ ‘ಡಾ. ಶಿವರಾಜ್‌ಕುಮಾರ್ ವೃತ್ತ’ ಎಂದು ಬಡಾವಣೆ ನಿವಾಸಿಗಳ ಸಂಘದವರು ಮಂಗಳವಾರ ನಾಮಕರಣ ಮಾಡಿದರು

‘ಶಿವರಾಜ್‌ಕುಮಾರ್ ತುಂಬಾ ಸರಳ ವ್ಯಕ್ತಿ. ನಮ್ಮ ಬಡಾವಣೆಯಲ್ಲಿ ಹಲವು ಬಾರಿ ಅವರು ಓಡಾಡುತ್ತಾರೆ’ ಎಂದರು.

‘ಬಡಾವಣೆ ಬಿಬಿಎಂಪಿಯ ಸ್ವತ್ತು ಅಲ್ಲದಿರುವುದರಿಂದ, ವೃತ್ತಕ್ಕೆ ಹೆಸರಿಡಲು ಬಿಬಿಎಂಪಿ ಸೇರಿದಂತೆ ಯಾವುದೇ ಸಂಸ್ಥೆಯ ಅನುಮತಿ ಅಗತ್ಯವಿಲ್ಲ. ಈ ವೃತ್ತವನ್ನು ಕಲ್ಲಿನಿಂದ ರಚಿಸಲಾಗಿದೆ’ ಎಂದರು.

ಪುನೀತ್ ಹೆಸರಿನಲ್ಲಿ ಪುಷ್ಪ ಪ್ರದರ್ಶನ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಆಗಸ್ಟ್ 5ರಿಂದ 15ರ ವರೆಗೆ ಚಿತ್ರನಟ ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ ಪುಷ್ಪ ಪ್ರದರ್ಶನ ನಡೆಸಲಾಗುವುದು ಎಂದು ತೋಟಗಾರಿಕಾ ಸಚಿವ ಮುನಿರತ್ನ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಕಳೆದ ವರ್ಷ ಕೋವಿಡ್ ಕಾರಣದಿಂದ ಪುಷ್ಪ ಪ್ರದರ್ಶನ ನಡೆಸಿರಲಿಲ್ಲ. ಈ ವರ್ಷ ಕೋವಿಡ್ ಸುರಕ್ಷತಾ ಮಾರ್ಗಸೂಚಿಯನ್ನು ಪಾಲಿಸಿಕೊಂಡು ಪ್ರದರ್ಶನ ನಡೆಸಲಾಗುವುದು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆ.5ರಂದು ಚಾಲನೆ ನೀಡಲಿದ್ದಾರೆ’ ಎಂದರು.

ಪ್ರದರ್ಶನಕ್ಕಾಗಿ ವಿದೇಶಗಳಿಂದ ಹೂವುಗಳನ್ನು ತರಿಸಲಾಗುವುದು. ಡಾ. ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ಪ್ರತಿಮೆಗಳನ್ನು ಪುಷ್ಪಗಳಿಂದ ಅಲಂಕರಿಸಲಾಗುವುದು. ಪ್ರದರ್ಶನ ವೀಕ್ಷಣೆಗೆ ಬರುವವರಿಗೆ ವಿಧಿಸುವ ಪ್ರವೇಶ ಶುಲ್ಕ ಹೆಚ್ಚಿಸುವ ಕುರಿತು ಚರ್ಚಿಸಿಲ್ಲ ಎಂದು ಹೇಳಿದರು.

‘ಅತಿವೃಷ್ಟಿಯಿಂದ ಆಗಿರುವ ತೋಟಗಾರಿಕಾ ಬೆಳೆಹಾನಿ ಕುರಿತು ಅಧಿಕಾರಿಗಳ ವರದಿ ಬಳಿಕ ಪರಿಹಾರದ ಕುರಿತು ತೀರ್ಮಾನಿಸಲಾಗುವುದು’ ಎಂದರು.

ಶಿವರಾಮ ಕಾರಂತ ಬಡಾವಣೆ: 2 ವಾರಗಳಲ್ಲಿ ಅಧಿಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಡಾ.ಕೆ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಎರಡು ವಾರಗಳಲ್ಲಿ ಟೆಂಡರ್ ಅಧಿಸೂಚನೆ ಹೊರಡಿಸುವಂತೆ ಕರ್ನಾಟಕ ಸರ್ಕಾರ, ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಸುಪ್ರೀಂ ಕೋರ್ಟ್ ಮಂಗಳವಾರ ನಿರ್ದೇಶನ ನೀಡಿದೆ.

17 ವಿವಿಧ ಗ್ರಾಮಗಳಲ್ಲಿ ಒಟ್ಟು 3,546 ಎಕರೆ 12 ಗುಂಟೆಗಳಲ್ಲಿ ಶಿವರಾಮ ಕಾರಂತ ಬಡಾವಣೆ ರಚಿಸಲು ₹5,337 ಕೋಟಿ ಪರಿಷ್ಕೃತ ಅಂದಾಜಿಗೆ ಕರ್ನಾಟಕ ಸರ್ಕಾರ ಜುಲೈ 8ರಂದು ಅನುಮೋದನೆ ನೀಡಿದೆ.

286 ಎಕರೆ 15 ಗುಂಟೆ ಜಾಗ ಭೂಸ್ವಾಧೀನಕ್ಕೆ ನಾಲ್ಕು ವಾರಗಳಲ್ಲಿ ಪ್ರಾಧಿಕಾರವು ಪ್ರಾಥಮಿಕ ಅಧಿಸೂಚನೆ ಹೊರಡಿಸಬೇಕು ಎಂದೂ ಸುಪ್ರೀಂ ಕೋರ್ಟ್ ಸೂಚಿಸಿದೆ. ಈ ಜಾಗಗಳನ್ನು ಬಡಾವಣೆಗೆ ಸೇರಿಸುವ ಕಾರ್ಯಸಾಧ್ಯತೆ ಬಗ್ಗೆಯೂ ಪರಿಶೀಲಿಸುವಂತೆ ನ್ಯಾಯಮೂರ್ತಿ ಎಸ್.ಅಬ್ದುಲ್ ನಜೀರ್ ಹಾಗೂ ಸಂಜೀವ್ ಖನ್ನಾ ಅವರನ್ನು ಒಳಗೊಂಡ ಪೀಠವು ಸೂಚಿಸಿದೆ.

ನ್ಯಾಯಮೂರ್ತಿ ಎ.ವಿ.ಚಂದ್ರಶೇಖರ್ ಸಮಿತಿಯ 16 ಹಾಗೂ 17ನೇ ಪ್ರಗತಿ ವರದಿಗಳನ್ನು ಸಮಿತಿಯ ಪರವಾಗಿ ವಕೀಲ ಸಂಜಯ್ ಎಂ. ನುಲಿ ಅವರು ಜೂನ್ 6 ಹಾಗೂ ಜೂನ್ 30ರಂದು ನ್ಯಾಯಪೀಠಕ್ಕೆ ಸಲ್ಲಿಸಿದ್ದರು. ಈ ವರದಿಗಳನ್ನು ಪರಿಶೀಲಿಸಿದ ಬಳಿಕ ಪೀಠವು ಈ ನಿರ್ದೇಶನ ನೀಡಿದೆ.

ಬಡಾವಣೆ ನಿರ್ಮಾಣಕ್ಕೆ ಕರ್ನಾಟಕ ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿರುವುದನ್ನು ಪೀಠವು ಇದೇ ವೇಳೆ ಗಮನಿಸಿತು. ಪ್ರಾಧಿಕಾರವು ಎರಡು ವಾರಗಳಲ್ಲಿ ಪ್ರಗತಿ ವರದಿಯನ್ನು ಸಲ್ಲಿಸಬೇಕು ಎಂದೂ ಪೀಠ ಹೇಳಿತು.

ಪ್ರಸ್ತಾವಿತ ಬಡಾವಣೆ ನಿರ್ಮಾಣಕ್ಕಾಗಿ 17 ಗ್ರಾಮಗಳಲ್ಲಿ 416 ಎಕರೆ ಹಾಗೂ 30 ಗುಂಟೆ ಸರ್ಕಾರಿ ಜಾಗ ಭೂಸ್ವಾಧೀನಕ್ಕೆ ಪ್ರಾಧಿಕಾರ ಅಧಿಸೂಚನೆ ಹೊರಡಿಸಿರುವುದನ್ನು ಪೀಠ ಗಮನಿಸಿತು. ಇದರಲ್ಲಿ 225 ಎಕರೆ ಹಾಗೂ 9 ಗುಂಟೆ ಜಾಗವನ್ನು ಸಾರ್ವಜನಿಕ ಉದ್ದೇಶದ ಬಳಕೆಗೆ ಬೆಂಗಳೂರು ನಗರ ಜಿಲ್ಲಾಧಿಕಾರಿಯವರು ಭಾಗಶಃ ಅನುಮೋದನೆ ನೀಡಿದ್ದಾರೆ.

‘ಸಂಘಟಿತ ಹೋರಾಟ ಸ್ವಾಗತಾರ್ಹ’

ಬೆಂಗಳೂರು: ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಆಯೋಗದ ವರದಿಯ ಶಿಫಾರಸು ಅನುಷ್ಠಾನಕ್ಕೆ ಆಗ್ರಹಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಒಟ್ಟಾಗಿ ಹೋರಾಟ ನಡೆಸುತ್ತಿರುವುದು ಸ್ವಾಗತಾರ್ಹ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

ನಾಗರಿಕರ ಸಮಸ್ಯೆ ಆಲಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕರಿಗೆ ಅಧಿಕಾರಿಗಳು ಸಿಗುವ ಸಮಯದ ಫಲಕವನ್ನು ಎಲ್ಲ ಕಚೇರಿಗಳ ಮುಂದೆ ಅಳವಡಿಸಬೇಕು. ಆ ಸಮಯದಲ್ಲಿ ಹಾಜರಿದ್ದು, ಸಮಸ್ಯೆಗಳನ್ನು ಆಲಿಸಿ ಪರಿಹರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

‘ವಲಯದ ಕಡೆ ಮುಖ್ಯ ಆಯುಕ್ತರ ನಡೆ’ ಕಾರ್ಯಕ್ರಮದ ಅಂಗವಾಗಿ ದಕ್ಷಿಣ ವಲಯದ ಕಚೇರಿಯಲ್ಲಿ ಮಂಗಳವಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಅವರು ಮಾತನಾಡಿದರು.

ವಾರ್ಡ್ ಸಮಿತಿ ಸಭೆಗಳು ಸರಿಯಾಗಿ ನಡೆಯುತ್ತಿಲ್ಲ ಎಂಬ ದೂರಿಗೆ ಸಭೆ ನಡೆಸಿ, ಅದರ ನಡಾವಳಿ ಕಳುಹಿಸಲು ಸೂಚಿಸಿದರು. ಬಸವನಗುಡಿ ವ್ಯಾಪ್ತಿಯಲ್ಲಿ ಒಎಫ್‌ಸಿ ಕೇಬಲ್‌ನವರು ರಸ್ತೆ ಅಗೆದು ಸಂಚಾರಕ್ಕೆ ಅಡ್ಡಿಪಡಿಸಿದ್ದಾರೆ ಎಂಬ ದೂರಿಗೆ ಸ್ಪಂದಿಸಿ, ಅಧಿಕಾರಿಗಳು ಭೇಟಿ ನೀಡಿ ಕೇಬಲ್‌ಗಳನ್ನು ಜಪ್ತಿ ಮಾಡಲು ಆದೇಶಿಸಿದರು.

ಗಿರಿನಗರ ವಾರ್ಡ್ ವ್ಯಾಪ್ತಿಯಲ್ಲಿ 10 ದಿನಗಳಲ್ಲಿ ಕಸದ ಲಾರಿ ಪಾಯಿಂಟ್ ಅನ್ನು ಸ್ಥಳಾಂತರಿಸಬೇಕು. ವಿಲ್ಸನ್ ಗಾರ್ಡನ್ ರಸ್ತೆ ಬದಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡಬೇಕು ಎಂದರು.

ಕಲ್ಯಾಣ ವಿಭಾಗದಿಂದ ವಿಧಾನಸಭಾ ಕ್ಷೇತ್ರವಾರು 2 ಸಾವಿರ ಒಂಟಿ ಮನೆಗಳ ನಿರ್ಮಾಣಕ್ಕೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಶೀಘ್ರ ಅನುದಾನವನ್ನು ಹಂಚಿಕೆ ಮಾಡಲಾಗುವುದು ಎಂದು ಹೇಳಿದರು.

ಕೋರಮಂಗಲ 100 ಅಡಿ ರಸ್ತೆ ಈಜಿಪುರ ಸಿಗ್ನಲ್-ಕೇಂದ್ರೀಯ ಸದನ ಮಡಿವಾಳ ಮೇಲುಸೇತುವೆ ಕಾಮಗಾರಿ ಸ್ಥಳದಲ್ಲಿ ಪಾದಚಾರಿ ಮಾರ್ಗದ ದುರಸ್ತಿ ಮಾಡಲು, ಚರಂಡಿಗಳ ಸ್ವಚ್ಛತೆ ಕಾಪಾಡಲು, ರಸ್ತೆ ಮಧ್ಯೆ ಮಣ್ಣು ಹಾಗೂ ಭಗ್ನಾವಶೇಷ ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಲಯ ಆಯುಕ್ತರಾದ ತುಳಸಿ ಮದ್ದಿನೇನಿ, ವಲಯ ಜಂಟಿ ಆಯುಕ್ತ ಜಗದೀಶ್ ನಾಯಕ್, ವಲಯ ಮುಖ್ಯ ಎಂಜಿನಿಯರ್ ನರಸಾರಾಮ್ ರಾವ್, ವಲಯ ಉಪ ಆಯುಕ್ತರಾದ ಲಕ್ಷ್ಮೀದೇವಿ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

27 ಸಾವಿರ ಟ್ರಾನ್ಸ್‌ಫಾರ್ಮರ್ ನಿರ್ವಹಣೆ: ಬೆಸ್ಕಾಂ

ಬೆಂಗಳೂರು: ದುರಸ್ತಿ ಸ್ಥಿತಿಯಲ್ಲಿದ್ದ ಟ್ರಾನ್ಸ್‌ಫಾರ್ಮರ್‌ಗಳನ್ನು ಸರಿಪಡಿಸುವ ಕಾರ್ಯ ಮುಂದುವರಿಸಲಾಗಿದೆ. ಕಳೆದ ಎರಡು ತಿಂಗಳಿಂದೀಚೆಗೆ ಎಂಟು ಜಿಲ್ಲೆಗಳಲ್ಲಿನ 27,787 ಟ್ರಾನ್ಸ್‌ಫಾರ್ಮರ್‌ಗಳನ್ನು ನಿರ್ವಹಣೆ ಮಾಡಲಾಗಿದೆ ಎಂದು ಬೆಸ್ಕಾಂ ತಿಳಿಸಿದೆ.

ನ್ಯೂನತೆಗಳಿರುವ ಹಾಗೂ ಅಸಮರ್ಪಕ ಗ್ರೌಂಡಿಂಗ್ ಸಮಸ್ಯೆ ಹೊಂದಿರುವ ಟ್ರಾನ್ಸ್‌ಫಾರ್ಮರ್‌ಗಳನ್ನು ನಿರ್ವಹಣೆ ಮಾಡಲಾಗಿದೆ.

ಮೇ 5ರಂದು ಟ್ರಾನ್ಸ್‌ಫಾರ್ಮರ್ ಅಭಿಯಾನಕ್ಕೆ ಇಂಧನ ಸಚಿವ ವಿ. ಸುನಿಲ್ ಕುಮಾರ್ ಚಾಲನೆ ನೀಡಿದ್ದರು. ರಾಜ್ಯದಾದ್ಯಂತ ಎರಡು ಲಕ್ಷಕ್ಕೂ ಅಧಿಕ ಟ್ರಾನ್ಸ್‌ಫಾರ್ಮರ್‌ಗಳ ನಿರ್ವಹಣೆಯ ಗುರಿಯನ್ನು ಎಲ್ಲಾ ಎಸ್ಕಾಂಗಳಿಗೆ ನೀಡಲಾಗಿತ್ತು.

ತಾಂತ್ರಿಕ ಸಮಸ್ಯೆ ಇರುವ ಹಾಗೂ ಜನದಟ್ಟಣೆ ಪ್ರದೇಶಗಳಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ಸಮಗ್ರ ನಿರ್ವಹಣೆಯನ್ನು ಕೈಗೊಳ್ಳಲಾಗಿದೆ.

ಮೇ 5ರಿಂದ ಜುಲೈ 12ರ ವರೆಗೆ ನಿರ್ವಹಣೆ ಮಾಡಿರುವ 27,787 ಟ್ರಾನ್ಸ್‌ಫಾರ್ಮರ್‌ಗಳನ್ನು ಗಳಲ್ಲಿ ಬೆಂಗಳೂರು ನಗರ ಜಿಲ್ಲೆಯವೇ 9,524 ಟ್ರಾನ್ಸ್‌ಫಾರ್ಮರ್‌ಗಳಿವೆ. ತುಮಕೂರು ಜಿಲ್ಲೆಯಲ್ಲಿ 5,232, ದಾವಣಗೆರೆಯಲ್ಲಿ 2,906, ಚಿತ್ರದುರ್ಗದಲ್ಲಿ 2,291, ಚಿಕ್ಕಬಳ್ಳಾಪುರದಲ್ಲಿ 2,646, ರಾಮನಗರದಲ್ಲಿ 2,372 ಮತ್ತು ಕೋಲಾರದಲ್ಲಿ 1,429 ಟ್ರಾನ್ಸ್‌ಫಾರ್ಮರ್‌ಗಳ ನಿರ್ವಹಣೆಯನ್ನು ಬೆಸ್ಕಾಂ ಪೂರ್ಣಗೊಳಿಸಿದೆ ಎಂದು ತಿಳಿಸಿದೆ.

ಎನ್‌ಇಪಿ: ರಾಜ್ಯ ಸರ್ಕಾರದ ವರದಿ ಅವೈಜ್ಞಾನಿಕ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಹಲವು ವಿಷಯಗಳ ಸೇರ್ಪಡೆಗಾಗಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಸಲ್ಲಿಸಲು ಸಿದ್ಧಪಡಿಸಿರುವ ವರದಿ ಅತ್ಯಂತ ಅವೈಜ್ಞಾನಿಕವಾಗಿದೆ ಎಂದು ಎಐಡಿಎಸ್‌ಒ ದೂರಿದೆ.

ಸತ್ಯಕ್ಕೆ ದೂರವಾದ ಮತ್ತು ಐತಿಹಾಸಿಕ ಘಟನೆಗಳನ್ನು ತಿರುಚಿರುವ ಹಾಗೂ ಗೊಡ್ಡು ವಿಚಾರಗಳಿಂದ ಕೂಡಿರುವ ಈ ವರದಿಯನ್ನು ರಾಜ್ಯ ಸರ್ಕಾರ ಈ ಕೂಡಲೇ ಹಿಂಪಡೆಯಬೇಕು ಎಂದು ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಒತ್ತಾಯಿಸಿದ್ದಾರೆ.

ಎನ್‌ಇಪಿ ಪಠ್ಯಕ್ರಮದಲ್ಲಿ ಕೆಲವು ಅಂಶಗಳ ಸೇರ್ಪಡೆಗೆ ರಾಜ್ಯ ನಿಯೋಜಿಸಿದ 26 ಸದಸ್ಯರ ಸಮಿತಿಯು ತನ್ನ ಶಿಫಾರಸನ್ನು ಈಗ ಕೇಂದ್ರ ಸರ್ಕಾರಕ್ಕೆ ನೀಡಿದೆ. ಆದರೆ, ಶಾಲೆಗಳಲ್ಲಿ ಕಲಿಸುವ ಸ್ಥಾಪಿತ ವೈಜ್ಞಾನಿಕ ಅಂಶಗಳನ್ನು ಈ ಸಮಿತಿ ಅಲ್ಲಗೆಳೆದಿರುವುದು ಆಘಾತಕಾರಿಯಾಗಿದೆ ಎಂದಿದ್ದಾರೆ. ‘ಪೈಥಾಗರಸ್ ಪ್ರಮೇಯ’ ಹಾಗೂ ‘ಗುರುತ್ವಾಕರ್ಷಣೆ ಕುರಿತ ನ್ಯೂಟನ್ ಅವರ ಸೇಬಿನ ಘಟನೆಯನ್ನು ‘ನಕಲಿ ಸುದ್ದಿ’ ಎಂದು ಈ ಸಮಿತಿಯು ಹೇಳಿದೆ. ಇಂತಹ ಹಲವಾರು ಅಂಶಗಳನ್ನು ಒಳಗೊಂಡಿರುವ ಸಮಿತಿಯ ಈ ವರದಿಯನ್ನು ರಾಜ್ಯ ಸರ್ಕಾರ ಸಾರಾಸಗಟಾಗಿ ತಿರಸ್ಕರಿಸಬೇಕು ಎಂದು ಒತ್ತಾಯಿಸಿದ್ದಾರೆ.

‘ಸಶಕ್ತ ಸಂಪಾದನೆಯ ಪತಿಗೆ ಜೀವನಾಂಶ ಕೇಳುವ ಹಕ್ಕಿಲ್ಲ’

ಬೆಂಗಳೂರು: ‘ಆರ್ಥಿಕವಾಗಿ ಸಂಪಾದನೆ ಮಾಡುವ ಸಾಮರ್ಥ್ಯ ಹೊಂದಿರುವ ಸಶಕ್ತ ಪುರುಷ ತನ್ನ ಪತ್ನಿಯಿಂದ ಶಾಶ್ವತ ಜೀವನಾಂಶ ಕೇಳಲು ಅವಕಾಶವಿಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಉಡುಪಿಯ ಬಡನಿಡಿಯೂರು ಗ್ರಾಮದ ವ್ಯಕ್ತಿಯೊಬ್ಬರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಹಿರಿಯ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ದೇವಾಲಯವೊಂದರಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದ ಮೇಲ್ಮನವಿದಾರರು ಕೆಲಸ ಕಳೆದುಕೊಂಡಿದ್ದು, ತಮ್ಮ ಜೀವನ ನಿರ್ವಹಣೆಗೆ ಯಾವುದೇ ಆದಾಯವಿಲ್ಲ' ಎಂದು ಮಂಡಿಸಿದ್ದ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, ಹಿಂದೂ ವಿವಾಹ ಕಾಯ್ದೆಯ ಕಲಂ 25ರ ಅಡಿ ಪತ್ನಿಯಿಂದ ಜೀವನಾಂಶ ಕೋರಿದ್ದ ಪತಿಯ ಅರ್ಜಿಯನ್ನು ವಜಾಗೊಳಿಸಿದೆ.

‘ಮೇಲ್ಮನವಿದಾರರು ಸಂಪಾದನೆಯ ಸಾಮರ್ಥ್ಯವಿರುವ ಸಶಕ್ತ ವ್ಯಕ್ತಿಯಾಗಿದ್ದಾರೆ. ಆದ್ದರಿಂದ, ಅವರಿಗೆ ಶಾಶ್ವತ ಜೀವನಾಂಶ ನಿರಾಕರಿಸಿರುವ ಕೌಟುಂಬಿಕ ನ್ಯಾಯಾಲಯದ ಕ್ರಮ ಸರಿಯಾಗಿಯೇ ಇದೆ' ಎಂದು ನ್ಯಾಯಪೀಠ ಹೇಳಿದೆ.

7 ಬಾಂಗ್ಲಾ ಅಕ್ರಮ ವಲಸಿಗರು ವಶಕ್ಕೆ

ರಾಮನಗರ: ಜಿಲ್ಲೆಯಲ್ಲಿ ಅಕ್ರಮವಾಗಿ ನೆಲೆಸಿದ್ದ ಏಳು ಬಾಂಗ್ಲಾದೇಶ ನಿವಾಸಿಗಳನ್ನು ವಶಕ್ಕೆ ಪಡೆದಿದ್ದು, ಅವರನ್ನು ಸ್ವದೇಶಕ್ಕೆ ಕಳುಹಿಸಲು ಸಿದ್ಧತೆ ನಡೆದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಬಾಬು ತಿಳಿಸಿದ್ದಾರೆ.

ಅರಿವಿನ ಬೆಳಕು ವ್ಯಾಸಮಹರ್ಷಿ

• ಎಸ್. ಸೂರ್ಯಪ್ರಕಾಶ ಪಂಡಿತ್

ಮನುಷ್ಯನನ್ನು 'ಮನುಷ್ಯ'ನನ್ನಾಗಿಸುವಂಥ ತತ್ತ್ವವೇ ಗುರುತತ್ತ್ವ. ನಮ್ಮ ಜೀವನದ ದಾರಿ ಹೇಗಿರಬೇಕು, ಹೇಗಿದ್ದರೆ ನಮ್ಮ ಜೀವನ ಸುಂದರವೂ, ಸಾರ್ಥಕವೂ ಆಗಿರಬಲ್ಲದು ಎಂಬ 'ಶಿಕ್ಷಣ'ವನ್ನು ಕೊಡುವವನೇ ಗುರು. ನಮ್ಮ ಸಂಸ್ಕೃತಿಯಲ್ಲಿ ಹೀಗಾಗಿಯೇ ಗುರುತತ್ತ್ವವನ್ನು ತುಂಬ ಆದರಿಸಲಾಗಿದೆ. ಗುರುತತ್ತ್ವದ ಎಲ್ಲ ಆಯಾಮಗಳನ್ನು ಇಲ್ಲಿ 'ವ್ಯಾಸ'ಮಹರ್ಷಿಯಲ್ಲಿ ಕಾಣಿಸಲಾಗಿದೆ.

ವ್ಯಾಸಾಯ ವಿಷ್ಣುರೂಪಾಯ
ವ್ಯಾಸರೂಪಾಯ ವಿಷ್ಣವೇ
ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ
ನಮೋ ನಮಃ

ಭಗವಾನ್ ವೇದವ್ಯಾಸರನ್ನು ಕುರಿತು ಪರಂಪರೆ ಸಲ್ಲಿಸುತ್ತಿರುವ ನಮನ ಇದು. ವಿಷ್ಣುವನ್ನೂ ವ್ಯಾಸರನ್ನೂ ಇಲ್ಲಿ ಅಭೇದವಾಗಿ ನೋಡಲಾಗಿದೆ. 'ವಿಷ್ಣು' ಎಂದರೆ ಸರ್ವವ್ಯಾಪಕನಾದವನು ಎಂದು ಅರ್ಥ. ವೇದವ್ಯಾಸರೂ ಹೀಗೆ ಸರ್ವವ್ಯಾಪಕತೆಯನ್ನು ಪಡೆದವರು ಎಂಬುದು ಪರಂಪರೆಯ ಒಕ್ಕಣೆ. ಪ್ರತಿವರ್ಷ ಆಷಾಢ ಶುಕ್ಲ ಹುಣ್ಣಿಮೆಯಂದು ವ್ಯಾಸರ ಜಯಂತಿಯನ್ನು ಆಚರಿಸುತ್ತೇವೆ. ಇದೇ 'ವ್ಯಾಸಪೂರ್ಣಿಮಾ'. ಇದನ್ನು 'ಗುರುಪೂರ್ಣಿಮಾ' ಎಂದೂ ಆಚರಿಸಲಾಗುತ್ತದೆ.

ನಮ್ಮ ಜೀವನದ ಸಾರ್ಥಕತೆಗೆ ಬೇಕಾದ ಎಲ್ಲ ರೀತಿಯ ವಿದ್ಯೆಗಳ ಮೂಲವನ್ನು ಒದಗಿಸಿದವರು ವ್ಯಾಸಮಹರ್ಷಿ. ಹೀಗಾಗಿ ಅವರನ್ನು 'ಗುರು' ಎಂದು ಪೂಜಿಸುತ್ತಿರುವುದು ಅರ್ಥವತ್ತಾಗಿದೆ. ವೇದಗಳ ಸಾರವನ್ನು ಜಿಜ್ಞಾಸುಗಳಿಗಾಗಿ ಸೂತ್ರರೂಪದಲ್ಲಿ, 'ಬ್ರಹ್ಮಸೂತ್ರ'ಗಳನ್ನಾಗಿ, ಒದಗಿಸಿದರು ವ್ಯಾಸರು. ಶಿಕ್ಷಣವು ಅರಿವಿನ ಜೊತೆ ಆನಂದವನ್ನೂ ನೀಡಬೇಕು; ಅದು ಎಲ್ಲರಿಗೂ ಎಟುಕುವಂತಿರಬೇಕು ಎಂದು 'ಮಹಾಭಾರತ'ವನ್ನು ರಚಿಸಿದವರು ವ್ಯಾಸರು. ಹೀಗೆ 'ವ್ಯಾಸತತ್ತ್ವ' ಎಂಬುದು ಗುರುತತ್ತ್ವದ ವೈಶಾಲ್ಯವನ್ನೂ ಕಾರುಣ್ಯವನ್ನೂ ಪ್ರಕಟಿಸುತ್ತದೆ.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ
ಗುರುರ್ದೇವೋ ಮಹೇಶ್ವರಃ ಗುರುಸ್ಸಾಕ್ಷಾತ್
ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ

ಇದರ ತಾತ್ಪರ್ಯ ಹೀಗೆ: 'ಗುರುವೇ ಬ್ರಹ್ಮ, ಗುರುವೇ ವಿಷ್ಣು, ಗುರುವೇ ಮಹೇಶ್ವರ; ಮಾತ್ರವಲ್ಲ, ಗುರುವೇ ಸಾಕ್ಷಾತ್ ಪರಬ್ರಹ್ಮವಸ್ತುವೂ ಹೌದು. ಗುರುವಿಗೆ ನಮನಗಳು.'

ಭಾಗವತದಲ್ಲಿ ಗುರುವಿನ ಪ್ರಸ್ತಾಪ ಬರುತ್ತದೆ. ಅಲ್ಲಿ ಇಪ್ಪತ್ತನಾಲ್ಕು ಗುರುಗಳ ಒಕ್ಕಣೆ ಇದೆ: ಭೂಮಿ, ಗಾಳಿ, ಆಕಾಶ, ನೀರು, ಬೆಂಕಿ, ಚಂದ್ರ, ಸೂರ್ಯ, ಪಾರಿವಾಳ, ಹೆಬ್ಬಾವು, ಸಮುದ್ರ, ದುಂಬಿ, ಜೇನುನೊಣ, ಆನೆ, ಜೇನನ್ನು ಸಂಗ್ರಹಿಸುವವನು, ಜಿಂಕೆ, ಮೀನು, ವೇಶ್ಯೆ, ಕುರರಪಕ್ಷಿ, ಮಗು, ಕನ್ಯೆ, ಬಾಣವನ್ನು ತಯಾರಿಸುವವನು, ಹಾವು, ಜೇಡರಹುಳು, ಭೃಂಗ – ಇವರೆಲ್ಲರೂ ಗುರುಗಳೇ.

ಈ ಇಪ್ಪತ್ತನಾಲ್ಕು 'ಗುರು'ಗಳನ್ನು ಗಮನಿಸಬೇಕು. ಇವು ಪ್ರಕೃತಿಯ ಎಲ್ಲ ವಿವರಗಳಿಗೂ ಸಂಕೇತವಾಗಿವೆ. ಎಂದರೆ ಸೃಷ್ಟಿಯ ಒಂದೊಂದು ವಿವರವೂ ನಮಗೆ ಗುರುವಾಗಬಲ್ಲದು; ಎಲ್ಲರಿಂದಲೂ ಎಲ್ಲವುಗಳಿಂದಲೂ ಕಲಿಯುವಂಥದ್ದು ಇದ್ದೇ ಇರುತ್ತದೆ.

ಸೃಷ್ಟಿ–ಸ್ಥಿತಿ–ಸಂಹಾರಗಳನ್ನು ನಡೆಸುವವರು ಬ್ರಹ್ಮ–ವಿಷ್ಣು–ಮಹೇಶ್ವರರು. ಗುರುವೇ ನಮ್ಮ ಪಾಲಿಗೆ ಸೃಷ್ಟಿಕರ್ತ, ಸ್ಥಿತಿಕಾರಕ, ಲಯಕಾರಕ; ಮಾತ್ರವಲ್ಲ, ಸಾಕ್ಷತ್ ಪರಬ್ರಹ್ಮವೂ ಗುರುವೇ ಎನ್ನುತ್ತಿದೆ ಶ್ಲೋಕ. ಎಂದರೆ ನಮಗೆ ಜನ್ಮ ಕೊಡುವವನೂ, ನಮ್ಮನ್ನು ಕಾಪಾಡುವವನೂ, ಕೊನೆಗೆ ನಾಶಮಾಡಬಲ್ಲವನೂ ಗುರುವೇ ಆಗಿದ್ದಾನೆ; ಅಷ್ಟೇಕೆ, ಲೋಕೋತ್ತರ ತತ್ತ್ವವೂ, ನಮ್ಮ ಆನಂದಸ್ವರೂಪವೂ ಗುರುವೇ ಆಗಿದ್ದಾನೆ ಎಂಬುದು ಇದರ ತಾತ್ಪರ್ಯ. ❖

ಚಾತುರ್ಮಾಸ್ಯ ವ್ರತ

ಇಂದಿನಿಂದ ಚಾತುರ್ಮಾಸ್ಯವ್ರತವೂ ಆರಂಭವಾಗುತ್ತಿದೆ. ಯತಿ–ಸನ್ಯಾಸಿಗಳನ್ನು ನಾವು ಗುರುರೂಪದಲ್ಲಿಯೇ ಕಾಣುತ್ತೇವೆ. ಚಾತುರ್ಮಾಸ್ಯವ್ರತ ಕೇವಲ ಯತಿಗಳಿಗೆ ಮಾತ್ರವಲ್ಲ, ಗೃಹಸ್ಥರೂ ಆಚರಿಸಬೇಕಾದ ವ್ರತ. ನಮ್ಮ ಶರೀರಕ್ಕೂ ಮನಸ್ಸಿಗೂ ಸಂಯಮವನ್ನು ಒದಗಿಸಿಕೊಡುವ ವ್ರತವಿದು. ಇದು ಅಧ್ಯಯನಕ್ಕೆ ಒದಗುವ ಕಾಲವೂ ಹೌದು; ಸಾಧನೆಗೆ ಪ್ರಶಸ್ತವಾದ ಕಾಲವೂ ಹೌದು. ಇದೇ ದಿನ, ಎಂದರೆ ಆಷಾಢ ಪೂರ್ಣಿಮೆಯಂದು, ಬುದ್ಧ ಭಗವಂತ ತಾನು ಕಂಡುಕೊಂಡ ಕಾಣ್ಕೆಯನ್ನು ಜಗತ್ತಿಗೆ ಉಪದೇಶಿಸಿದ ದಿನವೂ ಹೌದು. ದುಃಖದ ಮೂಲವನ್ನು ಹುಡುಕಿ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವ ದಾರಿಯನ್ನೂ ಅವನು ತಿಳಿಸಿದ. ನಮಗೆ ಇಂದು ಎದುರಾಗಿರುವ ದುಃಖವನ್ನು ಪರಿಹರಿಸಿಕೊಳ್ಳಲು ಅವನ ಉಪದೇಶ ನಮಗೆ ಬೆಳಕಾಗಿ ಒದಗುವಂಥದ್ದು.

ಇಂದು ಗುರು ಪೂರ್ಣಿಮಾ

60ನೇ ವಸಂತಕ್ಕೆ ಕಾಲಿಟ್ಟ ಶಿವಣ್ಣ



ಶಿವರಾಜ್ ಕುಮಾರ್

ಬೆಂಗಳೂರು: ನಟ ಶಿವರಾಜ್ ಕುಮಾರ್ ತಮ್ಮ 60ನೇ ಜನ್ಮದಿನದಂದು ಮಂಗಳವಾರ ಕುಟುಂಬ ಸದಸ್ಯರ ಜೊತೆ ಕಾಲ ಕಳೆದರು. ಚಿತ್ರೀಕರಣದಿಂದ ಕೊಂಚ ಬಿಡುವು ತೆಗೆದುಕೊಂಡು ಮೈಸೂರಿಗೆ ತೆರಳಿದ್ದರು. ಈ ನಡುವೆ ನೆಚ್ಚಿನ ನಟನ ಹೊಸ ಚಿತ್ರಗಳ ಪೋಸ್ಟರ್ ಬಿಡುಗಡೆಯಲ್ಲೇ ಅಭಿಮಾನಿಗಳು ಸಂಭ್ರಮ ಕಂಡರು.

ಕಿರಿಯ ಸಹೋದರ, ನಟ ಪುನೀತ್ ರಾಜ್‌ಕುಮಾರ್ ಅಕಾಲಿಕ ನಿಧನದ ಕಾರಣ, ಸಾರ್ವಜನಿಕವಾಗಿ ಜನ್ಮದಿನ ಆಚರಿಸಿಕೊಳ್ಳುವುದಿಲ್ಲ, ಮನೆಯ ಬಳಿಗೆ ಯಾರೂ ಬರಬೇಡಿ ಎಂದು ಅಭಿಮಾನಿಗಳಿಗೆ ಶಿವರಾಜ್‌ಕುಮಾರ್ ಮೊದಲೇ ತಿಳಿಸಿದ್ದರು. ಕೋವಿಡ್ ಕಾರಣದಿಂದಾಗಿ ಕಳೆದೆರಡು ವರ್ಷವೂ ತಮ್ಮ ಜನ್ಮ ದಿನಾಚರಣೆಯನ್ನು ಸರಳವಾಗಿ ಆಚರಿಸಿಕೊಂಡಿದ್ದರು.

1986ರಲ್ಲಿ 'ಆನಂದ್' ಚಿತ್ರದ ಮೂಲಕ ಬೆಳ್ಳಿತೆರೆಗೆ ಕಾಲಿಟ್ಟ ಅವರದ್ದು ಚಂದನವನದಲ್ಲೀಗ 36 ವರ್ಷಗಳ ಸುದೀರ್ಘ ಸಿನಿಪಯಣ. ಕಲಾವಿದರೆಲ್ಲರಿಗೂ 'ಶಿವಣ್ಣ'ನಾಗಿರುವ ಕರುನಾಡ ಚಕ್ರವರ್ತಿಯ ಜನ್ಮದಿನಕ್ಕೆ ಇಡೀ ಕನ್ನಡ ಚಿತ್ರರಂಗವೇ ಶುಭಹಾರೈಸಿತು. ಜನ್ಮದಿನಕ್ಕೆ ವಿಶೇಷ ಕಾಮನ್ ಡಿಪಿಯನ್ನೂ ನಿರ್ದೇಶಕ ಯೋಗರಾಜ್ ಭಟ್ ಬಿಡುಗಡೆ ಮಾಡಿದ್ದರು. ಶಿವರಾಜ್ ಕುಮಾರ್ ನಟನೆಯ ಹೊಸ ಸಿನಿಮಾಗಳ ಪೋಸ್ಟರ್‌ಗಳೂ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆದವು.

ದೇವದಾಸಿಯರ ಮಾಶಾಸನಕ್ಕೆ ₹12 ಕೋಟಿ ಬಿಡುಗಡೆ

ಬೆಂಗಳೂರು: ದೇವದಾಸಿಯರಿಗೆ ಮಾಶಾಸನ ವಿತರಣೆಗಾಗಿ ರಾಜ್ಯ ಸರ್ಕಾರ ₹12 ಕೋಟಿಯನ್ನು ಮಹಿಳಾ ಅಭಿವೃದ್ಧಿ ಬ್ಯಾಂಕಿಗೆ ಬಿಡುಗಡೆ ಮಾಡಿದೆ.

ಕಳೆದ ಐದು ತಿಂಗಳಿಂದ ದೇವದಾಸಿಯರಿಗೆ ಮಾಶಾಸನದ ಮೊತ್ತ ಬಿಡುಗಡೆ ಆಗಿರಲಿಲ್ಲ. ಈ ಸಂಬಂಧ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರು ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಸೋಮವಾರ ಪತ್ರ ಬರೆದು, ಆದಷ್ಟು ಬೇಗ ಹಣ ಬಿಡುಗಡೆ ಮಾಡುವಂತೆಯೂ ಸೂಚಿಸಿದ್ದರು.

₹ 17.34 ಕೋಟಿ ಮೌಲ್ಯದ ಆಸ್ತಿ ಇ.ಡಿ ವಶಕ್ಕೆ

ಬೆಂಗಳೂರು: ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆ ಉಲ್ಲಂಘಿಸಿರುವ ಆರೋಪ ಎದುರಿಸುತ್ತಿರುವ ಮಂಗಳೂರಿನ ಮುಕ್ಕ ನಿವಾಸಿ ಕೆ. ಮೊಹಮ್ಮದ್ ಹ್ಯಾರಿಸ್ ಎಂಬುವವರಿಗೆ ಸೇರಿದ ₹ 17.34 ಕೋಟಿ ಮೌಲ್ಯದ ಎರಡು ಮನೆ ಮತ್ತು ಒಂದು ಕೈಗಾರಿಕಾ ನಿವೇಶನವನ್ನು ಜಾರಿ ನಿರ್ದೇಶನಾಲಯ (ಇ.ಡಿ) ವಶಕ್ಕೆ ಪಡೆದಿದೆ.

'ಮುಕ್ಕ ಗ್ರೂಪ್ ಆಫ್ ಕಂಪನೀಸ್ ಮಾಲೀಕರಾದ ಮೊಹಮ್ಮದ್ ಹ್ಯಾರಿಸ್, ಫೆಮಾ ಕಾಯ್ದೆ ಉಲ್ಲಂಘಿಸಿ ವಿದೇಶದಲ್ಲಿ ಆಸ್ತಿ ಖರೀದಿಸಿರುವ ಮತ್ತು ಹೂಡಿಕೆ ಮಾಡಿರುವ ಆರೋಪದ ಮೇಲೆ ಇ.ಡಿ ಪ್ರಕರಣ ದಾಖಲಿಸಿತ್ತು. ಅರಬ್ ಸಂಯುಕ್ತ ಸಂಸ್ಥಾನದ ಅಜ್ಮಾನ್ ಎಂಬಲ್ಲಿ ಆರೋಪಿಯು ಸ್ಥಿರಾಸ್ತಿ ಹೊಂದಿರುವುದು, ವಾಣಿಜ್ಯ ವಹಿವಾಟು ನಡೆಸುತ್ತಿರುವುದು ಹಾಗೂ ಹೂಡಿಕೆ ಮಾಡಿರುವುದು ತನಿಖೆ ಯಲ್ಲಿ ಪತ್ತೆಯಾಗಿತ್ತು. ಅಲ್ಲಿ ಒಟ್ಟು ₹ 17.34 ಕೋಟಿ ಮೌಲ್ಯದ ಆಸ್ತಿ ಹೊಂದಿರುವುದನ್ನು ಪತ್ತೆಮಾಡಲಾಗಿದೆ' ಎಂದು ಇ.ಡಿ ತಿಳಿಸಿದೆ.

ಫೆಮಾ ಕಾಯ್ದೆಯ ಸೆಕ್ಷನ್ 37–ಎ ಪ್ರಕಾರ, ಅನುಮತಿ ಪಡೆಯದೇ ವಿದೇಶದಲ್ಲಿ ಆಸ್ತಿ ಹೊಂದುವುದು, ಹೂಡಿಕೆ ಮಾಡುವುದು ಕಾನೂನು ಉಲ್ಲಂಘನೆಯಾಗುತ್ತದೆ. ಅಂತಹ ಆಸ್ತಿಯ ಮೌಲ್ಯಕ್ಕೆ ಸಮನಾದ ಆಸ್ತಿಗಳನ್ನು ವಶಕ್ಕೆ ಪಡೆಯಲು ಸೆಕ್ಷನ್ 4ರ ಅಡಿಯಲ್ಲಿ ಅಧಿಕಾರವಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

'ಕೊಟ್ಟ ಮಾತು ಈಡೇರಿಸದಿದ್ದರೆ ರಾಜಕೀಯ ನಿವೃತ್ತಿ'

ಪ್ರಜಾವಾಣಿ ವಾರ್ತೆ

ಕೊಳ್ಳೇಗಾಲ: 'ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಮೀಸಲಾತಿ ಹೆಚ್ಚಿಸುವುದಾಗಿ ಕೊಟ್ಟ ಮಾತು ಈಡೇರಿಸದಿದ್ದರೆ ರಾಜಕೀಯ ನಿವೃತ್ತಿ ಘೋಷಿಸುವೆ' ಎಂದು ಸಾರಿಗೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ.ಶ್ರೀರಾಮುಲು ಮಂಗಳವಾರ ಹೇಳಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಧಿಕಾರಕ್ಕೆ ಬಂದ 24 ಗಂಟೆಗಳ ಒಳಗಾಗಿ ಪರಿಶಿಷ್ಟ ಜಾತಿಗೆ ಶೇ 17ರಷ್ಟು ಹಾಗೂ ಪರಿಶಿಷ್ಟ ವರ್ಗದವರಿಗೆ ಶೇ 7.5ರಷ್ಟು ಮೀಸಲಾತಿ ಕೊಡುತ್ತೇವೆ ಎಂದು ಹೇಳಿದ್ದು ನಿಜ. ಕಾನೂನು ತೊಡಕು ಹಾಗೂ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದೆ. ಈಗ ನ್ಯಾ.ಸುಭಾಷ್ ಬಿ.ಅಡಿ ಅವರಿಂದ ವರದಿ ಸಲ್ಲಿಕೆಯಾಗಿದೆ. ಶೀಘ್ರದಲ್ಲೇ ಸಚಿವ ಸಂಪುಟದ ಮುಂದೆ ಬರುತ್ತದೆ. ಕೊಟ್ಟ ಮಾತು ಉಳಿಸಿಕೊಳ್ಳುತ್ತೇವೆ. ಶೀಘ್ರದಲ್ಲಿ ಸಿಹಿ ಸುದ್ದಿ ಕೊಡುತ್ತೇವೆ' ಎಂದರು.

'ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳನ್ನು ಮತ ಬ್ಯಾಂಕ್ ಆಗಿ ಮಾಡಿಕೊಂಡು 70 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ನಮ್ಮ ಜನಕ್ಕೆ ಏನು ಕೊಟ್ಟಿದೆ? ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಜಾತಿಗಳ ನಡುವೆ ವಿಷಬೀಜ ಬಿತ್ತುವ ಬದಲು ಮೀಸಲಾತಿ ಹೆಚ್ಚಿಸಬೇಕಿತ್ತು. ಕಾಂಗ್ರೆಸ್ ಪಕ್ಷವು ವಿಧಾನಸೌಧದ ಆವರಣದಲ್ಲಿ ವಾಲ್ಮೀಕಿ ಪ್ರತಿಮೆ ಸ್ಥಾಪನೆ ಮಾಡಿದ್ದು ಬಿಟ್ಟರೆ ಬೇರೆ ಏನು ಮಾಡಿದೆ' ಎಂದು ಪ್ರಶ್ನಿಸಿದರು.

'ಸಿದ್ದರಾಮೋತ್ಸವದ ನಂತರ ಸಿದ್ದರಾಮಯ್ಯ ಕೇವಲ ಉತ್ಸವಮೂರ್ತಿಯಾಗಿಯೇ ಉಳಿಯಬೇಕಾತ್ತದೆ' ಎಂದು ವ್ಯಂಗ್ಯವಾಡಿದರು.

ರಾಷ್ಟ್ರೀಯ ನಾಟಕ ಶಾಲೆ: ನಾಟಕೋತ್ಸವಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ನಾಟಕ ಶಾಲೆಯ (ಎನ್‌ಎಸ್‌ಡಿ) ಬೆಂಗಳೂರು ವಿಭಾಗ ಹಮ್ಮಿಕೊಂಡಿರುವ 'ಪೂರ್ವೋತ್ತರ್ ರಾಷ್ಟ್ರೀಯ ನಾಟ್ಯ ಉತ್ಸವ-2022'ಕ್ಕೆ ಮಂಗಳವಾರ ಚಾಲನೆ ದೊರೆತಿದೆ.

ದೆಹಲಿ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ ರಮೇಶ್ ಚಂದ್ರ ಗೌರ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಎನ್‌ಎಸ್‌ಡಿ ಮತ್ತು ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ಈ ನಾಟಕೋತ್ಸವ ನಡೆಯಲಿದೆ. ನಗರದ ಕಲಾಗ್ರಾಮ ಮಲ್ಲತ್ತಹಳ್ಳಿಯ ಸಾಂಸ್ಕೃತಿಕ ಸಮುಚ್ಚಯ ಭವನದಲ್ಲಿ ಆಯೋಜಿಸಲಾಗಿದೆ' ಎಂದು ಅವರು ಮಾಹಿತಿ ನೀಡಿದರು.

'ಜುಲೈ 16ರ ವರೆಗೆ ಈಶಾನ್ಯ ರಾಜ್ಯಗಳ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ. ಇತರೆ ರಾಜ್ಯಗಳ ಪ್ರೇಕ್ಷಕರು ಮತ್ತು ಕಲಾವಿದರು ವಿವಿಧ ರಾಜ್ಯಗಳೊಂದಿಗೆ ಸಂಪರ್ಕ ಸಾಧಿಸಿ ಅಲ್ಲಿನ ಸಂಸ್ಕೃತಿಯನ್ನು ಅರಿತುಕೊಳ್ಳಲು ಸಹಾಯಕವಾಗಿದೆ. ನಾಟಕವು ಪ್ರೇಕ್ಷಕರ ಮನದಾಳಕ್ಕೆ ಹೊಕ್ಕುವಂತಹ ಒಂದು ಅದ್ಭುತ ಕಲೆಯಾಗಿದೆ' ಎಂದು ರಮೇಶ್ ಚಂದ್ರ ಗೌರ ಅವರು ಹೇಳಿದರು.

'ಜುಲೈ 13ಕ್ಕೆ ಓಯಸಿಸ್ ಸೌಗೈಜಿಮ್ ನಿರ್ದೇಶನದ 'ಬ್ಲಡ್ ಸ್ಪಾಟ್ 2.0', ಜುಲೈ 14ಕ್ಕೆ ಅಸ್ಸಾಮಿ ಭಾಷೆಯ, ಸಿಮಂತ್ ಫುಕನ್ ನಿರ್ದೇಶನದ 'ರೂಪಲೀಮ್', ಜುಲೈ 15ಕ್ಕೆ ನಾಗಾಭಾಷೆಯ ಉಟೋಚಿಶಿ ನಿರ್ದೇಶನದ 'ದಿ ಚಾಂಪಿಯನ್' ಮತ್ತು ಜುಲೈ 16ಕ್ಕೆ ಮಣಿಪುರಿ ಭಾಷೆಯ ಲಾಯ್ಟಂಗ್‌ಬಮ್ ಪರಿನ್ಗಂಬ ನಿರ್ದೇಶನದ 'ಹೇ ಚೆಟ್ಲೋ'(ದೂರ ಹೋಗು) ಎಂಬ ನಾಟಕಗಳನ್ನು ಪ್ರದರ್ಶಿಸಲಾಗುತ್ತದೆ. ಎಲ್ಲರಿಗೂ ಉಚಿತ ಪ್ರವೇಶವಿದೆ' ಎಂದೂ ಅವರು ಹೇಳಿದರು.

ನ.11ರಿಂದ 'ಬೆಂಗಳೂರು ಡಿಸೈನ್ ಫೆಸ್ಟಿವಲ್'

ಬೆಂಗಳೂರು: 'ಬೆಂಗಳೂರು ಡಿಸೈನ್ ಫೆಸ್ಟಿವಲ್'ನ ಮೊದಲ ಆವೃತ್ತಿ ನ.11ರಿಂದ ಡಿ.12ರ ತನಕ ನಡೆಯಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮಂಗಳವಾರ ಉತ್ಸವದ ಲೋಗೊ ಬಿಡುಗಡೆ ಮಾಡಿದರು.

'ಪ್ರತಿಯೊಂದಕ್ಕೂ ಸ್ಮಾರ್ಟ್ ಮತ್ತು ಆವಿಷ್ಕಾರ ವಿನ್ಯಾಸಗಳೇ ಮುಖ್ಯ. ದೇಶದ ಅತಿದೊಡ್ಡ ವಿನ್ಯಾಸ ಉತ್ಸವ ಆಯೋಜಿಸಲು ಹೆಮ್ಮೆಯಾಗಿದೆ. ಇದು ಎಲ್ಲಾ ಪಾಲುದಾರರಿಗೆ ಹೆಚ್ಚಿನ ಅವಕಾಶ ಒದಗಿಸುತ್ತದೆ' ಎಂದರು.

ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ್ ಮಾತನಾಡಿ, ಭವಿಷ್ಯವನ್ನು ಗಮನದಲ್ಲಿ ಇಟ್ಟುಕೊಂಡು ನಡೆಸುವ ಬೆಳವಣಿಗೆಗಳ ಯೋಜನೆಗಳಲ್ಲಿ ಬೆಂಗಳೂರು ಸದಾ ಮುಂಚೂಣಿಯಲ್ಲಿ ಇರುತ್ತದೆ ಎಂದು ಹೇಳಿದರು. ಸಚಿವ ಆರಗ ಜ್ಞಾನೇಂದ್ರ ಹಾಜರಿದ್ದರು.

ಚರಂಡಿಯಲ್ಲಿ ಮೃತದೇಹ ಪತ್ತೆಯಾದ ಪ್ರಕರಣ • ಕೃತ್ಯಕ್ಕೆ ಪತ್ನಿಯಿಂದಲೂ ಸಹಕಾರ

ಕೊಲೆ: ಮೃತನ ಪತ್ನಿ, ದಂಪತಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ


ಓಂನಾಥ್ ಸಿಂಗ್


ವಿಶಾಲ್


ರೂಬಿ


ಗುಂಜಾದೇವಿ

ಬೆಂಗಳೂರು: ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಓಂನಾಥ್ ಸಿಂಗ್ (45) ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಪತ್ನಿ ಹಾಗೂ ಸ್ನೇಹಿತ ವಿಶಾಲ್ ಹಾಗೂ ಆತನ ಪತ್ನಿಯನ್ನು ಬಂಧಿಸಿದ್ದಾರೆ.

'ಓಂನಾಥ್ ಸಿಂಗ್ ಅವರ ಪತ್ನಿ ಗುಂಜಾದೇವಿ (35), ಸ್ನೇಹಿತ ವಿಶಾಲ್ ಪ್ರಜಾಪತಿ (24) ಹಾಗೂ ಆತನ ಪತ್ನಿ ರೂಬಿ (23) ಬಂಧಿತರು. ಮೂವರು ಸೇರಿಕೊಂಡು ಓಂನಾಥ್‌ಸಿಂಗ್ ಅವರಿಗೆ ಚಿತ್ರಹಿಂಸೆ ನೀಡಿ ಕೊಲೆ ಮಾಡಿದ್ದರು. ಯಾರಿಗೂ ಅನುಮಾನ ಬಾರದಂತೆ ಪ್ಲಾಸ್ಟಿಕ್‌ನಲ್ಲಿ ಮೃತದೇಹ ತುಂಬಿ, ಚರಂಡಿಯಲ್ಲಿ ಎಸೆದಿದ್ದರು' ಎಂದು ಪೊಲೀಸರು ಹೇಳಿದರು.

'ಕೊಲೆ ನಂತರ ಮನೆ ಖಾಲಿ ಮಾಡಿದ್ದ ಆರೋಪಿಗಳು, ಮಂಗಳೂರಿಗೆ ಹೋಗಿ ನೆಲೆಸಿದ್ದರು. ಈ ಬಗ್ಗೆ ಮಾಹಿತಿ ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಿ, ನಗರಕ್ಕೆ ಕರೆತರಲಾಗಿದೆ' ಎಂದೂ ತಿಳಿಸಿದರು.

ಗುಜರಾತ್‌ನಲ್ಲಿ ಪರಿಚಯ: 'ಓಂನಾಥ್ ಸಿಂಗ್ ಹಾಗೂ ವಿಶಾಲ್, ಗುಜರಾತ್‌ನಲ್ಲಿ ಪರಿಚಯವಾಗಿದ್ದರು. ಆತ್ಮೀಯ ಸ್ನೇಹಿತರಾಗಿದ್ದ ಇಬ್ಬರೂ ಕೆಲಸಕ್ಕಾಗಿ ಬೆಂಗಳೂರಿಗೆ ಬಂದಿದ್ದರು. ತಮ್ಮ ಜೊತೆ ಪತ್ನಿಯರನ್ನೂ ಕರೆತಂದಿದ್ದರು' ಎಂದು ಪೊಲೀಸರು ಹೇಳಿದರು.

'ಬೆಂಗಳೂರಿನಲ್ಲಿ ಖರ್ಚು ಹೆಚ್ಚು ಎಂಬುದಾಗಿ ತಿಳಿದಿದ್ದ ಓಂನಾಥ್ ಸಿಂಗ್ ಹಾಗೂ ವಿಶಾಲ್ ದಂಪತಿ, ಕಾಡುಗೋಡಿ ಠಾಣೆ ವ್ಯಾಪ್ತಿಯಲ್ಲಿ ಒಂದೇ ಮನೆಯಲ್ಲೇ ನೆಲೆಸಿದ್ದರು. ಇಬ್ಬರೂ ದಂಪತಿಗಳ ನಡುವೆ ಆತ್ಮೀಯತೆ ಇತ್ತು' ಎಂದು ಪೊಲೀಸರು ಹೇಳಿದರು.

ಸ್ನೇಹಿತನ ಪತ್ನಿ ಜೊತೆ ಸಲುಗೆ: 'ವಿಶಾಲ್ ಪತ್ನಿ ರೂಬಿ ಜೊತೆ ಓಂನಾಥ್ ಸಿಂಗ್ ಸಲುಗೆ ಇರಿಸಿಕೊಂಡಿದ್ದರು. ಕೆಲಸದ ನಿಮಿತ್ತ ವಿಶಾಲ್ ಇತ್ತೀಚೆಗೆ ಗುಜರಾತ್‌ಗೆ ಹೋಗಿದ್ದರು. ಈ ಸಂದರ್ಭದಲ್ಲಿ ಓಂನಾಥ್ ಸಿಂಗ್ ಹಾಗೂ ರೂಬಿ ಖಾಸಗಿ ಕ್ಷಣಗಳನ್ನು ಕಳೆಯುತ್ತಿದ್ದರೆಂದು ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

'ಮಾಹಿತಿ ನೀಡದೇ ವಿಶಾಲ್ ಮನೆಗೆ ಬಂದಿದ್ದರು. ಪತ್ನಿ ರೂಬಿ ಹಾಗೂ ಸ್ನೇಹಿತನ ಸಲುಗೆ ನೋಡಿದ್ದರು. ಇದೇ ವಿಚಾರವಾಗಿ ಮನೆಯಲ್ಲಿ ಜಗಳ ನಡೆದಿತ್ತು. ತನ್ನ ತಪ್ಪು ಇಲ್ಲವೆಂದಿದ್ದ ರೂಬಿ, ಓಂನಾಥ್ ಸಿಂಗ್ ಬೆದರಿಕೆಯೊಡ್ಡಿ ಸಲುಗೆ ಸಾಧಿಸಿದ್ದನೆಂದು ಹೇಳಿದ್ದರು. ಸಿಟ್ಟಾದ ವಿಶಾಲ್, ಪತ್ನಿ ಜೊತೆ ಸೇರಿ ಓಂನಾಥ್ ಮೇಲೆ ಹಲ್ಲೆ ಮಾಡಿದ್ದ.'

'ವಿಷಯ ಗೊತ್ತಾಗುತ್ತಿದ್ದಂತೆ ಪತ್ನಿ ಗುಂಜಾದೇವಿ ಸಹ ಪತಿ ವಿರುದ್ಧ ಗರಂ ಆಗಿದ್ದರು. ವಿಶಾಲ್ ಹಾಗೂ ರೂಬಿ ಜೊತೆ ಸೇರಿ ಪತಿಗೆ ಕಿರುಕುಳ ನೀಡಿದ್ದರು. ಮೂರು ದಿನ ಊಟ ನೀಡದೇ ಕೊಠಡಿಯಲ್ಲಿ ಓಂನಾಥ್ ಸಿಂಗ್ ಅವರನ್ನು ಕೂಡಿ ಹಾಕಿ, ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿತ್ತು. ನಂತರ, ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಚರಂಡಿಯಲ್ಲಿ ಬಿಸಾಕಿ ಆರೋಪಿಗಳು ಪರಾರಿಯಾಗಿದ್ದರು' ಎಂದೂ ಹೇಳಿದರು.

₹15,000 ಸಾಲ ವಿಷಯಕ್ಕೂ ಜಗಳ: 'ವಿಶಾಲ್ ಬಳಿ ಓಂನಾಥ್‌ಸಿಂಗ್ ₹ 15,000 ಸಾಲ ಪಡೆದಿದ್ದರು. ಅದನ್ನು ವಾಪಸು ಕೊಟ್ಟಿರಲಿಲ್ಲ. ಈ ವಿಚಾರಕ್ಕೂ ಇಬ್ಬರ ನಡುವೆ ಆಗಾಗ ಜಗಳವಾಗುತ್ತಿತ್ತು' ಎಂದು ಪೊಲೀಸರು ತಿಳಿಸಿದರು.

ಬಾಲಕಿ ಅಪಹರಣ: ಆರೋಪಿ ಸುಳಿವಿಗೆ ₹ 50,000 ಬಹುಮಾನ


ಲಿಂಗರಾಜು

ಬೆಂಗಳೂರು: ಹದಿನಾರು ವರ್ಷದ ಬಾಲಕಿಯನ್ನು ಅಪಹರಿಸಿಕೊಂಡು ಪರಾರಿಯಾಗಿರುವ ಆರೋಪಿ ಲಿಂಗರಾಜು ಅಲಿಯಾಸ್ ವಿರಾಟ್ (26) ಎಂಬಾತನಿಗಾಗಿ ಹುಡುಕಾಟ ನಡೆಸುತ್ತಿರುವ ಶಿವಮೊಗ್ಗ ಪೊಲೀಸರು, ಈತನ ಸುಳಿವು ನೀಡಿದವರಿಗೆ ₹ 50 ಸಾವಿರ ಬಹುಮಾನ ಘೋಷಿಸಿದ್ದಾರೆ.

'ಶಿವಮೊಗ್ಗ ಜಯನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ಬಾಲಕಿಯನ್ನು ಪುಸಲಾಯಿಸಿದ್ದ ಲಿಂಗರಾಜು, ಹಲವು ಆಮಿಷವೊಡ್ಡಿ 2021ರ ಡಿಸೆಂಬರ್ 27ರಂದು ಅಪಹರಿಸಿಕೊಂಡು ಪರಾರಿಯಾಗಿದ್ದಾನೆ. ಈತನ ಪತ್ತೆಗಾಗಿ ಹಲವೆಡೆ ಹುಡುಕಾಟ ನಡೆಸಲಾಗುತ್ತಿದ್ದು, ಸದ್ಯಕ್ಕೆ ಯಾವುದೇ ಸುಳಿವು ಲಭ್ಯವಾಗಿಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಆರೋಪಿ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕರೆ, ಶಿವಮೊಗ್ಗ ಮಹಿಳಾ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್-9480803349, 9449584739 ಅಥವಾ ನಿಯಂತ್ರಣ ಕೊಠಡಿ 9480803300 ಸಂಖ್ಯೆಗೆ ಮಾಹಿತಿ ನೀಡಬಹುದು. ಸುಳಿವು ನೀಡಿದವರ ಹೆಸರು ಗೌಪ್ಯವಾಗಿರಿಸಲಾಗುವುದು' ಎಂದೂ ತಿಳಿಸಿದರು.

ಸಿನಿಮಾದಲ್ಲಿ ನಟನೆ: 'ಆರೋಪಿ ಲಿಂಗರಾಜು ಕೆಲ ಸಿನಿಮಾಗಳಲ್ಲೂ ನಟಿಸಿದ್ದ. ಚಾಲಕನಾಗಿ ಕೆಲಸ ಮಾಡುತ್ತಿದ್ದ ಈತ, ಬಾಲಕಿಯನ್ನು ಪರಿಚಯ ಮಾಡಿಕೊಂಡು ಪ್ರೀತಿಸುವ ನಾಟಕವಾಡಿ ಕರೆದೊಯ್ದಿರುವ ಶಂಕೆ ಇದೆ' ಎಂದೂ ಹೇಳಿದರು.

ಹೇಬಿಯಸ್ ಕಾರ್ಪಸ್ ಸಲ್ಲಿಕೆ: 'ಅಪಹರಣ ಆಗಿರುವ ಮಗಳನ್ನು ಹುಡುಕಿಸಿಕೊಡುವಂತೆ ಪೋಷಕರು ಹೈಕೋರ್ಟ್‌ಗೆ ಹೇಬಿಯಸ್ ಕಾರ್ಪಸ್ ಸಲ್ಲಿಸಿದ್ದಾರೆ. ಇದರ ವಿಚಾರಣೆ ನಡೆಯುತ್ತಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಶೀಲ ಶಂಕೆ: ಎರಡನೇ ಪತ್ನಿ ಕೊಂದ ಆರೋಪಿ ಬಂಧನ

ಕೆಂಗೇರಿಯಲ್ಲಿ ಮೃತದೇಹ ಪತ್ತೆಯಾಗಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ


ನಗೀನಾ ಖಾನಂ


ರಫೀಕ್


ಪ್ರಜ್ವಲ್

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ನಗೀನಾ ಖಾನಂ ಎಂಬುವವರ ಕೊಲೆ ಪ್ರಕರಣ ಸಂಬಂಧ, ಅವರ ಪತಿ ರಫೀಕ್ ಹಾಗೂ ಆತನ ಸ್ನೇಹಿತ ಪ್ರಜ್ವಲ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ನಗೀನಾ ಅವರ ಮೃತದೇಹ ಸುಟ್ಟ ಸ್ಥಿತಿಯಲ್ಲಿ ಜುಲೈ 3ರಂದು ಪತ್ತೆಯಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ರಫೀಕ್ ಹಾಗೂ ಪ್ರಜ್ವಲ್‌ನನ್ನು ವಿಜಯಪುರದಲ್ಲಿ ಬಂಧಿಸಿ ನಗರಕ್ಕೆ ಕರೆತರಲಾಗಿದೆ' ಎಂದು ಪೊಲೀಸರು ಹೇಳಿದರು.

ಎರಡನೇ ಮದುವೆ: 'ಯಾದಗಿರಿಯ ರಫೀಕ್ ಕೆಲಸಕ್ಕಾಗಿ ಬೆಂಗಳೂರಿಗೆ ಬಂದಿದ್ದ. ವಾಹನ ಚಾಲಕನಾಗಿ ಕೆಲಸ ಆರಂಭಿಸಿದ್ದ. ಮೊದಲ ಪತ್ನಿಯಿಂದ ದೂರವಿದ್ದ ರಫೀಕ್‌ಗೆ ನಗೀನಾ ಪರಿಚಯವಾಗಿತ್ತು. ಸಲುಗೆಯೂ ಬೆಳೆದಿತ್ತು. ಪತಿ ತೊರೆದಿದ್ದ ನಗೀನಾ, ರಫೀಕ್‌ನನ್ನು ಎರಡನೇ ಮದುವೆಯಾಗಿದ್ದರು' ಎಂದು ಪೊಲೀಸರು ತಿಳಿಸಿದರು.

'ಪರ ಪುರುಷನ ಜೊತೆ ನಗೀನಾ ಅಕ್ರಮ ಸಂಬಂಧವಿಟ್ಟುಕೊಂಡಿದ್ದ ಸಂಶಯ ರಫೀಕ್‌ಗೆ ಬಂದಿತ್ತು. ಇದೇ ವಿಚಾರಕ್ಕೆ ಹಲವು ಬಾರಿ ಮನೆಯಲ್ಲಿ ಜಗಳ ಆಗಿತ್ತು. ಕೆಲ ದಿನಗಳ ಹಿಂದೆಯಷ್ಟೇ ಪರ ಪುರುಷನ ಜೊತೆ ನಗೀನಾ ಇದ್ದಿದ್ದನ್ನು ರಫೀಕ್ ನೋಡಿದ್ದ. ಅಂದಿನಿಂದಲೇ ಆಕೆಯನ್ನು ಕೊಲೆ ಮಾಡಬೇಕೆಂದು ಸಂಚು ರೂಪಿಸುತ್ತಿದ್ದ.'

'ಕೆಲಸದ ಸ್ಥಳದಲ್ಲಿ ಪರಿಚಯವಾಗಿದ್ದ ಪ್ರಜ್ವಲ್‌ಗೆ ವಿಷಯ ತಿಳಿಸಿದ್ದ. ಪತ್ನಿಯನ್ನು ಕೊಲ್ಲಲು ಸಹಾಯ ಮಾಡುವಂತೆ ಕೋರಿದ್ದರು. ಅದಕ್ಕೆ ಪ್ರಜ್ವಲ್ ಒಪ್ಪಿಕೊಂಡಿದ್ದ' ಎಂದೂ ಹೇಳಿದರು.

ಕರೆ ಮಾಡಿ, ಕರೆಸಿ ಹತ್ಯೆ: 'ನಗೀನಾ ಅವರಿಗೆ ಕರೆ ಮಾಡಿದ್ದ ರಫೀಕ್, 'ನಾನು ಮದ್ಯ ಕುಡಿದು ಬಿದ್ದಿದ್ದೇನೆ. ಬಂದು ಕರೆದುಕೊಂಡು ಹೋಗು' ಎಂದಿದ್ದ. ಮಾತು ನಂಬಿದ್ದ ನಗೀನಾ, ನೈಸ್ ರಸ್ತೆಗೆ ಹೊಂದಿಕೊಂಡಿರುವ ರಾಮಸಂದ್ರ ಬಳಿಯ ನಿರ್ಜನ ಪ್ರದೇಶಕ್ಕೆ ಹೋಗಿದ್ದರು' ಎಂದು ಪೊಲೀಸರು ತಿಳಿಸಿದರು.

'ನಗೀನಾ ಬರುತ್ತಿದ್ದಂತೆ ಜಗಳ ತೆಗೆದಿದ್ದ ರಫೀಕ್ ಹಲ್ಲೆ ಮಾಡಿದ್ದ. ನಂತರ, ಪ್ರಜ್ವಲ್ ಜೊತೆ ಸೇರಿ ಕತ್ತು ಹಿಸುಕಿ ಕೊಲೆ ಮಾಡಿದ್ದ. ಮೃತದೇಹದ ಗುರುತು ಸಿಗಬಾರದೆಂದು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಇಬ್ಬರೂ ಆರೋಪಿಗಳು ಪರಾರಿಯಾಗಿದ್ದರು' ಎಂದೂ ಹೇಳಿದರು.

ಸುಧಾ, ಮಯೂರ ಓದಿರಿ

ಜೈಲು ಅಕ್ರಮ: 'ಅಧಿಕಾರಿಗಳ ವಿರುದ್ಧ ಕ್ರಮ'

ಬೆಂಗಳೂರು: ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಮಂಗಳವಾರ ದಿಢೀರ್ ಭೇಟಿ ಪರಿಶೀಲಿಸಿದರು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರಾಗೃಹದಲ್ಲಿ ಅಕ್ರಮ ಚಟುವಟಿಕೆಗೆ ಅವಕಾಶ ನೀಡಿದರೆ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದರು ತಿಳಿಸಿದರು.


'ಪೆರಿಫೆರಲ್ ಹೊರವರ್ತುಲ ರಸ್ತೆ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಸೂಕ್ತ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿ ರೈತರು ನಗರದ ಬಿಡಿಎ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪ್ರತಿಭಟನೆ ವೇಳೆ ವಶಕ್ಕೆ: ಮೈದಾನದಲ್ಲೇ ರೈತರ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೆರಿಫೆರಲ್ ಹೊರವರ್ತುಲ ರಸ್ತೆ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಕಾನೂನಿನ್ವಯ ಪರಿಹಾರ ನೀಡಬೇಕು. ಇಲ್ಲದಿದ್ದರೆ, ಯೋಜನೆಯನ್ನೇ ಕೈಬಿಟ್ಟು ಜಮೀನು ಮರಳಿಸಬೇಕು' ಎಂದು ಒತ್ತಾಯಿಸಿ ಮಂಗಳವಾರ ಪ್ರತಿಭಟನೆ ನಡೆಸಿದ ರೈತರನ್ನು ಪೊಲೀಸರು ವಶಕ್ಕೆ ಪಡೆದರು.

'ಪೆರಿಫೆರಲ್ ಭೂ ಸ್ವಾಧೀನ ರೈತರ ಸಮಿತಿ' ವತಿಯಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಮಹಿಳೆಯರೂ ಸೇರಿ 85 ರೈತರನ್ನು ವಶಕ್ಕೆ ಪಡೆದ ಪೊಲೀಸರು, ಆಡುಗೋಡಿ ಸಿಎಆರ್ ಮೈದಾನದಲ್ಲಿ ಇರಿಸಿದ್ದಾರೆ.

ಮೈದಾನದಿಂದ ತೆರಳಲು ನಿರಾಕರಿಸಿ ಧರಣಿ ಆರಂಭಿಸಿರುವ ರೈತರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿಯಾಗುವವರೆಗೂ ಸ್ಥಳದಿಂದ ಕದಲುವುದಿಲ್ಲವೆಂದು ಪಟ್ಟು ಹಿಡಿದಿದ್ದಾರೆ. ಮೈದಾನದಲ್ಲಿ ಪೊಲೀಸರು ಭದ್ರತೆ ಕೈಗೊಂಡಿದ್ದಾರೆ.

'ರೈತರು ತಮ್ಮ ನ್ಯಾಯಯುತ ಬೇಡಿಕೆ ಈಡೇರಿಕೆಗಾಗಿ ಬಿಡಿಎ ಕಚೇರಿ ಎದುರು ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದರು. ಸ್ಥಳಕ್ಕೆ ಬಂದು ಅಹವಾಲು ಆಲಿಸಬೇಕಾದ ರಾಜ್ಯ ಸರ್ಕಾರದ ಪ್ರತಿನಿಧಿಗಳು ಪ್ರತಿಭಟನೆ ಹತ್ತಿಕ್ಕಲು ಪೊಲೀಸ್ ಬಲ ಬಳಸಿದ್ದಾರೆ. ಮೈದಾನದಿಂದ ನಾವು ಹೋಗುವುದಿಲ್ಲ. ಇಲ್ಲಿಯೇ ಅಹೋರಾತ್ರಿ ಧರಣಿ ಮುಂದುವರಿಸುತ್ತೇವೆ' ಎಂದು ಪ್ರತಿಭಟನಕಾರರು ಹೇಳಿದರು.

1,810 ಎಕರೆ ಭೂ ಸ್ವಾಧೀನ: '65 ಕಿ.ಮೀ ಪೆರಿಫೆರಲ್ ಹೊರವರ್ತುಲ ರಸ್ತೆ ನಿರ್ಮಾಣಕ್ಕಾಗಿ 1,810 ಎಕರೆ ಜಮೀನು ಸ್ವಾಧೀನ ಪಡೆಯಲು ರಾಜ್ಯ ಸರ್ಕಾರ ಹಾಗೂ ಬಿಡಿಎ 2005ರಲ್ಲಿ ಆದೇಶ ಹೊರಡಿಸಿತ್ತು. ಇಂಥ ಜಮೀನಿನಲ್ಲಿ 17 ವರ್ಷವಾದರೂ ಯೋಜನೆ ಕಾಮಗಾರಿ ಆರಂಭವಾಗಿಲ್ಲ. ಜಮೀನು ಖಾಲಿ ಬಿದ್ದಿದೆ. ರೈತರು ಅತಂತ್ರ ಸ್ಥಿತಿಯಲ್ಲಿದ್ದಾರೆ' ಎಂದು ಪ್ರತಿಭಟನಕಾರರು ಹೇಳಿದರು.

'2013ರ ಭೂ-ಸ್ವಾಧೀನ ಮತ್ತು ಪುನರ್ವಸತಿ ಕಾಯ್ದೆ ಪ್ರಕಾರ ಜಮೀನಿಗೆ ಸೂಕ್ತ ಪರಿಹಾರ ನೀಡಬೇಕು. ಇಲ್ಲದಿದ್ದರೆ, ಯೋಜನೆಯನ್ನೇ ಕೈಬಿಟ್ಟು ರೈತರಿಗೆ ನಿರಾಕ್ಷೇಪಣಾ ಪತ್ರ (ಎನ್‌ಒಸಿ) ನೀಡಬೇಕು' ಎಂದೂ ಆಗ್ರಹಿಸಿದರು.

ಸಂಕ್ಷಿಪ್ತ ಸುದ್ದಿ

'ಸುಭಾಷ್ ಮೋದಿ ನೇತೃತ್ವದಲ್ಲೇ ಅಸ್ಪತ್ರೆ ಮುನ್ನಡೆಯಲಿ'

ಬೆಂಗಳೂರು: 'ಡಾ.ಎಂ.ಸಿ. ಮೋದಿ ಆಸ್ಪತ್ರೆಯು ಅವರು ಸಹೋದರನ ಪುತ್ರ ಡಾ.ಸುಭಾಷ್ ಮೋದಿ ನೇತೃತ್ವದಲ್ಲೇ ಆಸ್ಪತ್ರೆ ಮುನ್ನಡೆಯಲಿ' ಎಂದು ಕಾಶಿ ಮಠದ ಡಾ.ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

'ಎಂ.ಸಿ.ಮೋದಿ ಅವರ ದಾರಿಯಲ್ಲಿ ಡಾ.ಸುಭಾಷ್ ನಡೆಯುತ್ತಿದ್ದಾರೆ. ಅವರಿಗೆ ಶಕ್ತಿ ತುಂಬುವ ಅಗತ್ಯವಿದೆ' ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶಿರಕ್ಯಾಡದ ಗುರು ಗಂಗಾಧರೇಶ್ವರ ಸಂಸ್ಥಾನ ಹಿರೇಮಠದ ಮುರಘೇಂದ್ರ ಶಿವಾಚಾರ್ಯಸ್ವಾಮಿ ಮಾತನಾಡಿ, 'ಮೋದಿ ಆಸ್ಪತ್ರೆಯ ವಿಚಾರದಲ್ಲಿ ಎದ್ದಿರುವ ಗೊಂದಲ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈ ಹಿಂದೆಯೇ ಮನವಿ ಮಾಡಿದ್ದೆವು. ಗೊಂದಲ ನಿವಾರಣೆ ಬಗ್ಗೆ ಭರವಸೆ ನೀಡಿದ್ದರು. ಅಗತ್ಯ ಬಿದ್ದರೆ ಲಿಂಗಾಯತ ಮಠಾಧೀಶರು ಮತ್ತೊಮ್ಮೆ ಅವರನ್ನು ಭೇಟಿ ಮಾಡುತ್ತೇವೆ' ಎಂದು ಹೇಳಿದರು.

ಡಾ.ಸುಭಾಷ್ ಮೋದಿ ಮಾತನಾಡಿ, 'ಆಸ್ಪತ್ರೆ ಸಿಬ್ಬಂದಿ ಕಿಶೋರ್, ನಂದಿನಿ ಸೇರಿ ನಾಲ್ವರು ತಾವೇ ಆಡಳಿತಾಧಿಕಾರಿ ಎಂದು ವರ್ತಿಸುತ್ತಿದ್ದಾರೆ. ಪ್ಲಂಬರ್ ಕೆಲಸಕ್ಕೆ ಸೇರಿಕೊಂಡ ಕಿಶೋರ್ ಆಡಳಿತಾಧಿಕಾರಿ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ನಮಗೆ ಪ್ರಾಣ ಬೆದರಿಕೆ ಹಾಕುತ್ತಿದ್ದಾರೆ' ಎಂದರು.

ರಿಜ್ವಾನ್ ವಿರುದ್ಧದ ವಿಚಾರಣೆಗೆ ತಡೆ

ಬೆಂಗಳೂರು: ಬೆಂಗಳೂರು ಕೇಂದ್ರ (ಸೆಂಟ್ರಲ್) ಲೋಕಸಭಾ ಕ್ಷೇತ್ರಕ್ಕೆ 2019ರಲ್ಲಿ ನಡೆದ ಚುನಾವಣೆ ವೇಳೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ರಿಜ್ವಾನ್ ಅರ್ಷದ್ ವಿರುದ್ಧ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಕುರಿತಂತೆ ಮೆಯೊಹಾಲ್ ಕೋರ್ಟ್ ಸಂಖ್ಯೆ 43ರಲ್ಲಿ ದಾಖಲಾಗಿರುವ ಎಫ್‌ಐಆರ್ ಮತ್ತು ವಿಚಾರಣೆ ರದ್ದುಗೊಳಿಸಬೇಕು ಎಂದು ಕೋರಿ ರಿಜ್ವಾನ್ ಅರ್ಷದ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ | ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ವಕೀಲ ಎಸ್.ಎ. ಅಹಮದ್ ಅವರು, 'ಕಾನೂನುಬಾಹಿರವಾಗಿ ದಾಖಲಾಗಿರುವ ಈ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಪ್ರಕರಣವೇನು?: 'ದೊಡ್ಡನೆಕ್ಕುಂದಿ ಗ್ರಾಮದ ಕೋದಂಡರಾಮ ಸರ್ಕಲ್ ದೇವಾಲಯದಲ್ಲಿ 2019ರ ಏಪ್ರಿಲ್ 13ರಂದು ನಡೆಯುತ್ತಿದ್ದ ಶ್ರೀರಾಮನವಮಿ ಪಲ್ಲಕ್ಕಿ ಉತ್ಸವದ ವೇಳೆ ಅನುಮತಿ ಪಡೆಯದೆ ರಿಜ್ವಾನ್ ಅರ್ಷದ್ ಚುನಾವಣಾ ಪ್ರಚಾರದ ಅಂಗವಾಗಿ ರೋಡ್ ಶೋ ನಡೆಸಿದರು' ಎಂದು ಆರೋಪಿಸಿ ಚುನಾವಣಾ ಅಧಿಕಾರಿಗಳು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

ಅವ್ಯವಹಾರ ಆರೋಪ: ದಾಖಲೆ ಬಿಡುಗಡೆ

ಬೆಂಗಳೂರು: 'ಕೈಗಾರಿಕಾ ತರಬೇತಿ ಕೇಂದ್ರಗಳಿಗೆ ಟೂಲ್ ಕಿಟ್ ಖರೀದಿಯಲ್ಲಿ ಅವ್ಯವಹಾರ ನಡೆದಿದೆ' ಎಂಬ ಆಮ್ ಅದ್ಮಿ ಪಕ್ಷದ ಆರೋಪಕ್ಕೆ ಸಂಬಂಧಿಸಿದಂತೆ ಉದ್ಯೋಗ ಮತ್ತು ಕೈಗಾರಿಕಾ ತರಬೇತಿ ಇಲಾಖೆಯು ದಾಖಲೆ ಸಹಿತ ಸ್ಪಷ್ಟನೆ ನೀಡಿದೆ.

'ತರಬೇತಿ ಪಡೆಯುತ್ತಿರುವ ಪರಿಶಿಷ್ಟ ಜಾತಿ, ಪಂಗಡಗಳ 13 ಸಾವಿರ ವಿದ್ಯಾರ್ಥಿಗಳಿಗೆ ₹ 22 ಕೋಟಿ ವೆಚ್ಚದಲ್ಲಿ ಅಗತ್ಯ ಸಲಕರಣೆ ವಿತರಿಸಲು ಟೆಂಡರ್ ಕರೆಯಲಾಗಿದ್ದು, ಅದರಲ್ಲಿ ಅವ್ಯವಹಾರ ನಡೆದಿದೆ' ಎಂದು ಎಎಪಿ ಆರೋಪಿಸಿತ್ತು.

'ಆರೋಪವು ಸತ್ಯಕ್ಕೆ ದೂರವಾಗಿದೆ. ನಾಗರಿಕರನ್ನು ತಪ್ಪುದಾರಿಗೆ ಎಳೆಯುವಂತೆ ಮಾಡಿದೆ' ಎಂದು ಇಲಾಖೆ ಅಧಿಕಾರಿಗಳು ಸ್ಪಷ್ಟನೆ ನೀಡಿದ್ದಾರೆ.

'2021ರ ಸೆ.21ರಂದು ಪ್ರಥಮ ಟೆಂಡರ್ ಕರೆಯಲಾಗಿತ್ತು. ಎಲ್‌1 ಬಿಡ್ಡರ್ ₹ 22 ಕೋಟಿ ನಮೂದಿಸಿದ್ದರು. ಇದು ಇಲಾಖೆಯ ಬಜೆಟ್ ಗಾತ್ರಕ್ಕಿಂತಲೂ ಹೆಚ್ಚಿದ್ದು, ಆ ಟೆಂಡರ್ ರದ್ದು ಪಡಿಸಲಾಗಿತ್ತು. ಅದೇ ವರ್ಷದ ಡಿ.9ರಂದು ಮರು ಟೆಂಡರ್ ಕರೆಯಲಾಗಿತ್ತು. ಅಂತಿಮವಾಗಿ ₹15.99 ಕೋಟಿಗೆ ಟೆಂಡರ್ ಅಂತಿಮಗೊಳಿಸಲಾಗಿತ್ತು. ಇಲಾಖೆಗೆ ₹ 6 ಕೋಟಿ ಉಳಿತಾಯವಾಗಿತ್ತು' ಎಂದು ಅಧಿಕಾರಿಗಳು ದಾಖಲೆ ಬಿಡುಗಡೆ ಮಾಡಿದ್ದಾರೆ.

ವಿಶ್ವವಿದ್ಯಾಲಯವಾಗಿ ಮೇಲ್ದರ್ಜೆಗೆ ಏರಿದ ಸೇಂಟ್ ಜೋಸೆಫ್ಸ್ ಕಾಲೇಜು

ಬೆಂಗಳೂರು: ರಾಷ್ಟ್ರೀಯ ಉನ್ನತ ಶಿಕ್ಷಣ ಅಭಿಯಾನ ಯೋಜನೆ ಅಡಿಯಲ್ಲಿ (ರೂಸಾ–02) ಸೇಂಟ್ ಜೋಸೆಫ್ಸ್ (ಸ್ವಾಯತ್ತ) ಕಾಲೇಜನ್ನು ವಿಶ್ವವಿದ್ಯಾಲಯವನ್ನಾಗಿ ಉನ್ನತೀಕರಿಸಲಾಗಿದೆ.

ಸೇಂಟ್ ಜೋಸೆಫ್ಸ್ ಕಾಲೇಜಿಗೆ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ದಕ್ಕಿಸಿಕೊಡುವ ಪ್ರಕ್ರಿಯೆ 2013ರಿಂದ ಆರಂಭವಾಗಿತ್ತು. ರಾಜ್ಯ ಸರ್ಕಾರವು ಜುಲೈ 2, 2022ರಂದು ಕಾಲೇಜನ್ನು ವಿಶ್ವವಿದ್ಯಾಲಯವನ್ನಾಗಿ ಮೇಲ್ದರ್ಜೆಗೇರಿಸಿ ಅಧಿಸೂಚನೆ ಹೊರಡಿಸಿದೆ ಎಂದು ಕಾಲೇಜಿನ ಪ್ರಾಂಶುಪಾಲ ವಿಕ್ಟರ್ ಲೋಬೋ ಎಸ್.ಜೆ. ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

2018ರಲ್ಲಿ ಆಯ್ಕೆಗೊಂಡ ಸ್ವಾಯತ್ತ ಕಾಲೇಜುಗಳ ಪೈಕಿ ಸೇಂಟ್ ಜೋಸೆಫ್ಸ್ ಕಾಲೇಜು ಮೊದಲನೆಯದಾಗಿದೆ. ರಾಜ್ಯ ಸರ್ಕಾರವು ಫೆಬ್ರುವರಿ 23, 2021ರಂದು ಇದನ್ನು ಅಂಗೀಕರಿಸಿ ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯ ಅಧಿನಿಯಮ ಜಾರಿಗೊಳಿಸಿದೆ. ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯವು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವಿವಿಧ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗುವಂತೆ ಕಾರ್ಯನಿರ್ವಹಿಸುತ್ತದೆ. ದೇಶದ ಎಲ್ಲಾ ನಾಗರಿಕರಿಗೆ ನೆರವಾಗುವಂತೆ ಉತ್ಕೃಷ್ಟ ಗುಣಮಟ್ಟದ ಶಿಕ್ಷಣ ನೀಡಲಾಗುವುದು ಎಂದು ಹೇಳಿದರು.

ಚಿತ್ರಾವಳಿ


ಅಲೆನ್ ಕೆರಿಯರ್ ಇನ್‌ಸ್ಟಿಟ್ಯೂಟ್ ಫೆಲೋಶಿಪ್ ಕಾರ್ಯಕ್ರಮದಲ್ಲಿ ಆಕ್ಸೆಂಚರ್ ಸೆಂಟರ್ ಆಫ್ ಎಕ್ಸಲೆನ್ಸ್ ಐಐಟಿ ಮದ್ರಾಸ್ ಸಿಇಒ ರವಿ ಎಸ್. ಅಯ್ಯರ್ ಅವರು ಕೆವೈಪಿವೈ ಮತ್ತು ಕಾಮೆಡ್‌ಕೆ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡಿ ಸನ್ಮಾನಿಸಿದರು. ಸಂಸ್ಥೆಯ ಮುಖ್ಯಸ್ಥ ಮಹೇಶ್ ಯಾದವ್, ಸಿಲಿಕಾನ್ ಸಿಟಿ ಅಕಾಡೆಮಿ ಪ್ರಾಂಶುಪಾಲರಾದ ಶಾಲಿನಿ ಬಿ.ಸ್ವಾಮಿ ಇದ್ದರು


ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಎಂಜಿನಿಯರ್ಸ್ ವತಿಯಿಂದ ನೀಡುವ 2022ರ ಗೌರವ ಎಂಜಿನಿಯರ್ಸ್ ಪ್ರಶಸ್ತಿಯನ್ನು ಡಾ.ಎಚ್.ಸಿ. ವಿಶ್ವೇಶ್ವರಯ್ಯನವರಿಗೆ ಪ್ರದಾನ ಮಾಡಲಾಯಿತು. ಪ್ರಶಸ್ತಿ ಆಯ್ಕೆ ಸಮಿತಿ ಅಧ್ಯಕ್ಷ ಎಂ.ಯು. ಆಶ್ವತ್ಥ, ಬೆಂಗಳೂರು ಘಟಕದ ಅಧ್ಯಕ್ಷ ಶ್ರೀಕಾಂತ ಚನ್ನಾಲ, ಡಿ.ರಂಗನಾಥ್, ಆರ್. ಶ್ರೀನಿವಾಸನ್, ಅನ್ನೆ ಗೌಡ ಇದ್ದರು

ನಿಧನ ವಾರ್ತೆ

ಜನಾರ್ದನ



ಬೆಂಗಳೂರು: ಸಂಜಯನಗರದಲ್ಲಿ 'ಪ್ರಜಾವಾಣಿ' ಪತ್ರಿಕೆಯ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಜನಾರ್ದನ (55) ಮಂಗಳವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಇವರಿಗೆ ಪತ್ನಿ ಮತ್ತು ಇಬ್ಬರು ಮಕ್ಕಳು ಇದ್ದಾರೆ.

'ಪಠ್ಯ ಮರು ಪರಿಷ್ಕರಣೆ: ಹಿನ್ನೆಲೆ -ಮುನ್ನೆಲೆ' ಕೃತಿ ಬಿಡುಗಡೆ

'ಪಕ್ಷದ ಸಿದ್ಧಾಂತ ಹೇರುವ ಪ್ರಯತ್ನ'

ಬೆಂಗಳೂರು: 'ಪಠ್ಯ ಮರು ಪರಿಷ್ಕರಣೆ ಹೆಸರಿನಲ್ಲಿ ರಾಜ್ಯ ಸರ್ಕಾರವು ಮೂಲಭೂತವಾದ ಹಾಗೂ ಪಕ್ಷದ ಸಿದ್ಧಾಂತವನ್ನು ಹೇರಲು ಪ್ರಯತ್ನಿಸಿದೆ' ಎಂದು ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ ದೂರಿದರು.

ನಗರದಲ್ಲಿ ಸೋಮವಾರ ಕರ್ನಾಟಕ ದಲಿತ ಹಕ್ಕುಗಳ ಸಮಿತಿ ಆಯೋಜಿಸಿದ್ದ 'ಪಠ್ಯ ಮರು ಪರಿಷ್ಕರಣೆ-ಒಂದು ಚಿಂತನೆ' ವಿಚಾರಗೋಷ್ಠಿ ಹಾಗೂ 'ಪಠ್ಯ ಮರು ಪರಿಷ್ಕರಣೆ: ಹಿನ್ನೆಲೆ-ಮುನ್ನೆಲೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿ, 'ಕೇಶವ ಕೃಪಾದ ಆದೇಶದಂತೆ ಪಠ್ಯದ ಮರು ಪರಿಷ್ಕರಣೆ ನಡೆದಿದೆ. ಅಲ್ಲಿನ ನಾಯಕರೇ ಸೂತ್ರಧಾರರು. ದಿನಕ್ಕೊಂದು ವಿವಾದ ಹುಟ್ಟುಹಾಕಿ, ಜನರ ನೆಮ್ಮದಿಯನ್ನು ಬಿಜೆಪಿ ಸರ್ಕಾರ ಕೆಡಿಸುತ್ತಿದೆ' ಎಂದರು.

ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ರಾಜಪ್ಪ ದಳವಾಯಿ ಮಾತನಾಡಿ, '1999ರ ವರೆಗೂ ಪಠ್ಯ ಪರಿಷ್ಕರಣೆಯಲ್ಲಿ ಸರ್ಕಾರಗಳ ಹಸ್ತಕ್ಷೇಪ ಇರಲಿಲ್ಲ. ನಂತರದ ವರ್ಷಗಳಲ್ಲಿ ಸರ್ಕಾರದ ಹಸ್ತಕ್ಷೇಪ ಹೆಚ್ಚುತ್ತಿದೆ. ಪಠ್ಯ ಪರಿಷ್ಕರಣೆಗಳಲ್ಲಿ ಆಯಾ ಸರ್ಕಾರಗಳು ಸಂಪೂರ್ಣ ಅಂತರ ಕಾಯ್ದುಕೊಳ್ಳಬೇಕು. ಪಕ್ಷದ ನಿಲುವುಗಳನ್ನು ಹೇರಬಾರದು. ಪ್ರಜಾಸತ್ತಾತ್ಮಕ ನೆಲೆಯಲ್ಲಿ ಪಠ್ಯವು ರೂಪುಗೊಳ್ಳಬೇಕು' ಎಂದು ಹೇಳಿದರು.

ಸಾಹಿತಿ ಕೆ. ಷರೀಫಾ ಮಾತನಾಡಿ, 'ಪಠ್ಯದಲ್ಲಿದ್ದ ಮೌಲ್ಯಗಳನ್ನು ಹಾಳು ಮಾಡುವ ಪ್ರಯತ್ನವನ್ನು ಹಾಗೂ ರಾಜ್ಯದಲ್ಲಿ ನೆಲೆಸಿದ್ದ ಸೌಹಾರ್ದ ವಾತಾವರಣ ಕೆಡಿಸುವ ಷಡ್ಯಂತ್ರವನ್ನು ಸರ್ಕಾರ ಮಾಡಿದೆ. ಇವರು ಕುವೆಂಪು, ಅಂಬೇಡ್ಕರ್ ವಿರೋಧಿಗಳು' ಎಂದರು.

ದಲಿತ ಹಕ್ಕುಗಳ ಸಮಿತಿ ಸಂಚಾಲಕ ಗೋಪಾಲಕೃಷ್ಣ, ಡಿಎಸ್‌ಎಂಎಂ ಕೇಂದ್ರ ಸಮಿತಿ ಸದಸ್ಯ ಎನ್.ನಾಗರಾಜ್, ಸಮಿತಿಯ ಸಹ ಸಂಚಾಲಕ ಬಿ.ರಾಜಶೇಖರಮೂರ್ತಿ ಹಾಜರಿದ್ದರು.


ನಗರದಲ್ಲಿ ಸೋಮವಾರ 'ಪಠ್ಯ ಮರು ಪರಿಷ್ಕರಣೆ: ಒಂದು ಚಿಂತನೆ' ವಿಚಾರಗೋಷ್ಠಿಯಲ್ಲಿ 'ಪಠ್ಯ ಮರು ಪರಿಷ್ಕರಣೆ: ಹಿನ್ನೆಲೆ – ಮುನ್ನೆಲೆ' ಎಂಬ ಕೃತಿಯನ್ನು ರಾಜ್ಯಸಭೆ ಸದಸ್ಯ ಎಲ್. ಹನುಮಂತಯ್ಯ (ಎಡದಿಂದ ಮೂರನೆಯವರು) ಬಿಡುಗಡೆ ಮಾಡಿದರು. ದಲಿತ ಹಕ್ಕುಗಳ ಸಮಿತಿಯ ಸಂಚಾಲಕ ಗೋಪಾಲಕೃಷ್ಣ ಹರಳಹಳ್ಳಿ, ಕೆ.ಷರೀಫಾ, ಎನ್. ನಾಗರಾಜ್, ಆರ್. ರಾಮಕೃಷ್ಣ, ರಾಜಪ್ಪ ದಳವಾಯಿ, ಬಿ.ರಾಜಶೇಖರಮೂರ್ತಿ ಇದ್ದಾರೆ – ಪ್ರಜಾವಾಣಿ ಚಿತ್ರ

ಚಾತುರ್ಮಾಸ್ಯ: ರಾಘವೇಶ್ವರ ಶ್ರೀ ಪುರಪ್ರವೇಶ

ಕಾರವಾರ: ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ ಅವರ 29ನೇ ಚಾತುರ್ಮಾಸ್ಯದ ಅಂಗವಾಗಿ ಗೋಕರ್ಣದ ಅಶೋಕೆಯಲ್ಲಿ ಮಂಗಳವಾರ, ಪುರಪ್ರವೇಶ ಕಾರ್ಯಕ್ರಮವು ವಿಜೃಂಭಣೆಯಿಂದ ನೆರವೇರಿತು. ಚಾತುರ್ಮಾಸ್ಯವು ಬುಧವಾರದಿಂದ ಆರಂಭವಾಗಲಿದೆ.

ಮಧ್ಯಾಹ್ನ 2.30ಕ್ಕೆ ನಡೆಯುವ ಧರ್ಮಸಭೆಯಲ್ಲಿ ಸ್ವಾಮೀಜಿ ಚಾತುರ್ಮಾಸ್ಯ ಸಂದೇಶ ನೀಡುವರು. ವಿಷ್ಣುಗುಪ್ತ ವಿಶ್ವವಿದ್ಯಾಪೀಠದ ಆರಂಭಕ್ಕೆ ಪೂರ್ವಭಾವಿಯಾಗಿ, ಎರಡು ವರ್ಷಗಳಿಂದ ಗುರುಕುಲಗಳು ಕಾರ್ಯಾರಂಭ ಮಾಡಿವೆ. ಸಮಾಜಕ್ಕೆ ಅವುಗಳ ಮಹತ್ವವನ್ನು ತಿಳಿಸುವ ಉದ್ದೇಶದಿಂದ ಈ ಚಾತುರ್ಮಾಸ್ಯವನ್ನು, 'ಗುರುಕುಲ ಚಾತುರ್ಮಾಸ್ಯ'ವಾಗಿ ಹಮ್ಮಿಕೊಳ್ಳಲಾಗಿದೆ.


ಸೆ.10ರಂದು 'ಚಾತುರ್ಮಾಸ್ಯ ಪ್ರಶಸ್ತಿ' ಪ್ರದಾನ ಹಾಗೂ ಸೀಮೋಲ್ಲಂಘನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೊಳ್ಳೆಯನ್ನು ಕರೆಯುವ ವೈರಸ್

ಕೊಳ್ಳೇಗಾಲ ಶರ್ಮ

ಸೊಳ್ಳೆಯನ್ನು ಯಾರಾದರೂ ಕೈ ಬೀಸಿ ಕರೆಯುವುದುಂಟೆ? ಹೆಚ್ಚೆಂದರೆ ಕೈ ಬೀಸಿ ಅದನ್ನು ಕೊಲ್ಲಲು ವಿಫಲ ಪ್ರಯತ್ನ ನಡೆಸಬಹುದು. ಇಲ್ಲವೇ ಅದನ್ನು ದೂರ ಓಡಿಸಲು ಪ್ರಯತ್ನಿಸಬಹುದು. ಹಾಗೆಂದು ನೀವು ಭಾವಿಸಿದ್ದರೆ ತಾಳಿ. ವೈರಸ್ಸುಗಳು ಸೊಳ್ಳೆಯನ್ನು ನೀವು ಕೈ ಬೀಸಿ ಕರೆಯುವಂತೆ ಮಾಡುತ್ತವೆಯಂತೆ. ಇತ್ತೀಚೆಗೆ 'ಸೆಲ್' ಪತ್ರಿಕೆಯಲ್ಲಿ ಅಮೆರಿಕೆಯ ಕನೆಕ್ಟಿಕಟ್ ವಿಶ್ವವಿದ್ಯಾನಿಲಯದ ವಿಜ್ಞಾನಿ ಪೆಂಗುವಾ ವಾಂಗ್ ಮತ್ತು ಸಂಗಡಿಗರು ಪ್ರಕಟಿಸಿರುವ ಸಂಶೋಧನೆ ಹೀಗೊಂದು ಸ್ವಾರಸ್ಯಕರ ಸಂಗತಿಯನ್ನು ಮುಂದಿಟ್ಟಿದೆ.

> ಪಕ್ಕದಲ್ಲೇ ಇರುವವರು ಆರಾಮವಾಗಿರುವಾಗ ನಿಮ್ಮನ್ನಷ್ಟೆ ಸೊಳ್ಳೆ ಕಚ್ಚಿರುವುದು ನೆನಪಿದೆಯಲ್ಲ? ನೀವೇ ಏಕೆ ಅದಕ್ಕೆ ಗುರಿಯಾಗಿರಬೇಕು?



ಸೊಳ್ಳೆ ಮತ್ತು ವೈರಸ್ಸುಗಳ ಸಂಬಂಧ ಹೊಸತೇನಲ್ಲ. ಡೆಂಗಿ, ಯೆಲ್ಲೋ ಫೀವರ್ ಎನ್ನುವ ಜ್ವರ, ಹಲವಾರು ಮಿದುಳುಜ್ವರಗಳು ಸೊಳ್ಳೆಗಳ ಮೂಲಕ ಹರಡುವ ವೈರಸ್ ಸೋಂಕುಗಳು. ಹೀಗಾಗಿ ಇದುವರೆವಿಗೂ ವೈರಸ್ಸುಗಳನ್ನು ಸೊಳ್ಳೆಯನ್ನೇರಿ ಸವಾರಿ ಮಾಡುವ ರೋಗಾಣು ಎಂದಷ್ಟೆ ನಂಬಲಾಗಿತ್ತು. ಆದರೆ ಈ ವೈರಸ್ಸುಗಳು ಮನುಷ್ಯರೇ ತಮ್ಮ ವಾಹನವನ್ನು ಕರೆಯುವಂತೆ ಮಾಡುತ್ತವೆನ್ನುವುದು ಹೊಸ ವಿಷಯ. ವೈರಸ್ ಸವಾರಿ ಮಾಡುತ್ತಿರುವ ಸೊಳ್ಳೆಯು ಮನುಷ್ಯರ ರಕ್ತವನ್ನು ಕುಡಿದಾಗ ಇವು ಸೊಳ್ಳೆಯ ದೇಹವನ್ನು ಸೇರುತ್ತದೆ. ಅಲ್ಲಿಗೆ ವೈರಸ್ಸಿನ ಪಯಣ ಕೊನೆಯಾಗುವುದಿಲ್ಲವಂತೆ. ಅದು ಆ ಮನುಷ್ಯನೇ ಬೇರೆ



ಸೊಳ್ಳೆಗಳನ್ನು ಕರೆಯುವಂತೆ ಮಾಡಿ, ಬೇರೊಬ್ಬನ ದೇಹಕ್ಕೆ ಸೇರುವ ಹಾದಿಯನ್ನು ಹುಡುಕುತ್ತದೆ ಎನ್ನುವುದು ವಾಂಗ್ ಅವರ ಸಂಶೋಧನೆ. ಹೀಗೆ ಸೋಂಕು ವ್ಯಾಪಕವಾಗಿ ಹರಡುತ್ತದೆ.

ಸ್ವಾರಸ್ಯಕರ ಎನ್ನಿಸಿತೇ? ಇದಕ್ಕಿಂತಲೂ ಸ್ವಾರಸ್ಯಕರ ಪ್ರಶ್ನೆ ಇನ್ನೊಂದಿದೆ. ಕಗ್ಗತ್ತಲ ರಾತ್ರಿಯಲ್ಲಿಯೂ, ಕವುದಿಯನ್ನು ಚೆನ್ನಾಗಿ ಹೊದ್ದುಕೊಂಡಿರುವಾಗಲೂ, ಸೊಳ್ಳೆಗಳು ಸಂದಿಯೊಳಗೆಲ್ಲೋ ಇಣುಕಿದ ಮೂಗು, ಕಿವಿಯ ಹಿಂಭಾಗವನ್ನೇ ಗುರಿಯಿಟ್ಟು ದಾಳಿ ಮಾಡುತ್ತವಲ್ಲ? ಅದು ಹೇಗೆ?

ಈ ಪ್ರಶ್ನೆಗೆ ಉತ್ತರ ಹುಡುಕಿದ ವಿಜ್ಞಾನಿಗಳಿಗೆ ಹಲವು ಸೂಚನೆಗಳು ದೊರಕಿವೆ. ಮನುಷ್ಯನಂತಹ ಪ್ರಾಣಿಗಳ ಬಿಸಿರಕ್ತವೇ ಸೊಳ್ಳೆಗೆ ಆಕರ್ಷಣೆಯಾಗಿರಬಹುದು ಎನ್ನುವುದು ಇವುಗಳಲ್ಲಿ ಒಂದು. ಅಥವಾ ಪ್ರಾಣಿಗಳು ಉಸಿರಾಡುವ ಕಾರ್ಬನ್ ಡಯಾಕ್ಸೈಡ್ ಸೊಳ್ಳೆಗಳನ್ನು ಆಕರ್ಷಿಸುತ್ತಿರಬಹುದು. ಇದಲ್ಲದೆ ಸೊಳ್ಳೆಗಳನ್ನು ಆಕರ್ಷಿಸುವ ವಾಸನೆಯನ್ನೂ ಇಂತಹ ಪ್ರಾಣಿಗಳು ಬೀರುತ್ತಿರಬಹುದೋ ಎನ್ನುವ ಗುಮಾನಿಯೂ ಇದೆ. ಪಕ್ಕದಲ್ಲೇ ಇರುವವರು ಆರಾಮವಾಗಿರುವಾಗ ನಿಮ್ಮನ್ನಷ್ಟೆ ಸೊಳ್ಳೆ ಕಚ್ಚಿರುವುದು ನೆನಪಿದೆಯಲ್ಲ? ನೀವೇ ಏಕೆ ಅದಕ್ಕೆ ಗುರಿಯಾಗಿರಬೇಕು?

ಈ ಕೌತುಕದ ಪ್ರಶ್ನೆಗೆ ಇನ್ನೊಂದು ಸ್ವಾರಸ್ಯಕರವಾದ ಉತ್ತರವನ್ನು ಪೆಂಗುವಾ ವಾಂಗ್ ಮತ್ತು ಸಂಗಡಿಗರು ಒದಗಿಸಿದ್ದಾರೆ. ಚಿಕುನ್‌ಗುನ್ಯಾ ಮತ್ತು ಜೀಕಾ ವೈರಸ್‌ಗಳು ಸೋಂಕಿರುವ ಇಲಿಗಳು ಬೇರೆ ಇಲಿಗಳಿಗಿಂತಲೂ ಹೆಚ್ಚು ಸೊಳ್ಳೆಗಳನ್ನು ಆಕರ್ಷಿಸುತ್ತವೆ ಎಂದು ಗುರುತಿಸಿದ್ದಾರೆ. ಈ ವೈರಸ್‌ಗಳು ತಾವು ಸೋಂಕಿದ ಇಲಿಗಳು ಸೊಳ್ಳೆಗಳನ್ನು ಆಕರ್ಷಿಸುವಂತಹ ರಾಸಾಯನಿಕಗಳನ್ನು ತಯಾರಿಸುವಂತೆ ಪ್ರಚೋದಿಸುತ್ತಿರಬಹುದು ಎನ್ನುವುದು ಇವರ ತರ್ಕ. ಅದಷ್ಟೆ ಅಲ್ಲ ಇದು ಹೇಗಾಗುತ್ತದೆ ಎನ್ನುವುದನ್ನೂ ಪತ್ತೆ ಮಾಡಿದ್ದಾರೆ. ಅದು ಕಾರ್ಬನ್ ಡಯಾಕ್ಸೈಡ್‌ನಿನಿಂದಂತೂ ಅಲ್ಲವಂತೆ.



ಏಕೆಂದರೆ ವೈರಸ್ಸು ಸೋಂಕಿರುವ ಇಲಿಗಳು ಅದರಲ್ಲಿಯೂ ಜೀಕಾ ವೈರಸ್ಸು ಸೋಂಕಿದ ಇಲಿಗಳು ಇತರೆ ಇಲಿಗಳಿಗಿಂತ ಕಡಿಮೆ ಕಾರ್ಬನ್ ಡಯಾಕ್ಸೈಡನ್ನು ಸ್ರವಿಸುತ್ತವೆ. ಅಂದ ಮೇಲೆ ಕಾರ್ಬನ್ ಡಯಾಕ್ಸೈಡ್ ಇದಕ್ಕೆ ಕಾರಣವಿರಲಿಕ್ಕಿಲ್ಲ ಎಂದು ತೀರ್ಮಾನಿಸಿದ ಇವರು, ಇಲಿಗಳು ಇದ್ದ ಬೋನಿನಿಂದ ಅವುಗಳ ವಾಸನೆಯನ್ನು ಸಂಗ್ರಹಿಸಿದ್ದಾರೆ. ಈ ವಾಸನೆಯಲ್ಲಿ ಇಲಿಗಳಿಗೇ ವಿಶಿಷ್ಟವಾದಂತಹ ವಾಸನೆಗಳ ರಾಸಾಯನಿಕಗಳನ್ನು ಶೋಧಿಸಿ ಹೊರತೆಗೆದಿದ್ದಾರೆ. ಹೀಗೆ ಉಳಿದ ವಾಸನೆಯನ್ನು ಬೇರೆ ಇಲಿಗಳ ಮೈಗೆ ಹಚ್ಚಿದ್ದಾರೆ. ಅವುಗಳನ್ನೂ, ಬೇರೆ ಇಲಿಗಳನ್ನೂ ಜೊತೆಯಾಗಿ ಇಟ್ಟಾಗ ಕೇವಲ ಈ ವಾಸನೆ ಹಚ್ಚಿದ ಇಲಿಗಳ ಬಳಿಗೇ ಹೆಚ್ಚೆಚ್ಚು ಸೊಳ್ಳೆಗಳು ಬಂದುವಂತೆ. ಈ ವಾಸನೆಯನ್ನು ಮನುಷ್ಯರ ಕೈಗೂ ಹಚ್ಚಿ ಗಮನಿಸಿದಾಗ, ಹೆಚ್ಚು ಸೊಳ್ಳೆಗಳು ಆ ಕೈಯತ್ತ ಆಕರ್ಷಿತವಾದುವು.

ವೈರಸ್ಸು ಸೋಂಕಿದ ಇಲಿಗಳಲ್ಲಿ ಇರುವ ಆಕರ್ಷಕ ವಸ್ತು ಯಾವುದು ಎನ್ನುವುದು ಸಹಜವಾಗಿಯೇ ಮುಂದಿನ ಪ್ರಶ್ನೆ. ವಾಂಗ್ ಅವರು ಇಲಿಗಳ ಬೋನಿನಿಂದ ಸಂಗ್ರಹಿಸಿದ ವಾಸನೆಯಲ್ಲಿ ಸುಮಾರು ಇಪ್ಪತ್ತು ರಾಸಾಯನಿಕಗಳಿದ್ದುವು. ಇವುಗಳಲ್ಲಿ ಹದಿನೇಳು ರಾಸಾಯನಿಕಗಳು ವೈರಸ್ಸುಗಳ ಸೋಂಕಿಲ್ಲದ ಇಲಿಗಳಲ್ಲಿಯೂ ಇದ್ದುವು. ಇನ್ನುಳಿದ ಮೂರು ಗಂಧಾನಿಲಗಳು ಬಹುಶಃ ಸೊಳ್ಳೆಗಳನ್ನು ಆಕರ್ಷಿಸುತ್ತಿರಬಹುದು ಎಂದು ವಾಂಗ್ ತಂಡ ಅವನ್ನು ಪ್ರತ್ಯೇಕವಾಗಿ ಪರಿಶೀಲಿಸಿತು. ಇವುಗಳಲ್ಲಿ 'ಅಸಿಟೋಫೀನೋನ್' ಎನ್ನುವ ರಾಸಾಯನಿಕ ಸೊಳ್ಳೆಗಳಿಗೆ ಅಯಸ್ಕಾಂತವಿದ್ದಂತೆ ಎನ್ನುತ್ತಾರೆ, ವಾಂಗ್.

ಅಸಿಟೋಫೀನೋನ್ ಕೇವಲ ವೈರಸ್ಸು ಇರುವ ಇಲಿಗಳಲ್ಲಷ್ಟೆ ಹೇಗೆ ತಯಾರಾಯಿತು ಎನ್ನುವುದು ಇನ್ನೂ ಸ್ವಾರಸ್ಯಕರ ಪ್ರಶ್ನೆ. ಇದು ಇಲಿಗಳ ದೇಹದಲ್ಲಿ ತಯಾರಾಗಿದ್ದೇ ಇಲ್ಲ. ಇಲಿಗಳ ಮೈಮೇಲೆ ಸಹಜವಾಗಿಯೆ ವಾಸಿಸುವ ಕೆಲವು ಬ್ಯಾಕ್ಟೀರಿಯಾಗಳು ವೈರಸ್ಸು ಸೋಂಕಿದ್ದಾಗ ಇವನ್ನು ಹೆಚ್ಚೆಚ್ಚು ತಯಾರಿಸುತ್ತವಂತೆ. ಸಾಮಾನ್ಯ ಇಲಿಗಳಲ್ಲಿ ತಯಾರಾಗುವುದಕ್ಕಿಂತಲೂ ಹತ್ತು ಪಟ್ಟು ಹೆಚ್ಚು ಅಸಿಟೋಫೀನೋನ್ ವೈರಸ್ ಸೋಂಕಿದ ಇಲಿಗಳಲ್ಲಿಯೂ ತಯಾರಾಗುತ್ತವೆ.

ಹಾಗಿದ್ದರೆ ಮನುಷ್ಯರಲ್ಲಿಯೂ ಇದೇ ಕಾರಣವಿರಬಹುದೇ? ಏಕೆಂದರೆ ಮನುಷ್ಯರ ಮೈ ಮೇಲೂ, ಅದರಲ್ಲೂ ಬೆವರ ವಾಸನೆ ಸುರಿಸುವ ಕಂಕುಳು, ತೊಡೆ ಸಂದಿಗಳಲ್ಲಿ ಇಂತಹ ಬ್ಯಾಕ್ಟೀರಿಯಾ ಇರುತ್ತದಲ್ಲ – ಎಂದಿರಾ. ಹೌದು – ಎನ್ನುತ್ತಾರೆ ವಾಂಗ್. ಡೆಂಗಿಜ್ವರದಿಂದ ಬಳಲುತ್ತಿದ್ದ ರೋಗಿಗಳು ಹಾಗೂ ಸೋಂಕಿಲ್ಲದವರ ಕಂಕುಳಿನಿಂದ ಬೆವರನ್ನು ಒರೆಸಿ, ಬೇರೆಯವರ ಕೈಗೆ ಹಚ್ಚಿ ಪರೀಕ್ಷಿಸಿದ್ದಾರೆ. ಡೆಂಗಿರೋಗಿಯ ಕಂಕುಳ ವಾಸನೆಯನ್ನು ಹಚ್ಚಿದವರ ಕೈಗಳತ್ತ ಹೆಚ್ಚೆಚ್ಚು ಸೊಳ್ಳೆಗಳು ಹಾರಿ ಬಂದುವು. ಅಂದರೆ ವೈರಸ್ಸು ಸೋಂಕಿರುವ ವ್ಯಕ್ತಿಗಳಲ್ಲಿಯೂ ಅಸಿಟೋಫೀನೋನ್ ಹೆಚ್ಚೆಚ್ಚು ಬಿಡುಗಡೆಯಾಗುತ್ತಿರಬೇಕು. ಸೊಳ್ಳೆಗಳು ಅವರನ್ನೇ ಹುಡುಕಿ ಬಂದು ಕಚ್ಚುತ್ತಿರಬೇಕು. ಹೀಗೆ ಹೆಚ್ಚೆಚ್ಚು ವೈರಸ್ಸು ಹರಡಲು ಸಾಧ್ಯ ಎನ್ನುತ್ತಾರೆ, ವಾಂಗ್. ಈ ವಾಸನೆಯನ್ನು ಹೊಡೆದೋಡಿಸುವ ಉಪಾಯ ತಿಳಿದರೆ ವೈರಸ್ಸು ಹರಡುವುದನ್ನಾದರೂ ಸ್ವಲ್ಪ ತಡೆಯಬಹುದು ಎನ್ನುವುದು ಅವರ ತರ್ಕ.

ತನ್ನ ಉಳಿವಿಗೆ ವೈರಸ್ಸು ಮನುಷ್ಯನ ರಕ್ತವನ್ನೇ ಕುಡಿಯುವ ಸೊಳ್ಳೆಯನ್ನು ಕೈ ಬೀಸಿ ಕುಡಿಯುವಂತೆ ಮಾಡುತ್ತದೆಯಲ್ಲ?! ಹೇಗಿದೆ ನೋಡಿ ನಿಸರ್ಗದ ತಂತ್ರ!

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಫ್ 13

ಅವಿನಾಶ್ ಬಿ.

ಸ್ಯಾಮ್‌ಸಂಗ್ ಇತ್ತೀಚೆಗೆ ಮಧ್ಯಮ ಶ್ರೇಣಿಯ ಗ್ಯಾಲಕ್ಸಿ ಎಫ್ 13 ಸ್ಮಾರ್ಟ್‌ಫೋನನ್ನು ಭಾರತೀಯ ಮಾರುಕಟ್ಟೆಗೆ ಬಿಡುಗಡೆಗೊಳಿಸಿದೆ. 6000mAh ಬ್ಯಾಟರಿ ಮತ್ತು ಅತ್ಯಾಧುನಿಕವಾದ 'ಡೇಟಾ ಸ್ವಿಚಿಂಗ್' ವೈಶಿಷ್ಟ್ಯ ಜೊತೆಗೆ 50 ಮೆಗಾಪಿಕ್ಸೆಲ್ ಕ್ಯಾಮೆರಾ ವೈಶಿಷ್ಟ್ಯಗಳಿರುವ ಈ ಫೋನ್ ಹೇಗಿದೆ?

ವಿನ್ಯಾಸ

6.6 ಇಂಚಿನ FHD + ಡಿಸ್‌ಪ್ಲೇ ಮತ್ತು ಐಪಿಎಸ್ ಎಲ್‌ಸಿಡಿ ಪ್ಯಾನೆಲ್ ಇರುವ ಸ್ಕ್ರೀನ್ ಗಮನ ಸೆಳೆಯುತ್ತದೆ. ₹ 12 ಸಾವಿರ ಆಸುಪಾಸಿನ ಬೆಲೆಯಲ್ಲಿ ಈ ರೀತಿಯ ಡಿಸ್‌ಪ್ಲೇ ದೊರೆಯುವುದು ವಿಶೇಷ. ಗೀರುಗಳು ಆಗದಂತೆ ಗೊರಿಲ್ಲಾ ಗ್ಲಾಸ್ 5.0 ಸಂರಕ್ಷಣೆಯಿದೆ. ಹಿಂಭಾಗದಲ್ಲಿ ತ್ರಿವಳಿ ಕ್ಯಾಮೆರಾ ಮತ್ತು ಫ್ಲ್ಯಾಶ್ ಇದ್ದು, ಹಿಂಭಾಗದ ಕವಚವು ಸುಳಿಗಳಂತಿರುವ ಗೆರೆಗಳ ವಿನ್ಯಾಸದಿಂದ ಆಕರ್ಷಣೀಯವಾಗಿದೆ. ಇದರಿಂದಾಗಿ, ಬೆರಳಚ್ಚು ಮೂಡುವುದಿಲ್ಲ ಮತ್ತು ಹಿಡಿದುಕೊಳ್ಳಲು ಗ್ರಿಪ್ ಕೂಡ ದೊರೆಯುತ್ತದೆ. ಎರಡು ಮೈಕ್ರೋ ಸಿಮ್ ಹಾಗೂ ಎಸ್‌ಡಿ ಕಾರ್ಡ್ (1TB ವರೆಗಿನ ಸಾಮರ್ಥ್ಯ) ಅಳವಡಿಸಬಹುದಾದ ಟ್ರೇ, ಟೈಪ್-ಸಿ ಚಾರ್ಜಿಂಗ್ ಪೋರ್ಟ್ ಇದೆ. ಒಟ್ಟಾರೆ ಫೋನ್‌ನ ಬಾಡಿ ಪ್ಲಾಸ್ಟಿಕ್‌ನದ್ದೇ ಆದರೂ ವಿನ್ಯಾಸ ಆಕರ್ಷಕವಾಗಿದೆ ಮತ್ತು ಇಷ್ಟು ಬ್ಯಾಟರಿ ಇದ್ದರೂ ಹಗುರವೂ ತೆಳುವಾಗಿಯೂ ಇದೆ.

ಕಾರ್ಯಾಚರಣೆ

ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಫ್13ರಲ್ಲಿ ಒಕ್ಟಾಕೋರ್ ಎಕ್ಸಿನೋಸ್ 850 ಚಿಪ್‌ಸೆಟ್ ಇದ್ದು, 4GB RAM ನೀಡಲಾಗಿದೆ. ಹೀಗಾಗಿ ಬ್ರೌಸಿಂಗ್ ತೀರಾ ಸುಲಲಿತವಾಗಿದೆ. ತೀರಾ ಹೆಚ್ಚು ತೂಕದ ಅಥವಾ ಗ್ರಾಫಿಕ್ಸ್ ಇರುವ ಗೇಮಿಂಗ್‌ಗೆ ಹೇಳಿಮಾಡಿಸಿದ್ದು ಎಂದಲ್ಲವಾದರೂ, ಸಮಸ್ಯೆಯೇನೂ ಗೋಚರಿಸಲಿಲ್ಲ. ಆಂಡ್ರಾಯ್ಡ್ 12 ಕಾರ್ಯಾಚರಣೆ ವ್ಯವಸ್ಥೆ ಆಧಾರಿತ ಒನ್ ಯುಐ4.1 ಸಿಸ್ಟಂ ಇದರಲ್ಲಿದೆ.

ಕ್ಯಾಮೆರಾ

ಹಿಂಭಾಗದಲ್ಲಿ 50MP + 5MP (ಅಲ್ಟ್ರಾ ವೈಡ್) + 2MP (ಡೆಪ್ತ್ ಸೆನ್ಸರ್) ಮೆಗಾಪಿಕ್ಸೆಲ್ ಸಾಮರ್ಥ್ಯದ ಮೂರು ಲೆನ್ಸ್‌ಗಳು ಮತ್ತು ಫ್ಲ್ಯಾಶ್ ಇರುವ ಕ್ಯಾಮೆರಾ ಸೆಟಪ್ ಇದ್ದು, ಗುಣಮಟ್ಟವು ಚೆನ್ನಾಗಿಯೇ ಇದೆ. ಉತ್ತಮ ಬೆಳಕಿರುವಲ್ಲಿ ಚಿತ್ರ ಅಥವಾ ವಿಡಿಯೊಗಳ ನಿಖರತೆ ಚೆನ್ನಾಗಿದ್ದು, ಕಡಿಮೆ ಬೆಳಕಿನಲ್ಲಿ ಕೂಡ ಗುಣಮಟ್ಟವನ್ನು ತಳ್ಳಿಹಾಕುವಂತಿಲ್ಲ. ಪ್ರತ್ಯೇಕವಾಗಿ ನೈಟ್ ಮೋಡ್ ಇರುವುದು ಪ್ಲಸ್ ಪಾಯಿಂಟ್. 8MP ಸೆಲ್ಫೀ ಕ್ಯಾಮೆರಾ ಇದ್ದು, ವಿಡಿಯೊ ಕರೆಗಳಿಗೆ ಹೊಂದಿಕೊಳ್ಳುತ್ತದೆ.

6000mAh ಬ್ಯಾಟರಿಯ ಚಾರ್ಜ್ ಸಾಧಾರಣ ಬಳಕೆಯಲ್ಲಿ ಎರಡರಿಂದ 3 ದಿನಗಳ ಕಾಲಕ್ಕೆ ಸಮಸ್ಯೆಯಾಗಿಲ್ಲ. ಬಾಕ್ಸ್‌ನಲ್ಲಿ 15W ವೇಗದ ಚಾರ್ಜಿಂಗ್ ಬೆಂಬಲಿಸುವ ಚಾರ್ಜರ್ ಇದ್ದು, ಒಂದುವರೆ ಗಂಟೆಯಲ್ಲಿ ಪೂರ್ತಿ ಚಾರ್ಜ್ ಆಗುತ್ತದೆ.

ಸ್ಮಾರ್ಟ್ ವೈಶಿಷ್ಟ್ಯಗಳು: ಸೆಟ್ಟಿಂಗ್ಸ್‌ನಲ್ಲಿ ಅಡ್ವಾನ್ಸ್ಡ್ ಫೀಚರ್ಸ್ ಎಂಬಲ್ಲಿನ ಮೋಶನ್ಸ್ & ಗೆಶ್ಚರ್ಸ್ ವಿಭಾಗದಲ್ಲಿ, ಫೋನ್ ಕೈಗೆತ್ತಿದಾಗ ಡಿಸ್‌ಪ್ಲೇ ಆನ್ ಆಗುವುದು, ಸ್ಕ್ರೀನ್ ಆನ್/ಆಫ್ ಮಾಡಲು ಡಬಲ್-ಟ್ಯಾಪ್ ಮಾಡುವುದು, ಸ್ಕ್ರೀನ್ ಕಣ್ಣಿನ ಎದುರಲ್ಲಿದ್ದಾಗ ಲಾಕ್ ಆಗದಿರುವುದು, ಮಗುಚಿ ಇಟ್ಟರೆ ಮ್ಯೂಟ್ ಆಗುವುದು ಮುಂತಾದ ಸನ್ನೆಗಳು ಚೆನ್ನಾಗಿ ಕೆಲಸ ಮಾಡುತ್ತವೆ.

ವೈಶಿಷ್ಟ್ಯಗಳು


ಪ್ರಧಾನ ಸಿಮ್‌ನಲ್ಲಿ ಸಿಗ್ನಲ್ ಸಮಸ್ಯೆಯಿಂದ ಇಂಟರ್ನೆಟ್ (ಡೇಟಾ) ಸಂಪರ್ಕಕ್ಕೆ ತೊಡಕಾದರೆ, ಡೇಟಾ ಸ್ವಿಚಿಂಗ್ ವೈಶಿಷ್ಟ್ಯ ಮೂಲಕ ಮತ್ತೊಂದು ಸಿಮ್ ಅನ್ನು ಸ್ವಯಂಚಾಲಿತವಾಗಿ ಡೇಟಾಕ್ಕೆ ಬಳಸುವ ವ್ಯವಸ್ಥೆಯಿದೆ. ಅದೇ ರೀತಿ, 4GB RAM ಇದ್ದರೂ ಅಗತ್ಯಬಿದ್ದರೆ ಅದನ್ನು 8GBವರೆಗೂ ವಿಸ್ತರಿಸಬಹುದಾದ RAM ಪ್ಲಸ್ ತಂತ್ರಜ್ಞಾನವಿದ್ದು, ಎಐ ಪವರ್ ಮ್ಯಾನೇಜ್‌ಮೆಂಟ್ ವ್ಯವಸ್ಥೆಯು, 3 ದಿನ ಬಳಸದೇ ಇರುವ ಆ್ಯಪ್‌ಗಳನ್ನು ಸ್ಲೀಪ್ ಮೋಡ್‌ಗೆ ಹಾಕುವ ಮೂಲಕ ಬ್ಯಾಟರಿ ಚಾರ್ಜ್ ಉಳಿತಾಯಕ್ಕೆ ಪೂರಕವಾಗಿದೆ.

ಮೂರು ಬಣ್ಣಗಳಲ್ಲಿ ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಫ್13 ಲಭ್ಯವಿದೆ. ನಸುನೀಲಿ, ತಾಮ್ರ ಬಣ್ಣ ಮತ್ತು ಹಸಿರು. 4GB + 64GB ಮಾದರಿಯ ಬೆಲೆ ₹11,999 ಹಾಗೂ 4GB + 128GB ಮಾದರಿಯ ಬೆಲೆ ₹12,999.



ಸ್ಯಾಮ್‌ಸಂಗ್ ಗ್ಯಾಲಕ್ಸಿ ಎಫ್13: ತ್ರಿವಳಿ ಕ್ಯಾಮೆರಾ

ಕೃಷಿ ವಲಯದಲ್ಲಿ ತಂತ್ರಜ್ಞಾನದ ಸ್ಟಾರ್ಟಪ್



ಕೃಷ್ಣ ಭಟ್

ಕೃಷಿವಲಯಕ್ಕೆ ಹೊಸ ಹೊಸ ತಂತ್ರಜ್ಞಾನಗಳು ಪರಿಚಯವಾಗಬೇಕು ಎಂದು ಸರ್ಕಾರ ಸೇರಿದಂತೆ ಎಲ್ಲರೂ ಬಯಸುತ್ತಿದ್ದ ಕಾಲವೊಂದಿತ್ತು. ಈಗ ಕೃಷಿಯ ಬಹುತೇಕ ಪ್ರತಿ ಹಂತದಲ್ಲೂ ತಂತ್ರಜ್ಞಾನಗಳ ಬಳಕೆಯಾಗುತ್ತಿವೆ. ಬಹುಶಃ ನೀರಿನ ಪಂಪ್‌ನಿಂದ ಶುರುವಾದ ಈ ತಾಂತ್ರಿಕ ಪರಿಕರಗಳ ಬಳಕೆ ಈಗ ಡ್ರೋನ್ ಬಳಕೆಯವರೆಗೆ ಬಂದು ನಿಂತಿದೆ. ಆದರೆ, ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವ ಪ್ರಕ್ರಿಯೆ ತೀರಾ ಇತ್ತೀಚಿನವರೆಗೂ ಸಾಂಪ್ರದಾಯಿಕ ವಿಧಾನವನ್ನೇ ಅನುಸರಿಸುತ್ತಿದ್ದವು.

ಈ ನಿಟ್ಟಿನಲ್ಲಿ ಇತ್ತೀಚೆಗೆ ಹೊಸ ಹೊಸ ಬೆಳವಣಿಗೆಗಳಾಗಿವೆ. ಇದಕ್ಕೆ ಮೂಲ ಕಾರಣವೇ ಕೃಷಿ ತಂತ್ರಜ್ಞಾನ ಆಧರಿತ ಸ್ಟಾರ್ಟಪ್‌ಗಳು! ಹಲವು ಸ್ಟಾರ್ಟಪ್‌ಗಳು ಈಗ ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಕೃಷಿ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ತಲುಪಿಸುವ ಪ್ರಯತ್ನ ನಡೆಸುತ್ತಿವೆ. ಸದ್ಯ 700 ಅಗ್ರಿಟೆಕ್ ಸ್ಟಾರ್ಟಪ್‌ಗಳು ಭಾರತದಲ್ಲಿವೆ! 'ಅರ್ನಸ್ಟ್ & ಯಂಗ್' 2020 ಪ್ರಕಾರ 2025ರ ವೇಳೆಗೆ ಅಗ್ರಿಟೆಕ್ ಸ್ಟಾರ್ಟಪ್ 1.80 ಲಕ್ಷ ಕೋಟಿ ವಹಿವಾಟು ನಡೆಸಲಿದೆ! ಇಲ್ಲಿ ಇಂತಹ ಕೆಲವು ಸ್ಟಾರ್ಟಪ್‌ಗಳ ವಿವರಗಳನ್ನು ನೋಡೋಣ.

ನಿಂಜಾ ಕಾರ್ಟ್

2015ರಲ್ಲಿ ತಿರುಕುಮಾರನ್ ನಾಗರಾಜನ್, ಕಾರ್ತೀಶ್ವರನ್ ಹಾಗೂ ಇತರರು ಸ್ಥಾಪಿಸಿದ ಆಹಾರ ಡೆಲಿವರಿ ಸೇವೆ ನಿಂಜಾಕಾರ್ಟ್‌ನಲ್ಲಿ ಹಲವು ದೊಡ್ಡ ದೊಡ್ಡ ವೆಂಚರ್ ಕ್ಯಾಪಿಟಲ್ ಸಂಸ್ಥೆಗಳು ಹೂಡಿಕೆ ಮಾಡಿವೆ. ಇದು ರೈತರಿಂದ ನೇರವಾಗಿ ತರಕಾರಿ ಮತ್ತು ಹಣ್ಣುಗಳನ್ನು ಖರೀದಿ ಮಾಡಿ, ಗ್ರಾಹಕರಿಗೆ ಮಾರಾಟ ಮಾಡುತ್ತದೆ. ಅಷ್ಟೇ ಅಲ್ಲ, ಇದು ನಗರದಲ್ಲಿರುವ ಸೂಪರ್‌ಮಾರ್ಕೆಟ್‌ಗಳು ಮತ್ತು ಕಿರಾಣಿ ಅಂಗಡಿಗಳಿಗೂ ತರಕಾರಿಗಳು, ಹಣ್ಣು ಮತ್ತು ದಿನಸಿ ಸಾಮಗ್ರಿಗಳನ್ನು ಮಾರಾಟ ಮಾಡುತ್ತದೆ. ರೈತರಿಂದ ಆಯಾ ಋತುವಿನಲ್ಲಿ ಬೇಡಿಕೆ ಇರುವ ಬೆಳೆಗಳನ್ನು ಬೆಳೆಸಿ, ಅವುಗಳನ್ನು ಚಿಲ್ಲರೆ ವಹಿವಾಟುದಾರರು ಮತ್ತು ಗ್ರಾಹಕರಿಗೆ ತಲುಪಿಸುವ ಕೆಲಸವನ್ನು ಇದು ಮಾಡುತ್ತದೆ.

ರೇಷಮಂಡಿ

ರೇಷ್ಮೆಕೃಷಿಯಲ್ಲಿ ಅತ್ಯಂತ ಹೆಚ್ಚಿನ ತಾಂತ್ರಿಕ ಪರಿಕರಗಳನ್ನು ಹಿಂದಿನಿಂದಲೂ ಬಳಸುತ್ತಿದ್ದು, ಈ ವಲಯದಲ್ಲಿ ಸಹಜವಾಗಿಯೇ ಹೊಸ ತಂತ್ರಜ್ಞಾನದ ಅಳವಡಿಕೆ ಸುಲಭ. 'ರೇಷಮಂಡಿ' ಸ್ಟಾರ್ಟಪ್ ಸ್ಥಾಪಿಸಿದ್ದು ಮಾಯಂಕ್ ತಿವಾರಿ ಮತ್ತು ಸೌರಭ್ ಕುಮಾರ್ ಅಗರ್ವಾಲ್. ರೇಷ್ಮೆ ರೈತರಿಗೆ ಬೆಳೆ ಸಲಹೆ, ನೇಕಾರರಿಗೆ ಕಚ್ಚಾ ಸಾಮಗ್ರಿಗಳನ್ನು ಒದಗಿಸುವುದು ಹಾಗೂ ವಿನ್ಯಾಸದ ಕುರಿತ ಸಲಹೆಗಳನ್ನು ನೀಡುವುದು ಮತ್ತು ರೈತರು ಹಾಗೂ ನೇಕಾರರನ್ನು ಮಿಲ್‌ಗಳು ಮತ್ತು ಚಿಲ್ಲರೆ ವಹಿವಾಟುದಾರರಿಗೆ ಸಂಪರ್ಕಿಸುವ ಕೆಲಸವನ್ನು ಇದು ಮಾಡುತ್ತದೆ. ರೇಷ್ಮೆಬೆಳೆಯಿಂದ ರೇಷ್ಮೆ ಉತ್ಪನ್ನ ತಯಾರಿಕೆಯವರೆಗಿನ ಸಂಪೂರ್ಣ ಸರಣಿಯಲ್ಲಿ ಈ ಸ್ಟಾರ್ಟಪ್ ತನ್ನನ್ನು ತೊಡಗಿಸಿಕೊಂಡಿದೆ.

ಬೀಜಕ್

ಇದು ಕೃಷಿ ಸಾಮಗ್ರಿಗಳ ಆನ್‌ಲೈನ್ ಮಾರುಕಟ್ಟೆ. ಇಲ್ಲಿ ಖರೀದಿದಾರರು, ಮಾರಾಟಗಾರರು, ಚಿಲ್ಲರೆ ವ್ಯಾಪಾರಿಗಳು, ಸಗಟು ವ್ಯಾಪಾರಿಗಳು, ಆಹಾರ ಸಂಸ್ಕರಣೆ ಮಾಡುವವರು, ರೈತರು ಎಲ್ಲರೂ ಇದ್ದಾರೆ. ಈ ಸ್ಟಾರ್ಟಪ್ ತಿಂಗಳಿಗೆ ಸುಮಾರು ₹ 300 ಕೋಟಿ ವಹಿವಾಟು ಮಾಡುತ್ತದೆ. ಈ ಪ್ಲಾಟ್‌ಫಾರಂನಲ್ಲಿ ಸುಮಾರು 90 ಸಾಮಗ್ರಿಗಳಿವೆ.

ಹಲವು ಪ್ರಖ್ಯಾತ ಹೂಡಿಕೆ ಸಂಸ್ಥೆಗಳು ಬೀಜಕ್‌ನಲ್ಲಿ ಹೂಡಿಕೆ ಮಾಡಿವೆ. ಬೀಜಕ್‌ನಲ್ಲಿ ವಹಿವಾಟು ವಿಶ್ವಾಸ ಮತ್ತು ನಂಬಿಕೆಯ ಆಧಾರದಲ್ಲಿ ನಡೆಯುತ್ತದೆ. ಪ್ರತಿ ಡೀಲರ್‌ಗೂ ಇದರಲ್ಲಿ ರೇಟಿಂಗ್ಸ್ ನೀಡಲಾಗುತ್ತದೆ. ಈ ರೇಟಿಂಗ್ ಆತನ ವಿಶ್ವಾಸಾರ್ಹತೆಯನ್ನು ಅಳೆಯುತ್ತದೆ. ಅಲ್ಲದೆ, ಮಧ್ಯವರ್ತಿಗಳ ಹಾವಳಿಯಿಂದ ತಪ್ಪಿಸಿಕೊಂಡು ನೇರವಾಗಿ ಸಾಮಗ್ರಿಗಳನ್ನು ಮಾರಾಟ ಮಾಡಲು ಇದು ರೈತರಿಗೆ ಅನುವು ಮಾಡಿಕೊಡುತ್ತದೆ.

ಅಗ್ರೋಸ್ಟಾರ್

ಇದೊಂದು ವಿಭಿನ್ನ ಸ್ಟಾರ್ಟಪ್. ಇದು ರೈತರಿಗೆ ಬೆಳೆ ಕುರಿತ ಸಮಗ್ರ ಮಾಹಿತಿ ಹಾಗೂ ಸಲಹೆಯನ್ನು ನೀಡುತ್ತದೆ. ಅಷ್ಟೇ ಅಲ್ಲ, ರೈತರಿಗೆ ಅಗತ್ಯವಿರುವ ಸಲಕರಣೆಗಳನ್ನೂ ಇದು ಒದಗಿಸುತ್ತದೆ. 2013ರಲ್ಲಿ ಸೋದರರಾದ ಶಾರ್ದೂಲ್ ಮತ್ತು ಸಿತಾಂಶು ಸೇಥ್ ಸ್ಥಾಪಿಸಿದ ಅಗ್ರೋಸ್ಟಾರ್ ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದ 5 ಲಕ್ಷಕ್ಕೂ ಹೆಚ್ಚು ರೈತರಿಗೆ ನೆರವಾಗುತ್ತಿದೆ. ಒಂದು ಮಿಸ್ಡ್ ಕಾಲ್ ಕೊಟ್ಟರೆ ಅಥವಾ ಅವರ ಆಂಡ್ರಾಯ್ಡ್ ಆ್ಯಪ್ ಡೌನ್‌ಲೋಡ್ ಮಾಡಿಕೊಂಡರೆ ಸಮಗ್ರ ಬೆಳೆ ಮಾಹಿತಿ ಪಡೆಯಬಹುದು. ಸದ್ಯ ಕೃಷಿ ಮಾಹಿತಿ ಕುರಿತಂತೆ ಅಗ್ರೋಸ್ಟಾರ್ ಆ್ಯಪ್ ಪ್ರಮುಖ ಸ್ಥಾನದಲ್ಲಿದೆ.

ವೇಕೂಲ್

ನಿಂಜಾಕಾರ್ಟ್ ರೀತಿಯಲ್ಲೇ ಕೆಲಸ ಮಾಡುವ ವೇಕೂಲ್ ಕೂಡ ಅತ್ಯಂತ ಒಂದು ಮಹತ್ವದ ಪ್ರಗತಿ ಸಾಧಿಸುವ ಮತ್ತು ರೈತರಿಗೆ ಅಪಾರ ನೆರವಾಗಬಲ್ಲ ಸ್ಟಾರ್ಟಪ್. ಇದು ರೈತರ ಬೆಳೆಯನ್ನು ಸ್ಥಳದಲ್ಲೇ ಖರೀದಿ ಮಾಡಿ ಸೂಪರ್‌ಮಾರ್ಕೆಟ್‌ಗಳು ಮತ್ತು ದೊಡ್ಡ ದೊಡ್ಡ ಮಾಲ್‌ಗಳಿಗೆ ಮಾರಾಟ ಮಾಡುತ್ತದೆ. ತಾನೇ ಸಾಗಾಣಿಕೆ ಮತ್ತು ಸಂಸ್ಕರಣೆ, ಪ್ಯಾಕಿಂಗ್ ಎಲ್ಲವನ್ನೂ ನಿರ್ವಹಿಸುತ್ತದೆ. ಇನ್ನು ಚೆನ್ನೈಯಲ್ಲಿ ಇದು ಸನ್ನಿಬೀ ಬ್ರ್ಯಾಂಡ್ ಅಡಿಯಲ್ಲಿ ಚಿಲ್ಲರೆ ವಹಿವಾಟನ್ನೂ ನಡೆಸುತ್ತದೆ. ಟ್ರಕ್‌ಗಳು, ರಿಟೇಲ್ ಔಟ್‌ಲೆಟ್‌ಗಳು ಹಾಗೂ ಇ-ಕಾಮರ್ಸ್ ತಾಣವನ್ನೂ ಇದು ಚೆನ್ನೈನಲ್ಲಿ ಹೊಂದಿದೆ. ಇದು ಕೇವಲ ತಂತ್ರಜ್ಞಾನವನ್ನು ಬಳಸಿದ ಸಂಸ್ಥೆಯಲ್ಲ. ತಂತ್ರಜ್ಞಾನದ ಜೊತೆಗೆ, ಸರಕುಗಳ ಸಾಗಣೆಯಲ್ಲೂ ತೊಡಗಿಸಿಕೊಂಡಿರುವುದರಿಂದ ಈ ಸ್ಟಾರ್ಟಪ್‌ಗೆ ಬೆಳೆಯುವ ಅಪಾರ ಅವಕಾಶವೂ ಇದೆ. 2015ರಲ್ಲಿ ಈ ಸ್ಟಾರ್ಟಪ್ ಅನ್ನು ಸ್ಥಾಪಿಸಿದವರು ತಮಿಳುನಾಡಿನ ಕಾರ್ತಿಕ್ ಜಯರಾಮನ್ ಮತ್ತು ಸಂಜಯ್ ದಾಸರಿ.



ಐಎಸ್‌ಗೆ ನೇಮಕ– ಮೂವರು ತಪ್ಪಿತಸ್ಥರು: ಎನ್‌ಐಎ ಕೋರ್ಟ್

ತಿರುವನಂತಪುರ: 'ಇಸ್ಲಾಮಿಕ್ ಸ್ಟೇಟ್‌ನ (ಐಎಸ್) ನೇಮಕ ಪ್ರಕರಣದಲ್ಲಿ ಮೂವರನ್ನು ತಪ್ಪಿತಸ್ಥರೆಂದು ಕೊಚ್ಚಿಯ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ವಿಶೇಷ ನ್ಯಾಯಾಲಯವು ಮಂಗಳವಾರ ತೀರ್ಪು ನೀಡಿದೆ.

ಕೇರಳದ ಕಣ್ಣೂರು ಜಿಲ್ಲೆಯವರಾದ ಮಿದ್ಲಾಜ್, ಅಬ್ದುಲ್ ರಜಾಕ್ ಮತ್ತು ಯು.ಕೆ. ಹಮ್ಜಾ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ತಪ್ಪಿತಸ್ಥರೆಂದು ಸಾಬೀತಾಗಿದೆ. ತಪ್ಪಿತಸ್ಥರಿಗೆ ಶುಕ್ರವಾರ ಶಿಕ್ಷೆ ಪ್ರಕಟವಾಗಲಿದೆ.

2017ರಲ್ಲಿ ಕಣ್ಣೂರಿನ ವಳಪಟ್ಟಣಂನಲ್ಲಿ ಐಎಸ್‌ಗೆ ನೇಮಕಾತಿ ನಡೆದಿದ್ದು, ಕಣ್ಣೂರಿನ ವಿವಿಧೆಡೆಯಿಂದ 15 ಮಂದಿ ನೇಮಕ ಮಾಡಲಾಗಿತ್ತು ಎನ್ನಲಾಗಿದೆ.

ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ನಂತರ ಎನ್‌ಐಎ ಪ್ರಕರಣ ಕೈಗೆತ್ತಿಕೊಂಡಿತ್ತು.

ಹಲವು ವರ್ಷಗಳಿಂದ ಕೇರಳದಲ್ಲಿನ 100ಕ್ಕೂ ಹೆಚ್ಚು ಮಹಿಳೆಯರು ಮತ್ತು ಪುರುಷರು ಐಎಸ್‌ಗೆ ಸೇರಲು ಗಡಿ ದಾಟಿದ್ದ ವರದಿಯಾಗಿದೆ. ಇವರಲ್ಲಿ ಹಲವರು ಎನ್‌ಕೌಂಟರ್‌ನಲ್ಲಿ ಸಾವಿಗೀಡಾಗಿದ್ದಾರೆ ಎಂದೂ ವರದಿಗಳು ಹೇಳಿವೆ.

ದ್ರೌಪದಿಗೆ ಬೆಂಬಲ ಉದ್ಧವ್ ಠಾಕ್ರೆ

ಮುಂಬೈ (ಪಿಟಿಐ): ರಾಷ್ಟ್ರಪತಿ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರನ್ನು ಪಕ್ಷ ಬೆಂಬಲಿಸಲಿದೆ ಎಂದು ಶಿವಸೇನಾ ಅಧ್ಯಕ್ಷ ಉದ್ಧವ್ ಠಾಕ್ರೆ ಮಂಗಳವಾರ ಘೋಷಿಸಿದ್ದಾರೆ.

'ಈ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಯಾವುದೇ ಒತ್ತಡ 'ಕಾರಣವಲ್ಲ' ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

'ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ಪಕ್ಷವು ಮುರ್ಮು ಅವರನ್ನು ಬೆಂಬಲಿಸಬಾರದು. ಆದರೆ, ಪಕ್ಷವು ಸಂಕುಚಿತ ಮನೋಭಾವ ಹೊಂದಿಲ್ಲ' ಎಂದರು.

'ಯುಪಿಎ ರಾಷ್ಟ್ರಪತಿ ಅಭ್ಯರ್ಥಿಗಳಾಗಿದ್ದ ಪ್ರತಿಭಾ ಪಾಟೀಲ್, ಪ್ರಣವ್ ಮುಖರ್ಜಿ ಅವರನ್ನು ಪಕ್ಷ ಬೆಂಬಲಿಸಿತ್ತು. ರಾಷ್ಟ್ರೀಯ ಹಿತಾಸಕ್ತಿ ವಿಚಾರದಲ್ಲಿ ಪಕ್ಷವು ಎಂದಿಗೂ ರಾಜಕೀಯ ಮಾಡಿಲ್ಲ' ಎಂದು ಶಿವಸೇನಾ ಸಂಸದ ಸಂಜಯ್ ರಾವುತ್ ಹೇಳಿದರು.

ಪ್ರಾದೇಶಿಕ ಪಕ್ಷಗಳಾದ ಬಿಜೆಡಿ, ವೈಎಸ್‌ಆರ್ ಕಾಂಗ್ರೆಸ್, ಬಿಎಸ್‌ಪಿ, ಎಐಎಡಿಎಂಕೆ, ಟಿಡಿಪಿ, ಜೆಡಿಎಸ್, ಶಿರೋಮಣಿ ಅಕಾಲಿದಳ ಮತ್ತು ಈಗ ಶಿವಸೇನಾವು ದ್ರೌಪದಿ ಮುರ್ಮು ಅವರನ್ನು ಬೆಂಬಲಿಸಿವೆ. ಇದರಿಂದಾಗಿ ಮುರ್ಮು ಅವರಿಗೆ ಶೇ 60ರಷ್ಟು ಮತಗಳು ಬಂದಂತಾಗಿದೆ. ಮುರ್ಮು ಅವರ ಗೆಲುವು ಬಹುತೇಕ ಖಚಿತವಾಗಿದೆ.

ಮುಕುಲ್ ವಾಸ್ನಿಕ್ ನೇತೃತ್ವದಲ್ಲಿ ನಡೆದ ಸಭೆಗೆ 10 ಶಾಸಕರು ಹಾಜರು

ಗೋವಾ ಕಾಂಗ್ರೆಸ್ ಭಿನ್ನಮತ ಶಮನ

ಪಣಜಿ (ಪಿಟಿಐ): ಗೋವಾ ಕಾಂಗ್ರೆಸ್‌ನಲ್ಲಿ ಸೃಷ್ಟಿಯಾಗಿದ್ದ ಭಿನ್ನಮತ ಸದ್ಯಕ್ಕೆ ಶಮನಗೊಂಡಿದೆ. ಕಾಂಗ್ರೆಸ್ ನಾಯಕ ಮುಕುಲ್ ವಾಸ್ನಿಕ್ ನೇತೃತ್ವದಲ್ಲಿ ಸೋಮವಾರ ರಾತ್ರಿ ನಡೆದ ಸಭೆಗೆ ಮೈಕಲ್ ಲೋಬೊ ಸೇರಿದಂತೆ ಒಟ್ಟು 10 ಮಂದಿ ಶಾಸಕರು ಹಾಜರಾಗಿ ಒಗ್ಗಟ್ಟು ಪ್ರದರ್ಶಿಸಿದ್ದಾರೆ.

ಲೋಬೊ ಹಾಗೂ ದಿಗಂಬರ ಕಾಮತ್ ಸೇರಿದಂತೆ ಒಟ್ಟು ಐವರು ಶಾಸಕರು ಪಕ್ಷದಿಂದ ಅಂತರ ಕಾಯ್ದುಕೊಂಡಿದ್ದರು. 'ಇವರೆಲ್ಲಾ ಬಿಜೆಪಿಗೆ ಸೇರ್ಪಡೆಯಾಗುತ್ತಾರೆ' ಎಂಬ ವದಂತಿಯೂ ಹಬ್ಬಿತ್ತು. ಪಕ್ಷದ ವಿರುದ್ಧ ಪಿತೂರಿ ನಡೆಸಿದ ಆರೋಪದಡಿ ಲೋಬೊ ಅವರನ್ನು ವಿರೋಧ ಪಕ್ಷದ ನಾಯಕ ಸ್ಥಾನದಿಂದ ಕಾಂಗ್ರೆಸ್ ತೆಗೆದುಹಾಕಿತ್ತು. ಲೋಬೊ ಹಾಗೂ ಕಾಮತ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆಯೂ ಕಾಂಗ್ರೆಸ್ ಸೋಮವಾರ ಸ್ಪೀಕರ್‌ಗೆ ಅರ್ಜಿ ಸಲ್ಲಿಸಿತ್ತು.

ಪಕ್ಷದ ಕೇಂದ್ರ ಕಚೇರಿಯಲ್ಲಿ ಸುಮಾರು ಎರಡು ಗಂಟೆ ನಡೆದ ಸಭೆಯಲ್ಲಿ ಕಾಮತ್ ಅವರನ್ನು ಬಿಟ್ಟು ಉಳಿದೆಲ್ಲ ಶಾಸಕರು ಭಾಗಿಯಾಗಿದ್ದರು. ಎಐಸಿಸಿ ಗೋವಾ ಉಸ್ತುವಾರಿ ದಿನೇಶ್ ಗುಂಡೂರಾವ್ ಹಾಗೂ ಗೋವಾ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಅಮಿತ್ ಪಾಟ್ಕರ್ ಅವರೂ ಸಭೆಯಲ್ಲಿ ಪಾಲ್ಗೊಂಡಿದ್ದರು.

> **ಕಾಂಗ್ರೆಸ್‌ನಲ್ಲಿನ ಬೆಳವಣಿಗೆಗೂ ನಮಗೂ ಯಾವುದೇ ಸಂಬಂಧವಿಲ್ಲ. ಆ ಪಕ್ಷದ ಬಂಡಾಯ ಶಾಸಕರಿಂದ ನಮಗೇನೂ ಆಗಬೇಕಿಲ್ಲ**
> **ಪ್ರಮೋದ್ ಸಾವಂತ್**, ಗೋವಾ ಮುಖ್ಯಮಂತ್ರಿ

'ಕೆಲ ವ್ಯಕ್ತಿಗಳು ಶಾಸಕರಲ್ಲಿ ಒಡಕು ಮೂಡಿಸುವ ಮೂಲಕ ಪಕ್ಷ ಇಬ್ಭಾಗ ಮಾಡುವ ಹುನ್ನಾರ ನಡೆಸಿದ್ದರು. ಶಾಸಕರೆಲ್ಲಾ ಒಗ್ಗಟ್ಟು ಪ್ರದರ್ಶಿಸುವ ಮೂಲಕ ಅವರ ತಂತ್ರಗಾರಿಕೆ ವಿಫಲಗೊಂಡಿದೆ' ಎಂದು ವಾಸ್ನಿಕ್ ಸಭೆಯ ಬಳಿಕ ಹೇಳಿದ್ದಾರೆ.

'ಅಧಿವೇಶನದ ವೇಳೆ ಬಿಜೆಪಿಯನ್ನು ಇಕ್ಕಟ್ಟಿಗೆ ಸಿಲುಕಿಸುವುದು ಹೇಗೆ?, ಯಾವೆಲ್ಲಾ ವಿಚಾರಗಳನ್ನು ಇಟ್ಟುಕೊಂಡು ಆಡಳಿತಾರೂಢ ಪಕ್ಷದ ಮೇಲೆ ಮುಗಿಬೀಳಬೇಕು. ರಾಜ್ಯದಲ್ಲಿ ಪಕ್ಷ ಬಲಪಡಿಸುವುದು ಹೇಗೆ ಎಂಬ ವಿಚಾರಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು' ಎಂದೂ ತಿಳಿಸಿದ್ದಾರೆ.

ಲೋಬೊ ಹಾಗೂ ಕಾಮತ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸುವಂತೆ ಸ್ಪೀಕರ್‌ಗೆ ಸಲ್ಲಿಸಿರುವ ಅರ್ಜಿ ಹಿಂದಕ್ಕೆ ಪಡೆಯುತ್ತೀರಾ ಎಂಬ ಪ್ರಶ್ನೆಗೆ 'ಈಗಲೇ ಎಲ್ಲಾ ಪ್ರಶ್ನೆಗಳನ್ನು ಕೇಳಬೇಡಿ' ಎಂದು ಮಾಧ್ಯಮದವರಿಗೆ ಉತ್ತರಿಸಿದರು.

ಲೋಬೊ ಮಾತನಾಡಿ, 'ದಿನೇಶ್ ಗುಂಡೂರಾವ್ ಅವರು ಕರೆದಿದ್ದ ಸಭೆಯಲ್ಲಿ ಹಾಜರಾಗಿದ್ದೇನೆ. ಪಕ್ಷದಲ್ಲೇ ಇದ್ದೇನೆ. ಯಾವ ಶಾಸಕರೂ ಕಾಂಗ್ರೆಸ್ ಬಿಟ್ಟು ಹೋಗಿಲ್ಲ. ನಾನು ಪಕ್ಷದಲ್ಲೇ ಇದ್ದೇನೆ. ಯಾವ ಶಾಸಕರೂ ಕಾಂಗ್ರೆಸ್ ಬಿಟ್ಟು ಹೋಗಿಲ್ಲ. ಪ್ರತಿಪಕ್ಷ ನಾಯಕ ಸ್ಥಾನಕ್ಕೆ ನ್ಯಾಯ ಒದಗಿಸಲು ನನ್ನಿಂದ ಸಾಧ್ಯವಿಲ್ಲ. ಹೀಗಾಗಿ ಈ ಹುದ್ದೆಯಲ್ಲಿ ಮುಂದುವರಿಯದಿರಲು ನಿರ್ಧರಿಸಿದ್ದೆ. ಇದನ್ನು ಪಕ್ಷದ ವರಿಷ್ಠರಿಗೂ ತಿಳಿಸಿದ್ದೆ' ಎಂದಿದ್ದಾರೆ.

'ದಿಗಂಬರ ಕಾಮತ್ ಅಥವಾ ಸಂಕಲ್ಪ್ ಅಮೋನ್‌ಕರ್ ಅವರನ್ನು ಪ್ರತಿಪಕ್ಷದ ನಾಯಕರನ್ನಾಗಿ ಆಯ್ಕೆಮಾಡಬಹುದು' ಎಂದು ಅಭಿಪ್ರಾಯಪಟ್ಟಿದ್ದಾರೆ.

ಹಸಿರು ಹೈಡ್ರೋಜನ್ ಉತ್ಪಾದನೆ ಐಐಎಸ್‌ಸಿಯ ಹೊಸ ವಿಧಾನ

ನವದೆಹಲಿ (ಪಿಟಿಐ): ಜೈವಿಕ ತ್ಯಾಜ್ಯದಲ್ಲಿ ಹಸಿರು ಹೈಡ್ರೋಜನ್ (ಶುದ್ಧ ಜಲಜನಕ ಇಂಧನ) ಉತ್ಪಾದಿಸಲು ಪರಿಸರಸ್ನೇಹಿ ವಿಧಾನವನ್ನು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವಿಜ್ಞಾನಿಗಳು, ಅಭಿವೃದ್ಧಿಪಡಿಸಿದ್ದಾರೆ.

ಕೇಂದ್ರದ ನವೀನ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಬೆಂಬಲದಲ್ಲಿ ಈ ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲಾಗಿದೆ.

ಜೈವಿಕ ತ್ಯಾಜ್ಯವು ನವೀಕರಿಸಬಹುದಾದ ಹೇರಳ ಇಂಧನ ಮೂಲವೆನಿಸಿದೆ. ಮುಂಬರುವ ವರ್ಷಗಳಲ್ಲಿ ವಿವಿಧ ವಲಯಗಳಲ್ಲಿ, ವಿವಿಧ ವಿಧಾನದಿಂದ ಕನಿಷ್ಠ 50 ಲಕ್ಷ ಟನ್ ಹೈಡ್ರೋಜನ್ ಅನ್ನು ಭಾರತ ಬಳಸಲಿದೆ. ಹೈಡ್ರೋಜನ್ ಮಾರುಕಟ್ಟೆಯು ಗಣನೀಯವಾಗಿ ಸುಸ್ಥಿರ ಬೆಳವಣಿಗೆ ಸಾಧಿಸುವ ನಿರೀಕ್ಷೆ ಇದೆ ಎಂದು ಐಐಎಸ್‌ಸಿ ಸಂಶೋಧಕರು ಹೇಳಿದ್ದಾರೆ.

> **ಕೈಗಾರಿಕೆಗಳಲ್ಲಿ ಇಂಧನವಾಗಿ ಮತ್ತು ಕೃಷಿಗೆ ಹಸಿರು ಗೊಬ್ಬರ ತಯಾರಿಸಲು, ಮೆಥನಾಲ್ ಮತ್ತು ಎಥನಾಲ್ ಉತ್ಪಾದನೆಗೂ ಹಸಿರು ಹೈಡ್ರೋಜನ್ ಬಳಸಬಹುದು**
> **ಪ್ರೊ.ಎಸ್.ದಾಸಪ್ಪ**, ಐಐಎಸ್‌ಸಿ ಸುಸ್ಥಿರ ತಂತ್ರಜ್ಞಾನಗಳ ಕೇಂದ್ರ

ಐಐಎಸ್‌ಸಿಯ ಸುಸ್ಥಿರ ತಂತ್ರಜ್ಞಾನಗಳ ಕೇಂದ್ರದ ಪ್ರೊಫೆಸರ್ ಎಸ್. ದಾಸಪ್ಪ ಅವರ ನೇತೃತ್ವದ ಸಂಶೋಧಕರ ತಂಡವು, ಜೈವಿಕ ತ್ಯಾಜ್ಯದಿಂದ ಎರಡು ಹಂತಗಳಲ್ಲಿ ಹಸಿರು ಹೈಡ್ರೋಜನ್ ಉತ್ಪಾದಿಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದೆ.

ಮೊದಲ ಹಂತದಲ್ಲಿ ಜೈವಿಕ ತ್ಯಾಜ್ಯವನ್ನು ಸಿಂಥೆಸಿಸ್ ನೈಸರ್ಗಿಕ ಅನಿಲವಾಗಿ (ಸಿಂಥೆಸಿಸ್ ನ್ಯಾಚುರಲ್ ಗ್ಯಾಸ್) ಮಾರ್ಪಡಿಸಲಾಗುವುದು. ಆಮ್ಲಜನಕ ಮತ್ತು ಉಗಿಯನ್ನು ನೋವೆಲ್ ರಿಯಾಕ್ಟರ್ ಆಗಿ ಬಳಸಿ ಹೈಡ್ರೋಜನ್‌ಯುಕ್ತ ಹೇರಳ ಜಲಜನಕ ಇಂಧನ ಮಿಶ್ರಣದ ಅನಿಲವಾಗಿ ಸಿನ್‌ಗ್ಯಾಸ್.

ಎರಡನೇ ಹಂತದಲ್ಲಿ, ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಕಡಿಮೆ ಒತ್ತಡದ ಅನಿಲ ಪ್ರತ್ಯೇಕಿಸುವ ಘಟಕ ಬಳಸಿ, ಸಿಂಥೆಸಿಸ್ ನೈಸರ್ಗಿಕ ಗ್ಯಾಸ್‌ನಿಂದ ಶುದ್ಧ ಹೈಡ್ರೋಜನ್ ಉತ್ಪಾದಿಸಲಾಗುತ್ತದೆ. ಹಸಿರು ಹೈಡ್ರೋಜನ್ ಉತ್ಪಾದನೆಯ ಪ್ರಕ್ರಿಯೆಯಲ್ಲಿ ಈ ಎರಡು ತಂತ್ರಜ್ಞಾನಗಳು ಅತ್ಯಂತ ದಕ್ಷತೆಯ ವಿಧಾನಗಳು ಎಂದು ಸಂಶೋಧಕರು ಹೇಳಿದ್ದಾರೆ.

ಸದ್ಯ 1 ಕೆ.ಜಿ. ಜೈವಿಕ ತ್ಯಾಜ್ಯದಿಂದ 60 ಗ್ರಾಂ ಹೈಡ್ರೋಜನ್ ಉತ್ಪಾದಿಸಲಾಗುತ್ತಿದೆ. ಐಐಎಸ್‌ಸಿಯ ನವೀನ ತಂತ್ರಜ್ಞಾನದಿಂದ 1 ಕೆ.ಜಿ ಜೈವಿಕ ತ್ಯಾಜ್ಯದಲ್ಲಿ 100 ಗ್ರಾಂ ಹೈಡ್ರೋಜನ್ ಉತ್ಪಾದಿಸಬಹುದು ಎಂದು ಸಂಶೋಧಕರು ಪ್ರತಿಪಾದಿಸಿದ್ದಾರೆ.

ಮೋದಿ ಸ್ವಾಗತಕ್ಕೆ ಪೋಸ್ಟರ್ ಸಮರ



ಪ್ರಧಾನಿ ನರೇಂದ್ರ ಮೋದಿ ಅವರು ದೇವಘರ್‌ನ ಬಾಬಾ ಬೈದ್ಯನಾಥ್ ಧಾಮ್‌ನಲ್ಲಿ ಮಂಗಳವಾರ ಪೂಜೆ ಸಲ್ಲಿಸಿದರು – ಪಿಟಿಐ ಚಿತ್ರ

ದೇವಘರ್: ಜಾರ್ಖಂಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸ್ವಾಗತಕ್ಕೆ ಸಂಬಂಧಿಸಿ ಬಿಜೆಪಿ ಹಾಗೂ ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಮಧ್ಯೆ ಪೋಸ್ಟರ್‌ಗಳ ಸಮರ ನಡೆದಿದೆ.

ಮೋದಿ ಅವರು ಮಂಗಳವಾರ ವಿಮಾನ ನಿಲ್ದಾಣ ಸೇರಿ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲು ಜಾರ್ಖಂಡ್‌ಗೆ ಭೇಟಿ ನೀಡಿದ್ದರು. ಶ್ರಾವಣ ಪರಂಪರೆಯ ಜ್ಯೋತಿರ್ಲಿಂಗ ದೇವಘರ್‌ನ 'ಬೈದ್ಯನಾಥ್ ಧಾಮ'ಕ್ಕೂ ಮೋದಿ ಭೇಟಿ ನೀಡಿ, ಪೂಜೆ ಸಲ್ಲಿಸಿದರು.

ಜಾರ್ಖಂಡ್‌ನಲ್ಲಿ ಜೆಎಂಎಂ ಪಕ್ಷವು ಕಾಂಗ್ರೆಸ್ ಮೈತ್ರಿಕೂಟದ ಸರ್ಕಾರ ರಚಿಸಿದೆ. ವಾಡಿಕೆಯಂತೆ ಪ್ರಧಾನಿ ಅವರು ರಾಜ್ಯಗಳಿಗೆ ಬಂದಾಗ ಅವರನ್ನು ಸ್ವಾಗತಿಸಲು ಆಡಳಿತ ಪಕ್ಷಗಳು ಪೋಸ್ಟರ್ ಮತ್ತು ಬಂಟಿಂಗ್‌ಗಳನ್ನು ಹಾಕುವುದು ವಾಡಿಕೆ. ಆದರೆ, ವಿರೋಧ ಪಕ್ಷ ಬಿಜೆಪಿ ಕೂಡಾ ಪೋಸ್ಟರ್‌ಗಳನ್ನು ಹಾಕಿತ್ತು.

ಬಿಜೆಪಿ ಕೇಸರಿ ಬಣ್ಣದ ಪೋಸ್ಟರ್‌ಗಳಲ್ಲಿ ಪ್ರಧಾನಿ ಅವರ ಜತೆಗೆ ದೇವಘರ್‌ನ ಜ್ಯೋತಿರ್ಲಿಂಗದ ಚಿತ್ರ ಹಾಕಿದ್ದರೆ, ಜಾರ್ಖಂಡ್ ಸರ್ಕಾರ ಮತ್ತು ಜೆಎಂಎಂ ಪಕ್ಷ ಹಸಿರು ಬಣ್ಣದ ಪೋಸ್ಟರ್‌ಗಳಲ್ಲಿ ಪ್ರಧಾನಿ ಚಿತ್ರದ ಜತೆಗೆ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ಚಿತ್ರವನ್ನೂ ಹಾಕಿತ್ತು. ಜತೆಗೆ ಶಿಬು ಸೊರೇನ್ ಅವರ ಚಿತ್ರವೂ ಪೋಸ್ಟರ್‌ನಲ್ಲಿತ್ತು.

ಕೇರಳ: ಆರೆಸ್ಸೆಸ್ ಕಚೇರಿ ಎದುರು ಬಾಂಬ್ ಸ್ಫೋಟ

ಕಣ್ಣೂರು (ಪಿಟಿಐ): ಕೇರಳದ ಪಯ್ಯನ್ನೂರು ಪ್ರದೇಶದಲ್ಲಿರುವ ಆರ್‌ಎಸ್‌ಎಸ್ ಕಚೇರಿ ಆವರಣದಲ್ಲಿ ದುಷ್ಕರ್ಮಿಗಳು ಬಾಂಬ್ ಎಸೆದಿದ್ದು, ಅದು ಸ್ಫೋಟಿಸಿದ್ದರಿಂದ ಕಟ್ಟಡದ ಕಿಟಕಿಗಳಿಗೆ ಹಾನಿಯಾಗಿದೆ.

'ಸೋಮವಾರ ರಾತ್ರಿ 1 ಗಂಟೆ ಸುಮಾರಿಗೆ ಈ ಘಟನೆ ನಡೆದಿದೆ. ಘಟನಾ ಸ್ಥಳದ ಸುತ್ತಲಿನ ಸಿ.ಸಿ ಟಿ.ವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸುತ್ತಿದ್ದೇವೆ. ಎಫ್‌ಐಆರ್ ದಾಖಲಿಸಿ, ತನಿಖೆ ಆರಂಭಿಸಿದ್ದೇವೆ' ಎಂದು ಪೊಲೀಸ್ ಅಧಿಕಾರಿ ಹೇಳಿದ್ದಾರೆ.

ಸಿಪಿಐ(ಎಂ) ಕಾರ್ಯಕರ್ತರೇ ಕಚೇರಿ ಮೇಲೆ ಬಾಂಬ್ ದಾಳಿ ನಡೆಸಿದ್ದಾರೆ ಎಂದು ಆರ್‌ಎಸ್‌ಎಸ್ ಆರೋಪಿಸಿದೆ.

ಕೇಂದ್ರಕ್ಕೆ 4 ವಾರ ಗಡುವು ನೀಡಿದ ದೆಹಲಿ ಹೈಕೋರ್ಟ್

'ಪಿಎಂ ಕೇರ್ಸ್: ವಿಸ್ತೃತ ವರದಿ ಸಲ್ಲಿಸಿ'

ನವದೆಹಲಿ (ಪಿಟಿಐ): ಪಿಎಂ ಕೇರ್ಸ್ ಫಂಡ್ 'ಸರ್ಕಾರಿ' ನಿಧಿ ಎಂಬುದಾಗಿ ಘೋಷಿಸಲು ಕೋರಿರುವ ಅರ್ಜಿ ಸಂಬಂಧ ಕೇಂದ್ರ ಸರ್ಕಾರ ಸಲ್ಲಿಸಿರುವ ಒಂದು ಪುಟದ ಪ್ರತಿಕ್ರಿಯೆ ಒಪ್ಪದ ದೆಹಲಿ ಹೈಕೋರ್ಟ್, ಸಮಗ್ರ ಮತ್ತು ವಿಸ್ತೃತವಾದ ಉತ್ತರವನ್ನು ನಾಲ್ಕು ವಾರಗಳ ಒಳಗೆ ಸಲ್ಲಿಸಲು ಕೇಂದ್ರ ಸರ್ಕಾರಕ್ಕೆ ಮಂಗಳವಾರ ಸೂಚಿಸಿದೆ.

ಮುಖ್ಯನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಮಣಿಯಂ ಪ್ರಸಾದ್ ಅವರಿದ್ದ ಪೀಠವು, ಪಿಎಂ ಕೇರ್ಸ್ ನಿಧಿಯು ಸರ್ಕಾರಿ ನಿಧಿ ಎಂದು ಪ್ರತಿಪಾದಿಸಿ ಸಮ್ಯಕ್ ಗಂಗ್ವಾಲ್ 2021ರಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿತು.

'ತುರ್ತು ಪರಿಸ್ಥಿತಿಗಳಲ್ಲಿ ನಾಗರಿಕರಿಗೆ ನೆರವು ಮತ್ತು ಪರಿಹಾರ ಕಲ್ಪಿಸುವ ಪ್ರಧಾನಿಯವರ ನಿಧಿ (ಪಿಎಂ ಕೇರ್ಸ್ ಫಂಡ್) ಸಾಮಾನ್ಯ ವಿಷಯವಲ್ಲ. ಇಷ್ಟೊಂದು ಮಹತ್ವದ ವಿಷಯಕ್ಕೆ ಒಂದು ಪುಟದ ಪ್ರತಿಕ್ರಿಯೆ ಸಲ್ಲಿಸುವುದಾ? ಅದರಾಚೆಗೆ ಏನೂ ಇಲ್ಲವೇ? ಅರ್ಜಿದಾರರ ವಕೀಲರು ಎತ್ತಿರುವ ಒಂದು ವಿಷಯವೂ ಇದರಲ್ಲಿ ಇಲ್ಲ. ನಮಗೆ ವಿಸ್ತೃತ ಪ್ರತಿಕ್ರಿಯೆ ಬೇಕು' ಎಂದು ಪೀಠವು, ಕೇಂದ್ರ ಸರ್ಕಾರಕ್ಕೆ ಖಡಕ್ ಸೂಚನೆ ನೀಡಿತು.

ಇದೇ ಅರ್ಜಿದಾರರ ಇಂತಹದೇ ಮತ್ತೊಂದು ಅರ್ಜಿಗೆ ಈಗಾಗಲೇ ವಿವರ ಉತ್ತರ ಸಲ್ಲಿಸಲಾಗಿದೆ ಎಂದು ಕೇಂದ್ರದ ಪರ ಹಾಜರಿದ್ದ ವಕೀಲರು ಪೀಠಕ್ಕೆ ಮಾಹಿತಿ ನೀಡಿದರು.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಅರ್ಜಿದಾರರ ಎಲ್ಲ ವಾದಗಳ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯನ್ಯಾಯಮೂರ್ತಿಗಳು 'ಮೊದಲು ನಾಲ್ಕು ವಾರಗಳಲ್ಲಿ ಸಮಗ್ರ ಉತ್ತರ ಸಲ್ಲಿಸಿ. ಮುಂದಿನ ಎರಡು ವಾರಗಳಲ್ಲಿ ಪುನಃ ಇನ್ಯಾರಾದರೂ ಅರ್ಜಿ ಸಲ್ಲಿಸಿದರೆ ಅವುಗಳನ್ನೂ ಇದರಲ್ಲಿ ಸೇರಿಸುತ್ತೇವೆ' ಎಂದು ಹೇಳಿ, ಮುಂದಿನ ವಿಚಾರಣೆಯನ್ನು ಸೆ.16ಕ್ಕೆ ಪಟ್ಟಿ ಮಾಡಲು ಸೂಚಿಸಿದರು.

ಅರ್ಜಿದಾರ ಸಮ್ಯಕ್ ಗಂಗ್ವಾಲ್ ಅವರು ಪಿಎಂ ಕೇರ್ಸ್ ಅನ್ನು ಆರ್‌ಟಿಐ ಕಾಯ್ದೆಯಡಿ 'ಸಾರ್ವಜನಿಕ ಪ್ರಾಧಿಕಾರ'ವೆಂದು ಘೋಷಿಸುವಂತೆ ನಿರ್ದೇಶಿಸಲು ಕೋರಿ 2020ರಲ್ಲಿ ಸಲ್ಲಿಸಿದ್ದ ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ.

ಸಂಕ್ಷಿಪ್ತ ಸುದ್ದಿ

ವರವರ ರಾವ್ ಅರ್ಜಿ: ಇದೇ 19ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ಭೀಮಾ ಕೋರೆಗಾಂವ್ ಪ್ರಕರಣದ ಆರೋಪಿ, ಹೋರಾಟಗಾರ ಪಿ.ವರವರ ರಾವ್, ವೈದ್ಯಕೀಯ ಆಧಾರದಲ್ಲಿ ಶಾಶ್ವತ ಜಾಮೀನು ಕೋರಿದ್ದ ಅರ್ಜಿ ಜುಲೈ 19ರಂದು ವಿಚಾರಣೆಗೆ ಬರಲಿದೆ. ಮುಂದಿನ ಆದೇಶದವರೆಗೆ ಅವರಿಗೆ ಮಧ್ಯಂತರ ರಕ್ಷಣೆ ವಿಸ್ತರಿಸಲಾಗಿದೆ.

ಕಾಯಂ ಜಾಮೀನು ಕೋರಿದ್ದ ಅರ್ಜಿಯನ್ನು ಬಾಂಬೆ ಹೈಕೋರ್ಟ್ ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ರಾವ್ 'ಸುಪ್ರೀಂ'ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ವೈದ್ಯಕೀಯ ಜಾಮೀನು ಪಡೆದಿದ್ದ ರಾವ್ ಮಂಗಳವಾರ ಶರಣಾದರು.

ಜುಬೈರ್‌ಗೆ ಮಧ್ಯಂತರ ಜಾಮೀನು ವಿಸ್ತರಣೆ

ನವದೆಹಲಿ: ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇರೆಗೆ ಉತ್ತರಪ್ರದೇಶದ ಸೀತಾಪುರ ಜಿಲ್ಲೆಯಲ್ಲಿ 'ಆಲ್ಟ್‌ನ್ಯೂಸ್' ಸಹ ಸಂಸ್ಥಾಪಕ ಮೊಹಮ್ಮದ್ ಜುಬೈರ್ ಅವರ ವಿರುದ್ಧ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿ ನೀಡಿರುವ ಮಧ್ಯಂತರ ಜಾಮೀನಿನ ಅವಧಿಯನ್ನು ಮಂಗಳವಾರ ಸುಪ್ರೀಂ ಕೋರ್ಟ್ ವಿಸ್ತರಿಸಿದೆ. ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು, ಜುಬೈರ್ ವಿರುದ್ಧ ಪ್ರತಿ ಅಫಿಡವಿಟ್ ಸಲ್ಲಿಸಲು ಕಾಲಾವಕಾಶ ನೀಡುವಂತೆ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ಎ.ಎಸ್. ಬೋಪಣ್ಣ ಅವರಿದ್ದ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಐಟಿ ದಾಳಿ: ₹500 ಕೋಟಿ ಕಪ್ಪುಹಣ ಪತ್ತೆ

ನವದೆಹಲಿ (ಪಿಟಿಐ): ತಮಿಳುನಾಡಿನ ಎರಡು ಉದ್ಯಮ ಸಂಸ್ಥೆಗಳ ಮೇಲೆ ಇತ್ತೀಚೆಗೆ ದಾಳಿ ನಡೆಸಿದ್ದ ಆದಾಯ ತೆರಿಗೆ ಇಲಾಖೆಯು ₹500 ಕೋಟಿಗಿಂತಲೂ ಅಧಿಕ ಕಪ್ಪುಹಣ ಪತ್ತೆಹಚ್ಚಿದೆ' ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ತಿಳಿಸಿದೆ.

ಚೆನ್ನೈ, ಕೊಯಮತ್ತೂರು ಹಾಗೂ ಮಧುರೈನ 40ಕ್ಕೂ ಹೆಚ್ಚು ಸ್ಥಳಗಳಲ್ಲಿ ಅಧಿಕಾರಿಗಳು ಜುಲೈ 6ರಂದು ಶೋಧ ನಡೆಸಿ, ದಾಖಲೆಗಳನ್ನು ಜಪ್ತಿ ಮಾಡಿದ್ದರು.

ಬೀಗ ತೆರವು ಕೋರಿ ಹೈಕೋರ್ಟ್‌ಗೆ ಮೊರೆ

ಚೆನ್ನೈ (ಪಿಟಿಐ): ಎಐಎಡಿಎಂಕೆ ಮುಖ್ಯ ಕಚೇರಿಗೆ ಬೀಗ ಹಾಕಿರುವುದನ್ನು ಪ್ರಶ್ನಿಸಿ ಪಕ್ಷದ ಮಧ್ಯಂತರ ಪ್ರಧಾನ ಕಾರ್ಯದರ್ಶಿ ಇ. ಪಳನಿಸ್ವಾಮಿ ಹಾಗೂ ಉಚ್ಚಾಟಿತ ನಾಯಕ ಒ. ಪನ್ನೀರಸೆಲ್ವಂ ಅವರು ಮಂಗಳವಾರ ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಪಕ್ಷದ ಕಚೇರಿಯಲ್ಲಿ ಸೋಮವಾರ ನಡೆದ ಹಿಂಸಾಚಾರದ ಕಾರಣಕ್ಕೆ ಕಂದಾಯ ಅಧಿಕಾರಿಗಳು ಕಚೇರಿಗೆ ಬೀಗ ಹಾಕಿದ್ದರು. ಈ ಅರ್ಜಿಗಳು ಬುಧವಾರ ವಿಚಾರಣೆಗೆ ಬರುವ ಸಾಧ್ಯತೆಯಿದೆ.

ಸೋಮವಾರ ನಡೆದ ಪಕ್ಷದ ಜನರಲ್ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಹಾಗೂ ಬದಲಾವಣೆಗಳ ಬಗ್ಗೆ ಪಕ್ಷದ ಹಂಗಾಮಿ ಪ್ರಧಾನ ಕಾರ್ಯದರ್ಶಿ ಪಳನಿಸ್ವಾಮಿ ಅವರು ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿದ್ದಾರೆ. ಆದರೆ, ಆಯೋಗಕ್ಕೆ ಪತ್ರ ಬರೆದಿರುವ ಪನ್ನೀರಸೆಲ್ವಂ, ಜನರಲ್ ಕೌನ್ಸಿಲ್ ಸಭೆಯಲ್ಲಿ ತೆಗೆದುಕೊಡ ತೀರ್ಮಾನಗಳು ಕಾನೂನುಬಾಹಿರ ಎಂದು ಪ್ರತಿಪಾದಿಸಿದ್ದಾರೆ.

ಪಕ್ಷಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ವಿಧಾನಸಭೆ ಸಚಿವಾಲಯಕ್ಕೆ ಪನ್ನೀರಸೆಲ್ವಂ ಮನವಿ ಸಲ್ಲಿಸಿದ್ದಾರೆ. ಪಳನಿಸ್ವಾಮಿ ಅವರು ಪ್ರತಿಪಕ್ಷದ ನಾಯಕರಾಗಿದ್ದು, ಪನ್ನೀರಸೆಲ್ವಂ ಅವರು ಉಪನಾಯಕರಾಗಿದ್ದಾರೆ. ತಾವು ಪಕ್ಷದ ಖಜಾಂಚಿಯಾಗಿದ್ದು, ತಮ್ಮ ಅನುಮತಿಯಿಲ್ಲದೇ ವಹಿವಾಟು ನಡೆಸಬಾರದು ಎಂದು ಪನ್ನೀರಸೆಲ್ವಂ ಅವರು ಬ್ಯಾಂಕ್‌ಗಳಿಗೆ ಸೂಚಿಸಿದ್ದಾರೆ. ದಿಂಡಿಗಲ್ ಸಿ. ಶ್ರೀನಿವಾಸನ್ ಅವರು ಪಕ್ಷದ ಹೊಸ ಖಜಾಂಚಿಯಾಗಿದ್ದಾರೆ ಎಂದು ಪಳನಿಸ್ವಾಮಿ ಅವರು ಬ್ಯಾಂಕ್‌ಗಳಿಗೆ ಮಾಹಿತಿ ನೀಡಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮನುಷ್ಯನ ಅಂತಃಕರಣದಲ್ಲಿ ಸಾತ್ವಿಕತೆಯ ಜ್ಯೋತಿಯನ್ನು ಜಾಗೃತಗೊಳಿಸುವುದು ಕರುಣೆ.

-ಕುವೆಂಪು

ಪರಿಸರ ಸಂರಕ್ಷಣೆ ಕಾಯ್ದೆ ಅಳ್ಳಕಗೊಳಿಸುವುದು ಬೇಡ

ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಮೂರು ಮಹತ್ವದ ಕಾಯ್ದೆಗಳಲ್ಲಿ ಶಿಕ್ಷೆಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ಕೈಬಿಡಲು ಕೇಂದ್ರ ಸರ್ಕಾರ ಮುಂದಾಗಿದ್ದು, ಇದರಿಂದ ಆ ಕಾಯ್ದೆಗಳೇ ದುರ್ಬಲಗೊಳ್ಳುವ ಆತಂಕ ಎದುರಾಗಿದೆ. ಕಾಯ್ದೆಗಳನ್ನು ಹೀಗೆ ಅಳ್ಳಕಗೊಳಿಸುವುದರಿಂದ ಪರಿಸರ ಸಂರಕ್ಷಣೆಯ ಮೂಲ ಉದ್ದೇಶವೇ ಈಡೇರದೆ ಹೋಗುತ್ತದೆ ಎಂಬ ಸಂಗತಿಯು ನೀತಿ ನಿರೂಪಕರ ತಲೆಗೆ ಹೋಗದಿರುವುದು ಆಶ್ಚರ್ಯ. ಪರಿಸರ ಸಂರಕ್ಷಣಾ ಕಾಯ್ದೆ–1986, ಜಲ ಮತ್ತು ವಾಯು ಕಾಯ್ದೆಗಳಿಂದ ಶಿಕ್ಷೆಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ತೆಗೆದುಹಾಕಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. ತಪ್ಪು ಎಸಗಿದರೂ ಶಿಕ್ಷೆಯೇ ಇಲ್ಲ ಎಂದಾದರೆ ಪರಿಸರಕ್ಕೆ ಹಾನಿ ಮಾಡಬಾರದು ಎಂಬ ಭೀತಿ ಅಂಥವರಲ್ಲಿ ಮೂಡುವುದಾದರೂ ಹೇಗೆ? ನಿಯಮಗಳ ಉಲ್ಲಂಘನೆ ಮಾಡಿದರೆ ಹಾಲಿ ಕಾಯ್ದೆಗಳ ಪ್ರಕಾರ ದಂಡ ಇಲ್ಲವೇ ಐದು ವರ್ಷ ಜೈಲು ಶಿಕ್ಷೆ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ. ಪದೇ ಪದೇ ಅದೇ ತಪ್ಪನ್ನು ಮಾಡಿದವರು ಇನ್ನೂ ದೊಡ್ಡ ಮೊತ್ತದ ದಂಡ ಹಾಗೂ ಅಧಿಕ ಅವಧಿಯ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಆದರೆ, ಈ ನಿಯಮಗಳಲ್ಲಿ ಬದಲಾವಣೆ ತರುವ ಪ್ರಸ್ತಾವವನ್ನು ಸರ್ಕಾರ ಈಗ ಮುಂದಿಟ್ಟಿದ್ದು, ಸಾರ್ವಜನಿಕರಿಂದ ಸಲಹೆಗಳನ್ನು ಸಹ ಆಹ್ವಾನಿಸಿದೆ. ಸಲಹೆ ಆಹ್ವಾನಿಸಲು ಸಿದ್ಧಪಡಿಸಿರುವ ಟಿಪ್ಪಣಿಯಲ್ಲಿ ಸದ್ಯದ ಕಠಿಣ ನಿಯಮಗಳ ಕುರಿತು ಸರ್ಕಾರವೇ ಆತಂಕ ವ್ಯಕ್ತಪಡಿಸಿದೆ. 'ಸಣ್ಣಪುಟ್ಟ ಉಲ್ಲಂಘನೆಗಳಿಗೆ ಜೈಲು ಶಿಕ್ಷೆಯ ಭಯವನ್ನು ಹೋಗಲಾಡಿಸಲು' ಕಾಯ್ದೆಗಳಲ್ಲಿ ಅಗತ್ಯ ಬದಲಾವಣೆ ತರಲು ಉದ್ದೇಶಿಸಲಾಗಿದೆ ಎಂದೂ ಅದು ತಿಳಿಸಿದೆ.



ಶಿಕ್ಷೆಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ಕೈಬಿಡಲು ಮುಂದಾಗಿರುವುದರಿಂದ ಕಾಯ್ದೆಗಳೇ ದುರ್ಬಲ ಆಗಲಿವೆ ಎನ್ನುವ ಆತಂಕ ಎದುರಾಗಿದೆ

ಕಾಯ್ದೆಗಳ ಸ್ವರೂಪದಲ್ಲಿ ಒಂದುವೇಳೆ ಏನಾದರೂ ಬದಲಾವಣೆಯಾದರೆ ಕೆಲವು ನಿಯಮಗಳ ಉಲ್ಲಂಘನೆಗೆ ಕೇವಲ ದಂಡವನ್ನು ವಿಧಿಸಲಾಗುತ್ತದೆಯೇ ವಿನಾ ಜೈಲು ಶಿಕ್ಷೆಯ ಭೀತಿ ಇರುವುದಿಲ್ಲ. ಆದರೆ, ಪರಿಸರ ನಿಯಮಗಳ ಉಲ್ಲಂಘನೆಯ ಪರಿಣಾಮವಾಗಿ ಸಾವು ಸಂಭವಿಸಿದರೆ ಇಲ್ಲವೇ ಗಂಭೀರವಾಗಿ ಗಾಯಗೊಂಡರೆ ಅಂತಹ ಅಪರಾಧಗಳಿಗೆ ಭಾರತೀಯ ದಂಡ ಸಂಹಿತೆಯ (ಐಪಿಸಿ) ಅಡಿಯಲ್ಲಿ ಜೈಲು ಶಿಕ್ಷೆ ವಿಧಿಸುವ ಅವಕಾಶ ಈಗಿನಂತೆಯೇ ಮುಂದುವರಿಯಲಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ತೀರ್ಪು ನೀಡುವ ಅಧಿಕಾರಿಯೇ ದಂಡದ ಪ್ರಮಾಣವನ್ನೂ ನಿರ್ಧರಿಸುತ್ತಾನೆ ಮತ್ತು ದಂಡದ ರೂಪದಲ್ಲಿ ಬಂದ ಮೊತ್ತ 'ಪರಿಸರ ಸಂರಕ್ಷಣಾ ನಿಧಿ'ಗೆ ಹೋಗುತ್ತದೆ. ಬಾಧಿತರಿಗೆ ಆ ನಿಧಿಯಿಂದಲೇ ಪರಿಹಾರವನ್ನು ನೀಡಲಾಗುತ್ತದೆ. ಅಲ್ಲದೆ, ದಂಡದ ಗರಿಷ್ಠ ಮಿತಿಯನ್ನು ₹ 5 ಕೋಟಿಗೆ ಏರಿಕೆ ಮಾಡಲು ಉದ್ದೇಶಿಸಲಾಗಿದೆ. ಒಂದುವೇಳೆ ಪರಿಸರಕ್ಕೆ ಉಂಟಾದ ಹಾನಿಯ ಪ್ರಮಾಣವು ದಂಡದ ಗರಿಷ್ಠ ಮಿತಿಗಿಂತಲೂ ಹೆಚ್ಚಾಗಿದ್ದರೆ ಹಾನಿಯಾದ ಪ್ರಮಾಣಕ್ಕೆ ಅನುಗುಣವಾಗಿಯೇ ದಂಡದ ಮೊತ್ತವನ್ನು ವಸೂಲಿ ಮಾಡಲು ಪ್ರಸ್ತಾವಿತ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಪರಿಸರ ಕಾಯ್ದೆಗಳ ಈ ಪ್ರಸ್ತಾವಿತ ತಿದ್ದುಪಡಿಗಳಲ್ಲಿ ಅಪರಾಧಗಳ ವರ್ಗೀಕರಣದ ಕುರಿತು ಯಾವುದೇ ವಿವರ ಇಲ್ಲ. ಆದರೆ, ಕೆಲವು ನಿಯಮಗಳ ಉಲ್ಲಂಘನೆಗೆ ಜೈಲು ಶಿಕ್ಷೆಯನ್ನೇ ಕೈಬಿಡುವುದರಿಂದ ಉಲ್ಲಂಘನೆಗಳ ಕುರಿತು ಹೆಚ್ಚು ಉದಾರವಾಗಿ ಮತ್ತು ಅಷ್ಟೇ ಸಹನೆಯಿಂದ ನಡೆದುಕೊಂಡಂತೆ ಆಗುತ್ತದೆ. 'ಪರಿಸರಕ್ಕೆ ಸಂಬಂಧಿಸಿದ ಈ ಕಾಯ್ದೆಗಳ ಅಡಿಯಲ್ಲಿ ದಾಖಲಾಗುವ ಮೊಕದ್ದಮೆಗಳಲ್ಲಿ ಜೈಲು ಶಿಕ್ಷೆಯಾಗುವ ಪ್ರಮಾಣ ತುಂಬಾ ಕಡಿಮೆ. ಹೀಗಾಗಿ ಶಿಕ್ಷೆಯ ಕೆಲವು ನಿಯಮಗಳನ್ನು ಕೈಬಿಡುವುದರಿಂದ ಒಟ್ಟಾರೆ ಅಂತಹ ವ್ಯತ್ಯಾಸವೇನೂ ಆಗುವುದಿಲ್ಲ' ಎಂದು ವಾದಿಸಲಾಗಿದೆ. ಆದರೆ, ಎಷ್ಟೋ ಉಲ್ಲಂಘನೆ ಪ್ರಕರಣಗಳನ್ನು ತಡೆಗಟ್ಟಲು ಜೈಲು ಶಿಕ್ಷೆಯ ಭೀತಿಯೊಂದೇ ಸಾಕು. ಆದ್ದರಿಂದಲೇ ಪರಿಸರ ಸಂರಕ್ಷಣೆಯ ವಿಚಾರದಲ್ಲಿ ಶಿಕ್ಷೆಗೆ ಅವಕಾಶ ಇರುವ ನಿಯಮಗಳಿಗೆ ವಿಶೇಷ ಮಹತ್ವ. ತಪ್ಪಿತಸ್ಥರಲ್ಲಿ ಹೆಚ್ಚಿನವರು ದಂಡವನ್ನು ಪಾವತಿಸಲು ಸಿದ್ಧರಾಗಿಯೇ ಇರುತ್ತಾರೆ. ದಂಡ ಪಾವತಿಸಿದರೆ ಆಯಿತು, ಏನು ಮಾಡಿದರೂ ನಡೆಯುತ್ತದೆ ಎಂಬ ಮನೋಭಾವ ಬೆಳೆಯುವ ಅಪಾಯವೂ ಇದರ ಹಿಂದಿದೆ. ಹಲವು ಪ್ರಕರಣಗಳಲ್ಲಿ ದಂಡವನ್ನು ವಸೂಲಿ ಮಾಡಿದ ಮಾತ್ರಕ್ಕೆ ಪರಿಸರ ಅನುಭವಿಸಿದ ಹಾನಿಯನ್ನು ಸರಿದೂಗಿಸಲು ಅಥವಾ ಸರಿಪಡಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ಪರಿಸರ ನಿಯಮಗಳನ್ನು ದೊಡ್ಡ ಸಂಸ್ಥೆಗಳು ಉಲ್ಲಂಘಿಸುವುದನ್ನು ದಂಡ ವಿಧಿಸುವುದರಿಂದ ಮಾತ್ರ ತಡೆಯಲು ಸಾಧ್ಯವಿಲ್ಲ. ಪರಿಸರಕ್ಕೆ ಸಂಬಂಧಿಸಿದ ಪ್ರಕರಣಗಳ ಕುರಿತು ನಿರ್ಧಾರ ಕೈಗೊಳ್ಳುವಲ್ಲಿ ಆಗುವ ವಿಳಂಬವು ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಪ್ರಸ್ತಾವಿತ ತಿದ್ದುಪಡಿಗಳು ಪರಿಸರದ ಸಂರಕ್ಷಣೆಯನ್ನು ಹೇಗೆ ಉತ್ತೇಜಿಸುತ್ತವೆ ಎಂಬ ಪ್ರಶ್ನೆ ಈಗ ಬಹಳ ಪ್ರಸ್ತುತವಾಗಿದೆ.

ಗಣಿ ಸಚಿವಾಲಯ ಮುಂದಿಟ್ಟಿರುವ ಪ್ರಸ್ತಾವ ಅತಿ ಮುಖ್ಯ ಹೆಜ್ಜೆ

ವಿರಳ ಭಸ್ಮಧಾತು: ಸುಧಾರಣೆಯ ಹಾದಿ



ವಿಶ್ಲೇಷಣೆ

ಡಾ. ಎಚ್‌.ಆರ್‌.ಕೃಷ್ಣಮೂರ್ತಿ

ವಿರಳ ಭಸ್ಮಧಾತುಗಳು (ರೇರ್ ಅರ್ತ್ ಎಲಿಮೆಂಟ್ಸ್), ಸಾರ್ವಜನಿಕರಿಗೆ ಅಷ್ಟಾಗಿ ಪರಿಚಯವಿರದ, ಆದರೆ ರಸಾಯನ ವಿಜ್ಞಾನದ ಆಸಕ್ತ ವಿದ್ಯಾರ್ಥಿಗಳಿಗೆ ತಿಳಿದಿರುವ 17 ಅತಿ ಅಮೂಲ್ಯ ಲೋಹೀಯ ಧಾತುಗಳು. ಆವರ್ತ ಕೋಷ್ಟಕದಲ್ಲಿ (ಪೀರಿಯಾಡಿಕ್ ಟೇಬಲ್) ಲ್ಯಾಂಥನಮ್‌ನಿಂದ ಲುಟೀಸಿಯಮ್ ವರೆಗಿನ 15 ಧಾತುಗಳು ಹಾಗೂ ಸ್ಕ್ಯಾಂಡಿಯಮ್ ಮತ್ತು ಯಿಟ್ರಿಯಮ್ ಸೇರಿದಂತೆ ಈ 17 ಧಾತುಗಳಿಗೆ ಸಂಬಂಧಿಸಿದಂತೆ ಅತಿ ಮಹತ್ವದ ಹೊಸ ನೀತಿಯ ಪ್ರಸ್ತಾವವೊಂದನ್ನು ಗಣಿ ಸಚಿವಾಲಯವು ಸಿದ್ಧಪಡಿಸಿದೆ. ಈ ಸಂಬಂಧ ಕೇಂದ್ರ ಸರ್ಕಾರ ನಿರ್ಧಾರ ಕೈಗೊಳ್ಳಬೇಕಿದೆ.

ದೇಶದ ರಕ್ಷಣಾ ವಲಯ, ಪರಮಾಣು ಶಕ್ತಿ, ಬಾಹ್ಯಾಕಾಶ, ಎಲೆಕ್ಟ್ರಾನಿಕ್ಸ್, ವೈದ್ಯಕೀಯ ಉಪಕರಣಗಳು, ಬ್ಯಾಟರಿಚಾಲಿತ ವಾಹನಗಳು, ಗಾಳಿಯಂತ್ರದ ಟರ್ಬೈನುಗಳು, ಸ್ವಚ್ಛಶಕ್ತಿ, ಮೊಬೈಲ್ ಫೋನ್, ಕಂಪ್ಯೂಟರ್ ಮುಂತಾದ ಕ್ಷೇತ್ರಗಳ ಅತ್ಯಾಧುನಿಕ ತಂತ್ರಜ್ಞಾನಗಳಲ್ಲಿ ನಿರ್ಣಾಯಕ ಪಾತ್ರ ವಹಿಸುವ ವಿರಳ ಭಸ್ಮಧಾತುಗಳಿಗೆ ಕಚ್ಚಾ ತೈಲದಷ್ಟೇ ಆರ್ಥಿಕ ಮಹತ್ವವಿದೆ. ಉದಾಹರಣೆಗೆ, ಬ್ಯಾಟರಿಚಾಲಿತ ವಾಹನಗಳು ಮತ್ತು ಟರ್ಬೈನುಗಳ ಉತ್ಪಾದನೆಯಲ್ಲಿ ನಿಯಡೀಮಿಯಮ್ ಬಹುಮುಖ್ಯವಾದ ಧಾತು. ಸದ್ಯದಲ್ಲಿ ನಿಯಡೀಮಿಯಮ್ ವಾರ್ಷಿಕ ಬೇಡಿಕೆ 900 ಟನ್‌ಗಳು ಮಾತ್ರ. ಆದರೆ ಮುಂಬರುವ ವರ್ಷಗಳಲ್ಲಿ ವಿದ್ಯುತ್ ವಾಹನಗಳು ಮತ್ತು ಗಾಳಿಯಂತ್ರಗಳ ಬಳಕೆ ಏರುವುದರಿಂದ 2025ರ ವೇಳೆಗೆ ನಿಯಡೀಮಿಯಮ್ ಬೇಡಿಕೆ 6,000 ಟನ್ ಆಗಲಿದ್ದು, 2030ರ ವೇಳೆಗೆ 20,000 ಟನ್ ಆಗಲಿದೆ. ಬಹುತೇಕ ಎಲ್ಲ ವಿರಳ ಭಸ್ಮಧಾತುಗಳ ಬೇಡಿಕೆಯೂ ಇದೇ ರೀತಿ ಹೆಚ್ಚಾಗಲಿದೆ.

ಪ್ರಪಂಚದ ವಿರಳ ಭಸ್ಮಧಾತುಗಳ ನಿಕ್ಷೇಪದ ಒಟ್ಟು ಪ್ರಮಾಣ 12.1 ಕೋಟಿ ಟನ್‌ಗಳು. ಇದರಲ್ಲಿ ಅತಿಹೆಚ್ಚಿನ ಅಂದರೆ 4.4 ಕೋಟಿ ಟನ್ ನಿಕ್ಷೇಪ ಚೀನಾದಲ್ಲಿದೆ. ಚೀನಾ, ಬ್ರೆಜಿಲ್, ರಷ್ಯಾ, ವಿಯೆಟ್ನಾಂ ನಂತರ ಐದನೆಯ ಸ್ಥಾನದಲ್ಲಿರುವ ಭಾರತದಲ್ಲಿ 69 ಲಕ್ಷ ಟನ್ ಲಭ್ಯತೆಯ ನಿಕ್ಷೇಪವಿದೆ. ಆದರೂ ವಿರಳ ಭಸ್ಮಧಾತುಗಳ ಪೂರೈಕೆಗೆ ನಾವು ಸಂಪೂರ್ಣವಾಗಿ ವಿದೇಶಗಳನ್ನು ಅವಲಂಬಿಸಿದ್ದೇವೆ. ಇದರಲ್ಲಿ ಅತ್ಯಧಿಕ ಭಾಗ ಬರುತ್ತಿರುವುದು ಚೀನಾದಿಂದ.

ಕಳೆದ ಕೆಲವು ವರ್ಷಗಳವರೆಗೆ ಜಗತ್ತಿನ ಶೇ 90ರಷ್ಟು ಬೇಡಿಕೆಯನ್ನು ಚೀನಾ ಪೂರೈಸುತ್ತಿತ್ತು. ಆದರೆ ಈ ಸಾಮರ್ಥ್ಯವನ್ನೇ ಪ್ರಬಲ ರಾಜಕೀಯ ಅಸ್ತ್ರವನ್ನಾಗಿ ಚೀನಾ ಬಳಸಿಕೊಳ್ಳಲು ಪ್ರಾರಂಭಿಸಿದ ನಂತರ ಅಮೆರಿಕ, ಕೆನಡಾ ಮತ್ತು ಆಸ್ಟ್ರೇಲಿಯಾ ಸತತ ಪ್ರಯತ್ನ ಮಾಡಿ ಈ ಅವಲಂಬನೆಯ ಪ್ರಮಾಣವನ್ನು ಕಡಿಮೆ ಮಾಡಿವೆ. ಆದರೂ ಜಾಗತಿಕ ಪೂರೈಕೆಯ ಶೇ 58 ಭಾಗ ಇನ್ನೂ ಚೀನಾದ ಭದ್ರ ಹಿಡಿತದಲ್ಲಿದೆ.

ನಮ್ಮ ದೇಶದಲ್ಲಿ ವಿರಳ ಭಸ್ಮಧಾತುಗಳ ನಿಕ್ಷೇಪ ವಿದ್ದರೂ ವಿದೇಶಗಳ ಮೇಲಿನ ನಮ್ಮ ಅವಲಂಬನೆಗೆ ಐದು ದಶಕಗಳಿಂದ ನಾವು ಅನುಸರಿಸಿಕೊಂಡು ಬಂದಿರುವ ನೀತಿಯೇ ಕಾರಣ ಎಂಬುದು ಪರಿಣತರ ಅಭಿಪ್ರಾಯ. ನಮ್ಮಲ್ಲಿ ವಿರಳ ಭಸ್ಮಧಾತುಗಳು ಮತ್ತು ವಿಕಿರಣಪಟು ಥೋರಿಯಮ್ ಧಾತುವಿನ ಮುಖ್ಯ ಮೂಲವೆಂದರೆ, ಸಾಗರತೀರದ ಮರಳಿನಲ್ಲಿರುವ ಮಾನಜೈಟ್ ಖನಿಜ. ಇದರಲ್ಲಿ ಅತಿ ಅಲ್ಪ ಪ್ರಮಾಣದಲ್ಲಿ ಯುರೇನಿಯಮ್ ಕೂಡ ಉಂಟು. ಥೋರಿಯಮ್ ಮತ್ತು ಯುರೇನಿಯಮ್ ಮುಖ್ಯವಾದ ನ್ಯೂಕ್ಲಿಯರ್ ಇಂಧನಗಳು. 1962ರ ಪರಮಾಣು ಶಕ್ತಿ ಅಧಿನಿಯಮದಂತೆ ಮಾನಜೈಟ್ ಖನಿಜದ ಸಂಪೂರ್ಣ ಒಡೆತನವಿರುವುದು ಭಾರತ ಸರ್ಕಾರದ ಪರಮಾಣು ಶಕ್ತಿ ಇಲಾಖೆಯಲ್ಲಿ. ಇದರಿಂದಾಗಿ ಎಲ್ಲ 17 ವಿರಳ ಭಸ್ಮಧಾತುಗಳೂ ಪರಮಾಣು ಖನಿಜಗಳ ಪಟ್ಟಿಗೇ ಸೇರುತ್ತವೆ. ಹೀಗಾಗಿ ಈ ಖನಿಜಗಳ ಅನ್ವೇಷಣೆ, ಗಣಿಗಾರಿಕೆ, ಸಂಸ್ಕರಣೆ, ಮೌಲ್ಯವರ್ಧನೆ, ಸಂಶೋಧನೆಯಂತಹ ಯಾವ ಚಟುವಟಿಕೆಯಲ್ಲೂ ಖಾಸಗಿ ಉದ್ಯಮಗಳಿಗೆ, ಕೈಗಾರಿಕಾ ಸಂಸ್ಥೆಗಳಿಗೆ ಅವಕಾಶವಿಲ್ಲ. ಅಷ್ಟೇಕೆ, ನಮ್ಮ ದೇಶದ ರಾಷ್ಟ್ರೀಯ ಪ್ರಯೋಗಾಲಯಗಳು, ಐಐಟಿಗಳು, ಡಿಆರ್‌ಡಿಒ, ಉನ್ನತ ಸಂಶೋಧನಾ ಸಂಸ್ಥೆಗಳಿಗೂ ಈ ಕ್ಷೇತ್ರದಲ್ಲಿರುವ ಸಹಭಾಗಿತ್ವದ ಅವಕಾಶಗಳು ಬಹು ಕಡಿಮೆ. ಇದು ನಮಗೆ ನಾವೇ ವಿಧಿಸಿಕೊಂಡ ನಿರ್ಬಂಧ. ನಮ್ಮ ಕೈಗಳನ್ನು ನಾವೇ ಕಟ್ಟಿಕೊಂಡ ಪರಿಸ್ಥಿತಿ.

ಪರಮಾಣು ಶಕ್ತಿ ಇಲಾಖೆಯ ಅಧೀನದಲ್ಲಿರುವ ಇಂಡಿಯನ್ ರೇರ್ ಅರ್ತ್ ಲಿಮಿಟೆಡ್ (ಐಆರ್‌ಇಎಲ್) ಮತ್ತು ಕೇರಳ ಸರ್ಕಾರದ ಉದ್ಯಮವಾದ ಕೇರಳ ಮಿನರಲ್ಸ್ ಆ್ಯಂಡ್ ಮೆಟಲ್ಸ್ ಲಿಮಿಟೆಡ್ ಸಂಸ್ಥೆಗೆ ಮಾತ್ರ ಮಾನಜೈಟ್ ಗಣಿಗಾರಿಕೆಯನ್ನು ನಡೆಸಲು ಅನುಮತಿ ಇದೆ. ಪ್ರಾಥಮಿಕ ಸಂಸ್ಕರಣೆಯಿಂದ ದೊರೆಯುವ ಆಕ್ಸೈಡ್ ರೂಪದ ಅದಿರನ್ನು ಮತ್ತಷ್ಟು ಸಂಸ್ಕರಿಸಿ, ಉನ್ನತೀಕರಿಸಿ, ಶುದ್ಧ ಧಾತುಗಳನ್ನು ಪಡೆಯುವುದು ಮುಂದಿನ ಜಟಿಲವಾದ, ದುಬಾರಿಯ, ಅಧಿಕ ಬಂಡವಾಳ ಬೇಕಿರುವ ಹಂತ. ತಾಂತ್ರಿಕವಾಗಿ ಇದು 'ಅಧಿಕ ವೆಚ್ಚ- ಅಧಿಕ ಪ್ರತಿಫಲ'ದ ಪ್ರಕ್ರಿಯೆ. ಆದರೆ ಐಆರ್‌ಇಎಲ್ ಇದನ್ನು ಮಾಡುವುದಿಲ್ಲ. ಅದರ ಬದಲಿಗೆ 'ಅಲ್ಪ ವೆಚ್ಚ- ಅಲ್ಪ ಪ್ರತಿಫಲ'ದ ದಾರಿಯನ್ನು ಹಿಡಿದು, ಕಡಿಮೆ ಮೌಲ್ಯದ ವಿರಳ ಭಸ್ಮಧಾತು ಅದಿರನ್ನು ಚೀನಾ, ಜಪಾನ್‌ಗೆ ಕಳುಹಿಸುತ್ತದೆ. ಅಲ್ಲಿಂದ ಶುದ್ಧರೂಪದ ಧಾತುಗಳನ್ನು ಆಮದು ಮಾಡಿಕೊಳ್ಳಲಾಗುತ್ತದೆ.

ವಿಚಿತ್ರವೆಂದರೆ, ಐಆರ್‌ಇಎಲ್ ಸಂಸ್ಥೆಯ ಆದಾಯದ ಹೆಚ್ಚಿನ ಭಾಗ ಬರುವುದು ವಿರಳ ಭಸ್ಮಧಾತುಗಳಿಂದ ಅಲ್ಲ. ಅದರ ಬದಲಿಗೆ, ಸಾಗರ ಕಿನಾರೆಯ ಮರಳಿನಲ್ಲಿ ಇರುವ ಇತರ ಧಾತುಗಳಾದ ಇಲ್ಮನೈಟ್, ಸಿಲ್ಲಿಮನೈಟ್, ಜಿಂಕ್ರಾನ್ ಗಣಿಗಾರಿಕೆಯಿಂದ. ಸಂಶೋಧನೆ, ಅಭಿವೃದ್ಧಿ, ಹೊಸತನ, ಹೊಸ ಸವಾಲುಗಳ ಒತ್ತಡವೇ ಇಲ್ಲದಂತಹ ಪರಿಸ್ಥಿತಿಯಲ್ಲಿ ಐಆರ್‌ಇಎಲ್‌ನಿಂದ ಹೆಚ್ಚಿನದನ್ನು ನಿರೀಕ್ಷಿಸುವುದು ಸಾಧ್ಯವಿಲ್ಲವೆಂಬುದು ಪರಿಣತರ ಅಭಿಪ್ರಾಯ. ಇಂತಹ ಸಂದರ್ಭದಲ್ಲೂ ವಿಶಾಖಪಟ್ಟಣದಲ್ಲಿ ರೇರ್ ಅರ್ತ್ ಪರ್ಮನೆಂಟ್ ಮ್ಯಾಗ್ನೆಟ್ ಉತ್ಪಾದನಾ ಸೌಲಭ್ಯ, ಒಡಿಶಾದಲ್ಲಿ ಮಾನಜೈಟ್ ಉತ್ಪಾದನಾ ಸ್ಥಾವರ, ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರದೊಡನೆ ಹೆಚ್ಚಿನ ಸಹಯೋಗ, ಗುಜರಾತ್‌ನಲ್ಲಿ ವಿರಳ ಭಸ್ಮಧಾತುಗಳ ಹೊಸ ನಿಕ್ಷೇಪದ ಪತ್ತೆಯಂತಹ ಬೆಳವಣಿಗೆಗಳಾಗಿವೆ. ಆದರೆ ವಿದೇಶಗಳ ಮೇಲಿನ ಅವಲಂಬನೆಗೆ ಕಾರಣವಾದ ಮೂಲ ಸಮಸ್ಯೆ ಹಾಗೆಯೇ ಉಳಿದಿದೆ.



ವಿರಳ ಭಸ್ಮಧಾತುಗಳನ್ನು ಸರ್ಕಾರದ ಏಕಸ್ವಾಮ್ಯದಿಂದ ಮುಕ್ತಗೊಳಿಸಿ, ಅವುಗಳ ಗಣಿಗಾರಿಕೆ, ಉತ್ಪಾದನೆಯಲ್ಲಿ ಖಾಸಗಿ ವಲಯದ, ಸಾರ್ವಜನಿಕ ರಂಗದ, ಪ್ರತಿಷ್ಠಿತ ಹಾಗೂ ಸಮರ್ಥ ಉನ್ನತ ಸಂಶೋಧನಾ ಸಂಸ್ಥೆಗಳ ಸಹಭಾಗಿತ್ವಕ್ಕೆ ಅವಕಾಶ ನೀಡಿದಲ್ಲಿ ಮಾತ್ರ, ಈ ಕ್ಷೇತ್ರದಲ್ಲಿ ಆರೋಗ್ಯಕರ ಬೆಳವಣಿಗೆ ಸಾಧ್ಯವೆಂಬುದು ತಜ್ಞರ ನಿಲುವು. ನೀತಿ ಆಯೋಗ ನೇಮಿಸಿದ್ದ ತಜ್ಞರ ಸಮಿತಿಯೂ ಈ ಅಂಶಗಳಿಗೆ ಒತ್ತು ನೀಡಿದೆ. ವಿರಳ ಭಸ್ಮಧಾತುಗಳನ್ನು ಪರಮಾಣು ಖನಿಜಗಳ ಪಟ್ಟಿಯಿಂದ ಹೊರ ತೆಗೆಯುವ ಪ್ರಸ್ತಾವವು ಕೇಂದ್ರ ಸರ್ಕಾರದ ಮುಂದಿದೆ. ಇದಕ್ಕೆ ಒಪ್ಪಿಗೆ ದೊರೆತರೆ, ಖಾಸಗಿ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಸಂಶೋಧನಾ ಪ್ರಯೋಗಾಲಯಗಳು ವಿರಳ ಭಸ್ಮಧಾತುಗಳ ಉತ್ಪಾದನೆಯ ಎಲ್ಲ ಹಂತಗಳಲ್ಲೂ ಭಾಗವಹಿಸುವ ಅವಕಾಶ ದೊರೆಯುತ್ತದೆ.

ಈ ಪ್ರಸ್ತಾವದ ಜೊತೆಗೇ ಈ ಕ್ಷೇತ್ರದಲ್ಲಿನ ತಜ್ಞರಿಂದ ಹಲವಾರು ಸಲಹೆಗಳೂ ಬಂದಿವೆ. ವಿಕಿರಣಪಟು ಥೋರಿಯಮ್ ಮತ್ತು ಯುರೇನಿಯಮ್ ನ್ಯೂಕ್ಲಿಯರ್ ಇಂಧನವಾದ್ದರಿಂದ ಅವುಗಳ ಗಣಿಗಾರಿಕೆ, ಸಂಸ್ಕರಣೆಯು ಪರಮಾಣು ಶಕ್ತಿ ಇಲಾಖೆಯ ಕಟ್ಟುನಿಟ್ಟಿನ ಸುಪರ್ದಿಯಲ್ಲೇ ಮುಂದುವರಿಯಬೇಕು. ವಿರಳ ಭಸ್ಮಧಾತುಗಳ ಉತ್ಪಾದನೆಯಲ್ಲಿ ಸಂಪೂರ್ಣ ಸ್ವಾವಲಂಬನೆಯನ್ನು ಸಾಧಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಳ್ಳಲು ಗಣಿ ಸಚಿವಾಲಯದ ಅಡಿಯಲ್ಲಿ ಪ್ರತ್ಯೇಕವಾದ ಇಲಾಖೆಯನ್ನು ಸ್ಥಾಪಿಸಬೇಕು. ಖಾಸಗಿ ಮತ್ತು ಸರ್ಕಾರಿ ವಲಯದ ಆಯ್ದ ಪ್ರತಿಷ್ಠಿತ ಸಂಸ್ಥೆಗಳಿಗೆ ವಿಶೇಷ ಬಂಡವಾಳ ಒದಗಿಸಿ, ಶುದ್ಧ ಸ್ವರೂಪದ ವಿರಳ ಭಸ್ಮಧಾತುಗಳನ್ನು ಉತ್ಪಾದಿಸಲು ಪ್ರೋತ್ಸಾಹಿಸಬೇಕು. ಈ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಅಮೆರಿಕ, ಆಸ್ಟ್ರೇಲಿಯಾ, ಜಪಾನ್ ಮತ್ತು ಕೆನಡಾದ ಕೈಗಾರಿಕಾ ಸಂಶೋಧನಾ ಸಂಸ್ಥೆಗಳ ಸಹಯೋಗವನ್ನು ಪಡೆಯಬೇಕು. 'ರೇರ್ ಅರ್ತ್ ರೆಗ್ಯುಲೇಟರಿ ಅಥಾರಿಟಿ' ರಚಿಸಬೇಕು ಇತ್ಯಾದಿ.

ವಿರಳ ಭಸ್ಮಧಾತುಗಳ ಪೂರೈಕೆ ಮೇಲೆ ಮನಸೋಇಚ್ಛೆಯ ನಿಯಂತ್ರಣ ಹೇರುವ ಮೂಲಕ, ಅವಲಂಬಿತ ದೇಶಗಳ ಕೈಗಾರಿಕಾ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಜಡಗೊಳಿಸಿ, ಭವಿಷ್ಯದ ತಂತ್ರಜ್ಞಾನದ ಬೆಳವಣಿಗೆಗಳನ್ನು ಕುಂಠಿತಗೊಳಿಸುವ ಕುಟಿಲ ತಂತ್ರಗಾರಿಕಾ ಮನೋಭಾವ ಕೆಲವು ದೇಶಗಳಿಗಿದೆ. ಆದರೆ ಅಂತಹ ತಂತ್ರಗಳಿಗೆ ಈಡಾಗದೆ, ವಿರಳ ಭಸ್ಮಧಾತುಗಳ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗುವ ಸಾಮರ್ಥ್ಯವನ್ನು ರೂಢಿಸಿಕೊಳ್ಳುವ ದಿಕ್ಕಿನಲ್ಲಿ ಗಣಿ ಸಚಿವಾಲಯ ಮುಂದಿಟ್ಟಿರುವ ಪ್ರಸ್ತಾವ ಅತಿ ಮುಖ್ಯ ಹೆಜ್ಜೆ.

ಚುರುಮುರಿ



ಬರ್ತ್‌ಡೇ ಉತ್ಸವ

• ಮಣ್ಣೆರಾಜು

'**ಕೈ ಕುಟುಂಬದ** ಬರ್ತ್‌ಡೇ ಉತ್ಸವಕ್ಕೆ ಅಕ್ಕಪಕ್ಕದ ಕಮಲಕ್ಕ, ತೆನೆ ಮನೆಯವರಿಗೆ ಇನ್ವಿಟೇಷನ್ ಕೊಡ್ತಾರಂತಾ?' ಸುಮಿ ಕೇಳಿದಳು.

'ಕೈ ಕುಟುಂಬದ ಕಲ್ಯಾಣಕ್ಕಾಗಿ ಮಾಡುತ್ತಿರುವ ಈ ಬರ್ತ್‌ಡೇ ಉತ್ಸವ ಪ್ಯೂರ್ಲಿ ಫ್ಯಾಮಿಲಿ ಫಂಕ್ಷನ್ ಅಂತೆ. ಹಾಗಾಗಿ ಅವರಿಗೆ ಆಹ್ವಾನ ನೀಡಲಾರರು' ಅಂದ ಶಂಕ್ರಿ.

'ಹಾಗಲ್ಲಾರೀ, ಕರೆದಿದ್ದರೆ ಕಮಲ, ತೆನೆ ಬಳಗದವರು ಬಂದು ಮುಯ್ಯಿ ಕೊಟ್ಟು, ಶೇಕ್ ಹ್ಯಾಂಡ್ ಮಾಡಿ, ಕೇಕ್ ತಿಂದು ಹೋಗ್ತಿದ್ರೇನೋ ಅಂತ...'

'ಕೈ ಕುಟುಂಬಸ್ಥರ ಬಗ್ಗೆ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿರುವವರನ್ನು ಕರೆದು ಔತಣ ನೀಡಲಾಗುತ್ತಾ? ಅವರು ಕಂಡೋರ ಮನೆ ಕಿಟಕಿ ಇಣುಕಿ ಮನೆ ಒಳಗಿನ ಹುಳುಕು ಹುಡುಕಿ ಡಂಗೂರ ಸಾರುತ್ತಾರಂತೆ. ಕೈ ಕುಟುಂಬಸ್ಥರಲ್ಲಿ ಗುಂಪುಗಾರಿಕೆ ಜಾಸ್ತಿ, ಒಬ್ಬರನ್ನು ಕಂಡರೆ ಇನ್ನೊಬ್ಬರಿಗೆ ಆಗುವುದಿಲ್ಲ ಅಂತ ಆಡಿಕೊಂಡು ನಗ್ತಿದ್ದಾರಂತೆ'.

'ಕೈ ಕುಟುಂಬದಲ್ಲಿ ದೊಡ್ಡ ಪ್ರಮಾಣದ ಬಿರುಕು ಇಲ್ಲವಂತೇರೀ, ಸಂಬಂಧದ ಸಣ್ಣ ಕೊಂಡಿ ಕಿತ್ತುಹೋಗಿತ್ತಂತೆ, ಕುಟುಂಬದ ಕುಲಪತಿಗಳು ವೆಲ್ಡ್ ಮಾಡಿ ಬಾಂಧವ್ಯ ಬೆಸೆದಿದ್ದಾರಂತೆ'.

'ಹೇಗೋ ಸರಿಮಾಡಿಕೊಳ್ತಾರೆ, ಕೈ ಮನೆ ಕಷ್ಟಸುಖ ಕಟ್ಟಿಕೊಂಡು ಕಮಲ, ತೆನೆಯವರಿಗೆ ಏನಾಗಬೇಕಿದೆ?'

'ಕೈ ಕುಟುಂಬಸ್ಥರ ಸಂಬಂಧದಲ್ಲಿ ಬಿರುಕು ಕಾಣಿಸಿಕೊಂಡಿದೆ, ಬಿಲ ಬಿದ್ದಿದೆ, ಯಾರನ್ನೋ ಓಲೈಸಲು, ಇನ್ನಾರನ್ನೋ ಸೈಡು ಮಾಡಲು ಸಿದ್ದರಾಮೋತ್ಸವ ಆಚರಿಸ್ತಾರೆ ಅಂತ ಅಪಪ್ರಚಾರ ಮಾಡ್ತಿದ್ದಾರಂತೆ'.

'ಆಡಿಕೊಳ್ಳೋರ ಬಾಯಿಗೆ ಬೀಳಬಾರದು ಎಂದು ಅಮೃತ ಮಹೋತ್ಸವ ಅಂತ ನೇಮ್ ಬೋರ್ಡ್ ಚೇಂಜ್ ಮಾಡಿದ್ದಾರಂತೆ... ಕಮಲ, ತೆನೆ ಕುಟುಂಬಗಳಲ್ಲಿ ಎಲ್ಲಾ ನೆಟ್ಟಗಿವೆಯಂತಾ? ಅವರ ಮನೆಯ ದೋಸೆಯಲ್ಲೂ ತೂತುಗಳಿಲ್ವೆ?'

'ನಮ್ಮನೆ ದೋಸೆ ತೂತು ಎಣಿಸಲು ನೆರೆಹೊರೆಯವರು ಕಾಯುತ್ತಿರುತ್ತಾರೆ. ಎಚ್ಚರಿಕೆಯಿಂದ ಇದ್ದು, ನಮ್ಮ ತಾಪತ್ರಯ ಸರಿಪಡಿಸಿಕೊಂಡು, 'ನೆರೆ' ಹಾವಳಿ ನಿಯಂತ್ರಿಸಿಕೊಂಡು ಬಾಳಿ ಅಂತ ಕೈ ಕುಲಪತಿಗಳು ಹೇಳಿದ್ದಾರಂತೆ ಕಣ್ರೀ...' ಅಂದಳು ಸುಮಿ.

ದಿನದ ಟ್ವೀಟ್

ಹೀಗಿರಲಿ ಬಸ್ ಸೇವೆ...



ಬಸ್ ಸೇವೆಯ ವಿಸ್ತರಣೆಗೆ ಬಂಡವಾಳ ಹೂಡಿಕೆ ಮತ್ತು ಬೆಳೆಯುತ್ತಿರುವ ಆರ್ಥಿಕತೆಯ ನಡುವೆ ಇರುವ ನಂಟನ್ನು ರಾಜ್ಯ ಸರ್ಕಾರಗಳು ಗಮನಿಸಬೇಕು. ಆರಾಮದಾಯಕ ಬಸ್‌ಗಳು, ಅವುಗಳ ನಿಖರ ವೇಳಾಪಟ್ಟಿ, ಕೈಗೆಟುಕುವ ದರ ಹಾಗೂ ಪ್ರಯಾಣದ ಪಾಸ್‌ಗಳು ಅಭಿವೃದ್ಧಿ ಹೊಂದುತ್ತಿರುವ ನಗರಗಳ ಬೆನ್ನೆಲುಬಾಗಿರುತ್ತವೆ. ಕ್ಯಾಬ್‌ಗಳು, ಆಟೊಗಳು ಉಪಸೇವೆಗಳಾಗಿ, ತುರ್ತು ಪ್ರಯಾಣದ ಆಯ್ಕೆಗಳಾಗಿ ಇರಬೇಕು.

ಜಿ.ಅನಂತಕೃಷ್ಣನ್, ಪತ್ರಕರ್ತ

ಕಿಡಿನುಡಿ



ಸಂಸತ್ತಿನ ನೂತನ ಕಟ್ಟಡದ ಮೇಲೆ ಸ್ಥಾಪಿಸಲಾಗಿರುವ ರಾಷ್ಟ್ರೀಯ ಲಾಂಛನದಲ್ಲಿ ಸಿಂಹಗಳು ಉಗ್ರವಾಗಿ ಕಾಣುತ್ತಿರುವುದೇಕೆ? ಸಾರನಾಥದಲ್ಲಿರುವ ಸಿಂಹದ ಮೂಲ ಶಿಲ್ಪವು ಧೈರ್ಯ, ವಿಶ್ವಾಸ ಮತ್ತು ಹೆಮ್ಮೆಯ ಪ್ರತೀಕವಾಗಿದೆಯೇ ವಿನಾ ಆಕ್ರಮಣಶೀಲವಾಗಿ ಅಲ್ಲ.

ರೆಜಿಮೋನ್ ಕುಟ್ಟಪ್ಪನ್, ಲೇಖಕ

25 ವರ್ಷಗಳ ಹಿಂದೆ

ಭಾನುವಾರ, 13-7-1997

• **ಗುಜ್ರಾಲ್ ಸರ್ಕಾರ: ಕಾಂಗ್ರೆಸ್ ಅತೃಪ್ತಿ**

ನವದೆಹಲಿ ಜುಲೈ 12 (ಪಿಟಿಐ)– ಇಂದ್ರಕುಮಾರ್ ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗ ಸರ್ಕಾರದ ಆಡಳಿತ ವೈಖರಿ ಕುರಿತು ಕಾಂಗ್ರೆಸ್ ಇದೇ ಪ್ರಥಮ ಬಾರಿಗೆ ಅತೃಪ್ತಿ ವ್ಯಕ್ತಪಡಿಸಿದೆ. ಆದರೂ ಗುಜ್ರಾಲ್ ಸರ್ಕಾರಕ್ಕೆ ಹೊರಗಿನಿಂದ ನೀಡುತ್ತಿರುವ ಬೆಂಬಲವನ್ನು ಈ ಕಾರಣಕ್ಕೆ ವಾಪಸ್ ಪಡೆಯುವುದಿಲ್ಲ ಎಂದು ಇಂದು ನಡೆಸಿದ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಕಾರ್ಯಕಾರಿ ಸಭೆಯನ್ನು ಇಂದು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷ ಸೀತಾರಾಂ ಕೇಸರಿ ಅವರು, ಗುಜ್ರಾಲ್ ನೇತೃತ್ವದ ಸರ್ಕಾರಕ್ಕೆ 'ದೌರ್ಬಲ್ಯ'ಗಳಿವೆ; ಆದರೂ ಬೆಂಬಲವನ್ನು ಕಾಂಗ್ರೆಸ್ ಮುಂದುವರಿಸುವುದು ಎಂದರು.

ಸಂಸತ್‌ನ ಮುಂಗಾರು ಅಧಿವೇಶನ ಪ್ರಾರಂಭವಾಗಲು ಇನ್ನು ಕೇವಲ 10 ದಿನಗಳಿರುವಾಗ ಕಾಂಗ್ರೆಸ್ ತನ್ನ ಅತೃಪ್ತಿ ವ್ಯಕ್ತಪಡಿಸಿರುವುದು ಮುಖ್ಯ ಬೆಳವಣಿಗೆಯಾಗಿದೆ.

• **ಆಲಮಟ್ಟಿ ಹಿನ್ನೀರು: ಸಜ್ಜಾಗಲು ಸೇನೆಗೆ ಸೂಚನೆ**

ವಿಜಾಪುರ, ಜುಲೈ 12– ಕಳೆದ ಎರಡು ವಾರಗಳಿಂದ ಒಂದೇ ಸಮನೆ ಏರುತ್ತಿರುವ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದಾಗಿ ಉಲ್ಬಣಿಸಬಹುದಾದ ತುರ್ತು ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿರುವಂತೆ ವಾಯುಸೇನೆ ಮತ್ತು ಭೂಸೇನೆಗೆ ಸೂಚನೆ ನೀಡಲಾಗಿದೆ. ಆಲಮಟ್ಟಿ, ಬೀಳಗಿ, ಬಾಗಲಕೋಟೆಗಳಲ್ಲಿ ಹೆಲಿಪ್ಯಾಡ್‌ಗಳನ್ನು ಸಿದ್ಧಪಡಿಸಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 13-7-1972

• **ಬೆಲೆಬಾಳುವ ಮರಗಳ ಕಳ್ಳಸಾಗಾಣಿಕೆ ವಿರುದ್ಧ ಬಿಗಿ ಕ್ರಮಕ್ಕೆ ಆಗ್ರಹ**

ಬೆಂಗಳೂರು, ಜುಲೈ 12– ಅರಣ್ಯಗಳಿಂದ ಗಂಧ ಮುಂತಾದ ಬೆಲೆಬಾಳುವ ಮರಗಳ ಕಳ್ಳಸಾಗಾಣಿಕೆ ನಡೆಯುತ್ತಿರುವುದನ್ನು ತಡೆಗಟ್ಟಲು ಬಿಗಿಯಾದ ಕ್ರಮ ಕೈಗೊಳ್ಳಬೇಕೆಂದು ವಿಧಾನಸಭೆಯಲ್ಲಿ ಇಂದು ಸದಸ್ಯರು ಒತ್ತಾಯಪಡಿಸಿದರು.

ಕೃಷಿ, ಅರಣ್ಯ, ಪಶುಸಂಗೋಪನೆ ಇಲಾಖೆಗಳಿಗೆ ಸಂಬಂಧಿಸಿದ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಲ್ಲಿ ಅನೇಕ ಮಂದಿ, ಮರಗಳ ಕಳ್ಳಸಾಗಾಣಿಕೆ ಭಾರಿ ಪ್ರಮಾಣದಲ್ಲಿ ನಡೆಯುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು.

• **ಖಾಸಗಿ ನರ್ಸಿಂಗ್ ಹೋಂ ವಿಧೇಯಕ**

ಬೆಂಗಳೂರು ಜುಲೈ 12– ಖಾಸಗಿ ನರ್ಸಿಂಗ್ ಹೋಂಗಳನ್ನು ಕೆಲ ನಿಯಮಗಳಿಗೆ ಒಳಪಡಿಸುವ ವಿಧೇಯಕವನ್ನು ಸರ್ಕಾರ ಸಿದ್ಧ ಮಾಡಿದೆ.

ಆರೋಗ್ಯ ಇಲಾಖೆಯ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಇಂದು ವಿಧಾನಸಭೆಯಲ್ಲಿ ಉತ್ತರ ನೀಡಿದ ಆರೋಗ್ಯ ಸಚಿವ ಶ್ರೀ ಎಚ್. ಸಿದ್ದವೀರಪ್ಪ ಅವರು, ಖಾಸಗಿ ನರ್ಸಿಂಗ್ ಹೋಂಗಳನ್ನು ಕೆಲಮಟ್ಟಿನ ಹತೋಟಿಗೆ ಒಳಪಡಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಸಂಗತ

ಶೇ10 ಮೀಸಲಾತಿ, ಶೇ90 ಪೂರ್ವಗ್ರಹ!

ಈ ಹೊಸ ಮೀಸಲಾತಿಯ ಬಗೆಗಿನ ವಸ್ತುಸ್ಥಿತಿ ಬೇರೆಯೇ ಇದೆ

• ವಾದಿರಾಜ್


'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಎಂಬ ಪುಸ್ತಕದಲ್ಲಿ ದೇವನೂರ ಮಹಾದೇವ ಅವರು ಕೇಂದ್ರ ಸರ್ಕಾರವು 2019ರಲ್ಲಿ ಜಾರಿಗೆ ತಂದ ಶೇಕಡ 10ರ ಹೊಸ ಮೀಸಲಾತಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಈ ಮೀಸಲಾತಿಯು 'ಸಂವಿಧಾನವನ್ನು ಸಂಹಾರ ಮಾಡುತ್ತದೆ, ಮನುಧರ್ಮವನ್ನು ಪ್ರತಿಷ್ಠಾಪಿಸುತ್ತದೆ. ಇದರಿಂದಾಗಿ ಮೀಸಲಾತಿಯ ಕಲ್ಪನೆಯಲ್ಲಿ ಇದ್ದ ನ್ಯಾಯ ನೆಗೆದುಬಿದ್ದಿದೆ. ಇದು ಸಂವಿಧಾನಕ್ಕೆ ಕೊಟ್ಟ ಒಳೇಟು. ಮನುಧರ್ಮಶಾಸ್ತ್ರದ ಆಶಯದಂತೆ ಇದನ್ನು ರೂಪಿಸಲಾಗಿದೆ' ಎಂಬುದು ಲೇಖಕರ ಆರೋಪ. ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಸೇರಿದಂತೆ ಅನೇಕರು ಈ ಮೇಲ್ವರ್ಗದ ಮೀಸಲಾತಿಯ ಬಗ್ಗೆ ಪದೇ ಪದೇ ತಕರಾರು ಎತ್ತುತ್ತಿದ್ದಾರೆ.

ಶೇಕಡ 2ರಷ್ಟೋ 3ರಷ್ಟೋ ಇರುವ ಬ್ರಾಹ್ಮಣ ಮತ್ತಿತರ ಜಾತಿಗಳಿಗ್ಯಾಕೆ ಶೇ 10ರಷ್ಟು ಮೀಸಲಾತಿ? ಯಾವ ಹೋರಾಟವೂ ಇಲ್ಲದೆ, ಅಧ್ಯಯನ ವರದಿಯೇ ಇಲ್ಲದೆ ಮೀಸಲಾತಿಯನ್ನು ಹೇಗೆ ನಿಗದಿಪಡಿಸಲಾಯಿತು ಎಂಬಂಥ ಪ್ರಶ್ನೆಗಳನ್ನು ಹಲವರು ಕೇಳುವುದಿದೆ. ಈ ಮೀಸಲಾತಿಯ ವಸ್ತುಸ್ಥಿತಿಯ ಅರಿವಿಲ್ಲದವರಿಗೆ ಇದು ಆರ್‌ಎಸ್‌ಎಸ್ ಕಲ್ಪನೆಯ ಕೂಸು ಎಂಬ ತಪ್ಪು ತಿಳಿವಳಿಕೆ ಇದೆ ಅಥವಾ ನಿಜದ ಅರಿವಿದ್ದೂ ದಿಕ್ಕು ತಪ್ಪಿಸಲು ಹೇಳುತ್ತಿರಬಹುದು. ಅದಕ್ಕಿಂತ ಹೆಚ್ಚಾಗಿ ಪೂರ್ವಗ್ರಹವೂ ತುಂಬಿಕೊಂಡಿದೆ.

ಎಸ್‌ಸಿ, ಎಸ್‌ಟಿ, ಒಬಿಸಿ ವ್ಯಾಪ್ತಿಗೆ ಬಾರದ ಜಾತಿ, ಸಮುದಾಯಗಳ ಬಡವರಿಗೆ ಈ ಮೀಸಲಾತಿ ಅನ್ವಯವಾಗುತ್ತದೆ. ಕರ್ನಾಟಕದಲ್ಲಿ ಇರುವಂತೆ ಒಬಿಸಿ ಪಟ್ಟಿಯಲ್ಲಿ ರೈತಾಪಿ ಸಮುದಾಯಗಳು, ಭೂಹಿಡುವಳಿ ಇರುವ ಜಾತಿಗಳು ದೇಶದ ಉಳಿದೆಡೆ ಇಲ್ಲ. ಮಂಡಲ್ ಆಯೋಗವೂ ರೈತಾಪಿ ಸಮುದಾಯಗಳನ್ನು ಒಬಿಸಿ ಪಟ್ಟಿಯಲ್ಲಿ ಸೇರಿಸಲು ಒಪ್ಪಿರಲಿಲ್ಲ. ಆಯೋಗದ ಸದಸ್ಯರಾಗಿದ್ದ ಕರ್ನಾಟಕದ ಎಲ್.ಆರ್.ನಾಯಕ್, ರೈತಾಪಿ ಸಮುದಾಯಗಳನ್ನು ಸೇರಿಸುವಂತೆ ವಾದಿಸಿದ್ದರೂ ಆಯೋಗ ಒಪ್ಪಿರಲಿಲ್ಲ. ಕರ್ನಾಟಕದಲ್ಲಿ ರೈತಾಪಿ ಸಮುದಾಯಗಳು ಒಬಿಸಿ ಪಟ್ಟಿಯಲ್ಲಿ ಸೇರಿರುವುದು ರಾಜಕೀಯ ಒತ್ತಡದಿಂದ. ವೆಂಕಟಸ್ವಾಮಿ ಆಯೋಗವಾಗಲೀ ಚಿನ್ನಪ್ಪ ರೆಡ್ಡಿ ಆಯೋಗವಾಗಲೀ ಇದಕ್ಕೆ ಸಮ್ಮತಿಸಿರಲಿಲ್ಲ. ಹೀಗಾಗಿ ಹೊಸ ಮೀಸಲಾತಿಗೆ ಕರ್ನಾಟಕದಲ್ಲಿ ಸಣ್ಣ ಜಾತಿಗಳೆನಿಸಿದ ಬ್ರಾಹ್ಮಣ, ವೈಶ್ಯ, ಕ್ಷತ್ರಿಯ ಬಿಟ್ಟರೆ ಬೇರೆ ಯಾರೂ ಇಲ್ಲದಂತಾಗಿದೆ. ಆದರೆ ಇದೇ ಪರಿಸ್ಥಿತಿ ದೇಶದ ಉಳಿದೆಡೆ ಇಲ್ಲ.

ಈ ಎರಡು ದಶಕಗಳಲ್ಲಿ ಗುಜರಾತ್, ಮಹಾರಾಷ್ಟ್ರ ಸೇರಿದಂತೆ ದೇಶದ ಹಲವೆಡೆ ಅಲ್ಲಲ್ಲಿನ ರೈತಾಪಿ ಸಮುದಾಯಗಳು ಒಬಿಸಿ ಮೀಸಲಾತಿಗಾಗಿ ದೊಡ್ಡ ಹೋರಾಟವನ್ನು ಮಾಡುತ್ತಿದ್ದವು. 2019ರಲ್ಲಿ ಕೇಂದ್ರ ಸರ್ಕಾರವು ಶೇ 10ರ ಮೀಸಲಾತಿ ಜಾರಿಗೆ ತಂದ ತರುವಾಯ ಈ ಹೋರಾಟಗಳು ತಣ್ಣಗಾಗಿರುವುದನ್ನು ಗಮನಿಸಬಹುದು.

ಹಾಗೆ ನೋಡಿದರೆ ಆರ್ಥಿಕವಾಗಿ ಹಿಂದುಳಿದವರಿಗೆ ಪ್ರತ್ಯೇಕ ಮೀಸಲಾತಿ ಕೊಡುವುದು ಕಾಂಗ್ರೆಸ್‌ನ ಕಾರ್ಯಸೂಚಿ. ವಿ.ಪಿ.ಸಿಂಗ್ ಪ್ರಧಾನಿಯಾಗಿದ್ದಾಗ ಮಂಡಲ್ ಆಯೋಗದ ಶಿಫಾರಸನ್ನು ಜಾರಿಗೆ ತಂದಾಗ, ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ರಾಜೀವ್ ಗಾಂಧಿ ಈ ವಿಷಯ ಪ್ರಸ್ತಾಪಿಸಿದ್ದರು. 1991ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರದ ಪ್ರಧಾನಿಯಾಗಿದ್ದ ನರಸಿಂಹ ರಾವ್, ಆರ್ಥಿಕವಾಗಿ ಹಿಂದುಳಿದವರಿಗೆ ಪ್ರತ್ಯೇಕ ಮೀಸಲಾತಿ ಕೊಡುವ ಕಾಯ್ದೆಯನ್ನು ಜಾರಿಗೆ ತಂದರು. ಆದರೆ ಸಂವಿಧಾನಕ್ಕೆ ಅಗತ್ಯ ತಿದ್ದುಪಡಿ ತಾರದೆ ಕಾಯ್ದೆ ಜಾರಿ ಮಾಡಿದ್ದರಿಂದ ನ್ಯಾಯಾಲಯದಲ್ಲಿ ಬಿದ್ದು ಹೋಯಿತು. 2006ರಲ್ಲಿ ಯುಪಿಎ ಸರ್ಕಾರದ ಪ್ರಧಾನಿ ಮನಮೋಹನ್ ಸಿಂಗ್ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ರೂಪಿಸಲು ಮೇಜರ್ ಜನರಲ್ ಎಸ್.ಆರ್.ಸಿನ್ಹೊ ನೇತೃತ್ವದಲ್ಲಿ ತ್ರಿಸದಸ್ಯ ಆಯೋಗ ರಚಿಸಿದರು. ಈ ಆಯೋಗ ದೇಶದಾದ್ಯಂತ ಅಧ್ಯಯನ ನಡೆಸಿ 2010ರಲ್ಲಿ ಸಲ್ಲಿಸಿದ ವರದಿಯಲ್ಲಿ, ಆರ್ಥಿಕವಾಗಿ ಹಿಂದುಳಿದವರಿಗೆ ಶೇ 15ರಷ್ಟು ಮೀಸಲಾತಿ ನೀಡಬೇಕೆಂದು ಶಿಫಾರಸು ಮಾಡಿತ್ತು. 2014ರ ಲೋಕಸಭಾ ಚುನಾವಣೆಯ ವೇಳೆ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ, ಅಧಿಕಾರಕ್ಕೆ ಬಂದರೆ ಸಿನ್ಹೊ ಶಿಫಾರಸನ್ನು ಜಾರಿಗೊಳಿಸುವ ಭರವಸೆ ಕೊಟ್ಟಿತ್ತು. ಈ ಪ್ರಣಾಳಿಕಾ ಸಮಿತಿಯ ನೇತೃತ್ವ ವಹಿಸಿದ್ದವರು ಕರ್ನಾಟಕದವರೇ ಆದ ವೀರಪ್ಪ ಮೊಯಿಲಿ.



2019ರ ಜನವರಿಯಲ್ಲಿ ಸಂಸತ್ತಿನ ಎರಡೂ ಸದನಗಳಲ್ಲಿ ಬಹುಮತದಿಂದ ಸಂವಿಧಾನದ 15 (6), 16 (6)ನೇ ವಿಧಿಗೆ ತಿದ್ದುಪಡಿ ತರುವ ಮೂಲಕ, ಹೊಸ ಮೀಸಲಾತಿ ತರಲಾಯಿತು. ಬಿಜೆಪಿಯವರು ಮಂಡಿಸಿದ ಈ ಪ್ರಸ್ತಾಪವನ್ನು ಸಂಸತ್ತಿನಲ್ಲಿ ಕಾಂಗ್ರೆಸ್ ಮಾತ್ರವಲ್ಲ, ಎಡಪಕ್ಷಗಳು, ದಲಿತರ ಧ್ವನಿಯೆಂದೇ ಪರಿಗಣಿಸಲಾಗುವ ಬಿಎಸ್‌ಪಿ ಸೇರಿದಂತೆ ಬಹುತೇಕ ಎಲ್ಲರೂ ಬೆಂಬಲಿಸಿದರು. ವಿರೋಧಿಸಿದ್ದು ಡಿಎಂಕೆ, ಅಸದುದ್ದೀನ್ ಒವೈಸಿ ಅವರ ಎಐಎಂಐಎಂ ಪಕ್ಷ ಮಾತ್ರ. ಕಾಂಗ್ರೆಸ್ ಆಡಳಿತವಿರುವ ರಾಜಸ್ಥಾನ, ಎಡಪಕ್ಷಗಳ ಆಡಳಿತವಿರುವ ಕೇರಳ, ತೃಣಮೂಲ ಕಾಂಗ್ರೆಸ್ ಆಡಳಿತವಿರುವ ಪಶ್ಚಿಮ ಬಂಗಾಳ ಸೇರಿದಂತೆ ಬಹುತೇಕ ಎಲ್ಲ ರಾಜ್ಯ ಸರ್ಕಾರಗಳು ಹೊಸ ಮೀಸಲಾತಿಯನ್ನು ಜಾರಿ ಮಾಡಿವೆ. ಇದು ವಸ್ತುಸ್ಥಿತಿ.

ಕರ್ನಾಟಕದಲ್ಲಿ ರೈತಾಪಿ ಸಮುದಾಯಗಳಿಗೆ ಒಬಿಸಿ ಮೀಸಲಾತಿಯನ್ನು ಕತ್ತರಿಸಿ ಕೊಡಲಾಗಿದೆ. ಆದರೆ ಕೇಂದ್ರ ಸರ್ಕಾರವು ಒಬಿಸಿ ಬುಟ್ಟಿಗೆ ಕೈಹಾಕದೆ ರೈತಾಪಿ ಸಮುದಾಯಗಳಿಗೆ ಪ್ರತ್ಯೇಕ ಮೀಸಲಾತಿ ಒದಗಿಸಿದೆ. ಇವೆರಡರಲ್ಲಿ ಯಾವುದು ಸಂವಿಧಾನದ ಆಶಯವನ್ನು ಎತ್ತಿ ಹಿಡಿಯುತ್ತದೆ ಎಂಬುದು ನಮಗೆ ನಾವೇ ಹಾಕಿಕೊಳ್ಳಬೇಕಾದ ಪ್ರಶ್ನೆ.

ಲೇಖಕ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ

ವಾಚಕರ ವಾಣಿ

ಅಂಕ: ಗೋಪ್ಯತೆಯ ಹಿಂದಿನ ಗುಟ್ಟೇನು?

ಜವಾಹರ್ ನವೋದಯ ವಿದ್ಯಾಲಯದ ಆರನೇ ತರಗತಿಗೆ ಪ್ರವೇಶ ಪಡೆಯಲು ಅರ್ಹರಾದ ವಿದ್ಯಾರ್ಥಿಗಳ ಆಯ್ಕೆ ಪಟ್ಟಿ ಇತ್ತೀಚೆಗೆ ಪ್ರಕಟವಾಗಿದೆ. ಇದನ್ನು, ಮಕ್ಕಳ ಪ್ರವೇಶ ಪರೀಕ್ಷೆ ಅಂಕಗಳ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ ಎಂದು ಇಲಾಖೆ ಹೇಳುತ್ತದೆ. ಆದರೆ ಮಕ್ಕಳು ತೆಗೆದುಕೊಂಡ ಅಂಕಗಳನ್ನು ನವೋದಯ ಶಾಲೆಯ ಇತಿಹಾಸದಲ್ಲಿ ಎಂದೂ ಬಹಿರಂಗಪಡಿಸಿಲ್ಲ. ಜೊತೆಗೆ ಪರೀಕ್ಷೆ ಬರೆದಾಗ ಒಎಂಆರ್ ಶೀಟಿನ ನಕಲನ್ನೂ ನೀಡಿರುವುದಿಲ್ಲ. ಒಂದು ಜಿಲ್ಲೆಯಲ್ಲಿ ಬರೆದ ಸಾವಿರಾರು ಮಕ್ಕಳಲ್ಲಿ ಎಪ್ಪತ್ತೊ ಎಂಬತ್ತೊ ಮಕ್ಕಳು ಆಯ್ಕೆಯಾಗುತ್ತಾರೆ. ಉಳಿದ ಮಕ್ಕಳಲ್ಲಿ 'ನಾವು ಚೆನ್ನಾಗಿಯೇ ಬರೆದಿದ್ದೆವು. ಆದರೂ ನಾವೇಕೆ ಆಯ್ಕೆಯಾಗಿಲ್ಲ' ಎಂಬ ಬೇಸರ ಹಾಗೂ ಗೊಂದಲ.

ಎರಡು ವರ್ಷಗಳಿಂದ ಕಠಿಣ ಪರಿಶ್ರಮದಿಂದ ಅಭ್ಯಾಸ ಮಾಡಿ ಪರೀಕ್ಷೆ ಬರೆದ ಮಕ್ಕಳಿಗೆ ಸೀಟು ಕೊಡದಿದ್ದರೂ ಪರವಾಗಿಲ್ಲ, ಕೊನೇಪಕ್ಷ ಆ ಮಗು ತೆಗೆದುಕೊಂಡ ಅಂಕ ಎಷ್ಟು ಎಂಬುದನ್ನಾದರೂ ತಿಳಿಸಿದರೆ, ತಾನೂ ಚೆನ್ನಾಗಿಯೇ ಅಂಕ ಪಡೆದಿದ್ದೇನೆ, ಆದರೆ ತನಗಿಂತ ಸ್ವಲ್ಪ ಜಾಸ್ತಿ ತೆಗೆದುಕೊಂಡವರು ಆಯ್ಕೆಯಾಗಿದ್ದಾರೆ ಎಂದು ಅದು ನಿಟ್ಟುಸಿರು ಬಿಡುತ್ತದೆ. ಜೊತೆಗೆ ಒಎಂಆರ್ ಶೀಟಿನ ನಕಲುಪ್ರತಿ ಕೊಟ್ಟರೆ ತಪ್ಪುಗಳ ಬಗ್ಗೆ ತಿಳಿದುಕೊಳ್ಳಲು, ತಿದ್ದಿಕೊಳ್ಳಲು ನೆರವಾಗುತ್ತದೆ.

ಪರೀಕ್ಷೆ ಹಾಗೂ ಮೌಲ್ಯಾಂಕನವನ್ನು ಗೋಪ್ಯವಾಗಿ ನಡೆಸಲಿ. ಆದರೆ ಫಲಿತಾಂಶದಲ್ಲಿ ಪಡೆದ ಅಂಕಗಳನ್ನು ಪ್ರಕಟ ಮಾಡದೆ ಗೋಪ್ಯವಾಗಿ ಇಡುವುದರ ಔಚಿತ್ಯವೇನು? ಇದೇನು ರಕ್ಷಣಾ ಇಲಾಖೆಗೆ ಸಂಬಂಧಿಸಿದ ಮಾಹಿತಿಯೇ?

ಸುರಹೊನ್ನೆ ಅರವಿಂದ, ನ್ಯಾಮತಿ

ಶ್ರೀಲಂಕಾ: ನೆನಪಿನಲ್ಲಿ ಇರಬೇಕಾದ ಪಾಠ

ಶ್ರೀಲಂಕಾ ಬೇರೆ ಬೇರೆ ನೆಲೆಯಲ್ಲಿ ತೀವ್ರ ಬಿಕ್ಕಟ್ಟು ಎದುರಿಸುತ್ತಿದ್ದು ಅರಾಜಕತೆಯತ್ತ ಸಾಗುತ್ತಿದೆ. ಮಿತಿಮೀರಿದ ವಿದೇಶಿ ಸಾಲ, ಭ್ರಷ್ಟಾಚಾರ, ಸ್ವಜನಪಕ್ಷಪಾತದಿಂದಾಗಿ ಅಗತ್ಯ ವಸ್ತುಗಳ ಕೊರತೆ ಉಂಟಾಗಿದೆ, ಬೆಲೆ ಗಗನಕ್ಕೇರಿದೆ. ಇದರಿಂದ ತತ್ತರಿಸಿರುವ ಜನಸಾಮಾನ್ಯರು ಬೀದಿಗಿಳಿದಿದ್ದಾರೆ. ಈ ಸಂದರ್ಭದಲ್ಲಿ ದ್ವೀಪರಾಷ್ಟ್ರಕ್ಕೆ ಎಲ್ಲ ದೇಶಗಳ ಸಹಕಾರದ ಅಗತ್ಯವಿದೆ. ಭಾರತವು ಶ್ರೀಲಂಕಾಕ್ಕೆ ಸೈನ್ಯದ ನೆರವು ನೀಡುವುದಕ್ಕೆ ಸಂಬಂಧಿಸಿದ ವರದಿಗಳನ್ನು ಅಲ್ಲಿನ ಭಾರತೀಯ ಹೈಕಮಿಷನ್ ಅಲ್ಲಗಳೆದಿದೆ. ಅದೇನೇ ಇರಲಿ, ಯಾವುದೇ ಕಾರಣಕ್ಕೂ ಭಾರತವು ಶ್ರೀಲಂಕಾಕ್ಕೆ ಸೈನ್ಯವನ್ನು ಕಳುಹಿಸಬಾರದು.

ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿದ್ದಾಗ ಶ್ರೀಲಂಕಾದ ತಮಿಳರು ಮತ್ತು ಅಲ್ಲಿನ ಸರ್ಕಾರದ ನಡುವೆ ಘರ್ಷಣೆ ನಡೆಯುತ್ತಿದ್ದ ಸಂದರ್ಭದಲ್ಲಿ ಭಾರತವು ಶಾಂತಿಪಡೆಯ ಹೆಸರಿನಲ್ಲಿ ಸೈನ್ಯವನ್ನು ಕಳುಹಿಸಿತ್ತು. ದಿನಗಳೆದಂತೆ ಭಾರತೀಯ ಸೈನ್ಯ ಮತ್ತು ತಮಿಳು ಸಂಘಟನೆಗಳ ನಡುವೆ ಘರ್ಷಣೆ ಪ್ರಾರಂಭವಾಗಿ ಎರಡೂ ಕಡೆ ಸಾವುನೋವುಗಳಾಗಿ, ಅದು ರಾಜೀವ್ ಗಾಂಧಿ ಅವರ ಹತ್ಯೆಗೆ ಕಾರಣವಾದದ್ದು ಈಗ ಇತಿಹಾಸ. ಈ ಇತಿಹಾಸ ನಮಗೆ ಎಂದೆಂದೂ ನೆನಪಿನಲ್ಲಿ ಇರಬೇಕಾದ ಪಾಠ.

ಈ. ಬಸವರಾಜು, ಬೆಂಗಳೂರು

ಅಜ್ಞಾನಜನ್ಯ ಭಯದಿಂದ ಹೊರಬರೋಣ

'ಇಂಗ್ಲಿಷ್ ಮಾಧ್ಯಮ: ವಿರೋಧ ಸಲ್ಲ' ಎಂಬ ಎಂ.ಶ್ರೀಧರ ರಾವ್ ಅವರ ಅಭಿಪ್ರಾಯವು (ವಾ.ವಾ., ಜುಲೈ 12) ಆಶ್ಚರ್ಯಕರ ಹಾಗೂ ಆತಂಕಕಾರಿ. ಇಂಗ್ಲಿಷ್ ಮಾಧ್ಯಮದಲ್ಲಿ ಓದಿದವರೆಲ್ಲ ಶಶಿ ತರೂರ್ ಅವರ ಹಾಗೆ ವಾಕ್ಪಟುಗಳಾಗಿ ಬಿಡುತ್ತಾರೆಯೇ? ಅಂತೆಯೇ ಉತ್ತರಪ್ರದೇಶ ಹಾಗೂ ಬಿಹಾರದಿಂದ ವಲಸೆ ಬರುವವರು ಸಾಮಾನ್ಯವಾಗಿ ನಗರ ಪ್ರದೇಶಗಳಿಗೆ ಬರುತ್ತಾರೆ. ಅಂತಹ ಕಡೆಗಳಲ್ಲಿ ಇಂಗ್ಲಿಷ್ ಮಾಧ್ಯಮ ಶಾಲೆಗಳು ಇದ್ದೇ ಇರುತ್ತವೆ. ಉಪ ರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಇಂಗ್ಲಿಷ್ ಮಾಧ್ಯಮ ಅನಗತ್ಯ ಎಂದು ಹೇಳಿಕೆ ನೀಡಿದ ಮಾತ್ರಕ್ಕೆ ಎಲ್ಲ ಇಂಗ್ಲಿಷ್ ಮಾಧ್ಯಮ ಶಾಲೆಗಳನ್ನೂ ಮುಚ್ಚಿಬಿಡುತ್ತಾರೆ ಎಂದು ಶ್ರೀಧರ ರಾವ್ ಅವರು ನಿರಾಶರಾಗುವುದು ಅನಗತ್ಯ. ಆದ್ದರಿಂದ ನಾಯ್ಡು ಅವರ ಸಮುಚಿತವಾದ ಹೇಳಿಕೆಯನ್ನು ತುಂಬು ಹೃದಯದಿಂದ ಸ್ವಾಗತಿಸೋಣ.

ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿ ಮಾತೃಭಾಷೆ ಅಥವಾ ಪರಿಸರ ಭಾಷೆಯ ಮಾಧ್ಯಮದಲ್ಲಿ ಇರಬೇಕು ಎಂಬುದು ಜಗತ್ತಿನ ಎಲ್ಲ ಶಿಕ್ಷಣ ತಜ್ಞರ ಅಭಿಪ್ರಾಯ. ಇಂತಹ ಅರ್ಥಹೀನ ಆತಂಕಗಳ ನಿವಾರಣೆಗಾಗಿ ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸದೇ ಇರುವುದು ಎಷ್ಟು ಸರಿ? ಇಲ್ಲಿ, ವಲಸಿಗರ ಮೇಲಿನ ಪ್ರೀತಿ ಹಾಗೂ ಅಸಾಮಾನ್ಯ ಪ್ರತಿಭಾಶಾಲಿಗಳ ಮೇಲಿನ ಕಾಳಜಿಗಿಂತ ಇಂಗ್ಲಿಷ್ ಮಾಧ್ಯಮ ಶಿಕ್ಷಣದ ಬಗೆಗಿನ ಭ್ರಮೆ ಮತ್ತು ವ್ಯಾಮೋಹವೇ ಢಾಳಾಗಿ ಕಂಡುಬರುತ್ತದೆ!

ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತಗಳಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ಬಹುಮಂದಿ ಇಂದು ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳ್ಳೆಯ ಸಾಧನೆ ಮಾಡಿ ತಮ್ಮ ಬದುಕನ್ನು ಅತ್ಯುತ್ತಮವಾಗಿ ರೂಪಿಸಿಕೊಂಡಿದ್ದಾರೆ ಎಂಬುದು ಇಂತಹ ಅನೇಕರಿಗೆ ಗೊತ್ತಿದ್ದರೂ ಇಂಗ್ಲಿಷ್ ಮಾಧ್ಯಮದ ಮೇಲಿನ ವ್ಯಾಮೋಹದಿಂದ ಮುಕ್ತರಾಗಲು ಸಾಧ್ಯವಾಗದೇ ಇರುವುದು ಅಜ್ಞಾನಜನ್ಯವಾದ ಭಯವೇ ವಿನಾ ಬೇರೇನೂ ಅಲ್ಲ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಒಂದು ಕಣ್ಣಿಗೆ ಬೆಣ್ಣೆ...

ಈ ಹಿಂದೆ, ರಾಜ್ಯಸಭಾ ಚುನಾವಣೆ ವೇಳೆ ಗುಜರಾತಿನ ಕಾಂಗ್ರೆಸ್ ಶಾಸಕರಿಗೆ ಬೆಂಗಳೂರು ಹೊರವಲಯದ ರೆಸಾರ್ಟ್‌ವೊಂದರಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆಗ ಜಾರಿ ನಿರ್ದೇಶನಾಲಯವು (ಇ.ಡಿ) ರೆಸಾರ್ಟ್ ಮೇಲೆ ದಾಳಿ ನಡೆಸಿತ್ತು. ಮೊನ್ನೆ ಮೊನ್ನೆ ಮಹಾರಾಷ್ಟ್ರದ ಬಂಡಾಯ ಶಾಸಕರು ಗುಜರಾತ್, ಅಸ್ಸಾಂ ಮತ್ತು ಗೋವಾದಲ್ಲಿ ಐಷಾರಾಮಿ ಹೋಟೆಲ್, ರೆಸಾರ್ಟ್‌ಗಳಲ್ಲಿ ವಾಸ್ತವ್ಯ ಹೂಡಿದ್ದರು. ಇದು, ಜಾರಿ ನಿರ್ದೇಶನಾಲಯದ ಗಮನಕ್ಕೆ ಬರಲೇ ಇಲ್ಲ! 'ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ! ಬಹುಶಃ ಕೇಂದ್ರ ಸರ್ಕಾರದ ಮೌಖಿಕ ಆದೇಶದ ಮೇರೆಗೆ ವಿರೋಧ ಪಕ್ಷದವರ ಮೇಲೆ ಮಾತ್ರ ದಾಳಿ? ಹೇಗಿದೆ ನೋಡಿ ಇ.ಡಿ ಕಾರ್ಯವೈಖರಿ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎಐಎಡಿಎಂಕೆ ಸತತ ಬಿಕ್ಕಟ್ಟಿನ ಅರ್ಧ ಶತಮಾನ

ತಮಿಳುನಾಡಿನ ಈಗಿನ ವಿರೋಧ ಪಕ್ಷ ಎಐಎಡಿಎಂಕೆಯು ಇದೇ ಜೂನ್‌ಗೆ 50 ವರ್ಷಕ್ಕೆ ಕಾಲಿರಿಸಿದೆ. ಪಕ್ಷ ಸಂಸ್ಥಾಪನೆಯ ಚಿನ್ನದ ಹಬ್ಬ ಆಚರಿಸಬೇಕಿದ್ದ ಎಐಎಡಿಎಂಕೆಯ ನಾಯಕರು, ಪಕ್ಷದ ನಾಯಕತ್ವಕ್ಕಾಗಿ ಹಾದಿಜಗಳ–ಬೀದಿಜಗಳ ನಡೆಸುತ್ತಿದ್ದಾರೆ. ಜೆ.ಜಯಲಲಿತಾ ಅವರ ಮರಣದ ನಂತರ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ಅಮಾನತಿನಲ್ಲಿ ಇರಿಸಲಾಗಿತ್ತು. ಪಕ್ಷವು ದ್ವಿನಾಯಕತ್ವ ಮಾದರಿಯನ್ನು ಅಳವಡಿಸಿಕೊಂಡಿತ್ತು. ಆ ಮಾದರಿಯ ಪ್ರಕಾರ ಒ.ಪನ್ನೀರಸೆಲ್ವಂ ಮತ್ತು ಇ.ಪಳನಿಸ್ವಾಮಿ ಪಕ್ಷದ ನಾಯಕರಾಗಿದ್ದರು. ಆದರೆ, ಪಕ್ಷಕ್ಕೆ ಏಕ ನಾಯಕತ್ವವಿರಬೇಕು ಎಂಬ ಬೇಡಿಕೆ ತೀವ್ರವಾಗಿತ್ತು. ಅದರ ಬೆನ್ನಲ್ಲೇ ಪಳನಿಸ್ವಾಮಿ ಅವರನ್ನು ಪಕ್ಷದ ನಾಯಕನಾಗಿ ನೇಮಕ ಮಾಡಲಾಗಿದೆ ಮತ್ತು ಪನ್ನೀರಸೆಲ್ವಂ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. 50 ವರ್ಷಗಳ ಇತಿಹಾಸದಲ್ಲಿ ಪಕ್ಷವು ಈ ಸ್ವರೂಪದ ಬಿಕ್ಕಟ್ಟನ್ನು, ಬಣರಾಜಕಾರಣವನ್ನು ಮತ್ತು ವಿಭಜನೆಯನ್ನು ಹಲವು ಬಾರಿ ಎದುರಿಸಿದೆ. ಈಗ ಅಂಥದ್ದೇ ಮತ್ತೊಂದು ಬಿಕ್ಕಟ್ಟು ಸೃಷ್ಟಿಯಾಗಿದೆ

ವಿಭಜನೆಯಿಂದಲೇ ಸ್ಥಾಪನೆ

ಡಿಎಂಕೆಯಲ್ಲಿ ಪ್ರಮುಖ ನಾಯಕರಾಗಿದ್ದ ಎಂ.ಜಿ.ರಾಮಚಂದ್ರನ್ (ಎಂಜಿಆರ್) ಮತ್ತು ಎಂ.ಕರುಣಾನಿಧಿ ನಡುವೆ ನಾಯಕತ್ವಕ್ಕಾಗಿ ಪೈಪೋಟಿ ಇತ್ತು. ಎಂ.ಕರುಣಾನಿಧಿ ಅವರ ಬಣವು ಪ್ರಬಲವಾಗಿದ್ದ ಕಾರಣ, ಎಂಜಿಆರ್ ಪಕ್ಷವನ್ನು ತೊರೆದರು. 1972ರಲ್ಲಿ ಎಐಎಡಿಎಂಕೆಯನ್ನು ಸ್ಥಾಪಿಸಿದರು. ಎಂಜಿಆರ್ ಜತೆಗೆ ಅವರ ಅನುಯಾಯಿಗಳು ಮತ್ತು ಬೆಂಬಲಿಗರು ಡಿಎಂಕೆಯನ್ನು ತೊರೆದು ಬಂದಿದ್ದರಿಂದ, ಎಐಎಡಿಎಂಕೆಯು ಆರಂಭದ ದಿನಗಳಲ್ಲಿಯೇ ಪ್ರಮುಖ ಪಕ್ಷವಾಗಿ ರೂಪುಗೊಂಡಿತು. 1977ರ ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆ ಅಧಿಕಾರಕ್ಕೆ ಬಂದಿತು ಮತ್ತು ಎಂಜಿಆರ್ ಮುಖ್ಯಮಂತ್ರಿಯಾದರು. 1987ರಲ್ಲಿ ನಿಧನರಾಗುವವರೆಗೂ ಎಂಜಿಆರ್ ಅವರೇ ಮುಖ್ಯಮಂತ್ರಿಯಾಗಿದ್ದರು. ಸಿನಿಮಾಗಳಲ್ಲಿ ತಮ್ಮ ಜನಪ್ರಿಯ ಜೋಡಿಯಾಗಿ ನಟಿಸಿದ್ದ ತಾರೆ ಜಯಲಲಿತಾ ಅವರನ್ನು ಎಂಜಿಆರ್ ರಾಜಕಾರಣದಲ್ಲಿ ಬೆಳೆಸಿದ್ದರು. 1983ರಲ್ಲಿ ಜಯಲಲಿತಾ ಅವರನ್ನು ಪಕ್ಷದ ಪ್ರಚಾರ ಕಾರ್ಯದರ್ಶಿಯಾಗಿ ನೇಮಕ ಮಾಡಿದರು. ಅಲ್ಲಿಯವರೆಗೆ ಎಂಜಿಆರ್ ನಂತರದ ಸ್ಥಾನದಲ್ಲಿ ಇದ್ದ ಬೇರೆಲ್ಲಾ ನಾಯಕರನ್ನು ಹಿಂದಿಕ್ಕಿ, ಜಯಲಲಿತಾ ಅವರು ಪಕ್ಷದಲ್ಲಿ ಹಿಡಿತ ಸಾಧಿಸಿದರು. ಎಂಜಿಆರ್ ನಿಧನಾನಂತರ, ಇದು ಜಯಲಲಿತಾ ಅವರಿಗೆ ಮುಳುವಾಯಿತು. ಆದರೆ ಅದು ಕೆಲಕಾಲದವರೆಗೆ ಮಾತ್ರ.



ಜಯಲಲಿತಾ–ಜಾನಕಿ ಬಣ

1987ರಲ್ಲಿ ಎಂಜಿಆರ್ ನಿಧನದ ನಂತರ, ಅವರ ಪತ್ನಿ ಜಾನಕಿ ಅವರು ಪಕ್ಷದ ನಾಯಕತ್ವ ತಮ್ಮದು ಎಂದು ಪ್ರತಿಪಾದಿಸಿದರು. ಅಲ್ಲಿಯವರೆಗೆ ಪಕ್ಷದ ಪ್ರಮುಖ ಮತ್ತು ಪ್ರಬಲ ನಾಯಕಿಯಾಗಿದ್ದ ಜಯಲಲಿತಾ ಅವರಿಗೆ ಅಗತ್ಯ ಬೆಂಬಲ ಸಿಗದೇ ಹೋಯಿತು. ಎಂಜಿಆರ್ ಅವರ ಆಪ್ತವಲಯದಲ್ಲಿ ಇದ್ದಾಗ ಜಯಲಲಿತಾ ಅವರ ರಾಜಕೀಯ ಬೆಳವಣಿಗೆ ಬಗ್ಗೆ ಅಸಮಾಧಾನಗೊಂಡಿದ್ದ ನಾಯಕರೆಲ್ಲರೂ, ಎಂಜಿಆರ್ ನಿಧನದ ನಂತರ ಜಾನಕಿ ಅವರನ್ನು ಬೆಂಬಲಿಸಿದರು. ಹೀಗಾಗಿ 1987ರಲ್ಲಿ ಜಾನಕಿ ಅವರು ಎಐಎಡಿಎಂಕೆ ನಾಯಕಿಯಾದರು ಮತ್ತು ತಮಿಳುನಾಡಿನ ಮುಖ್ಯಮಂತ್ರಿಯೂ ಆದರು.

ಜಯಲಲಿತಾ ಅವರನ್ನು ಬೆಂಬಲಿಸಿದ್ದ ನಾಯಕರದ್ದೇ ಮತ್ತೊಂದು ಬಣ ರೂಪುಗೊಂಡಿತು. ಆದರೆ 1988ರಲ್ಲಿ ಜಾನಕಿ ರಾಜಕೀಯವನ್ನು ತೊರೆದರು. ಜಾನಕಿ ಬಣದಲ್ಲಿ ಗುರುತಿಸಿಕೊಂಡಿದ್ದ ಎಐಎಡಿಎಂಕೆ ನಾಯಕರು ಮತ್ತು ಶಾಸಕರು ಜಯಲಲಿತಾ ಬಣ ಸೇರಿದರು. ಎರಡೂ ಬಣಗಳು ವಿಲೀನವಾದ ಕಾರಣ, ಪಕ್ಷವು ಮೊದಲಿನಂತೆ ಪ್ರಬಲವಾಯಿತು. 1989ರಲ್ಲಿ ಜಯಲಲಿತಾ ಎಐಎಡಿಎಂಕೆಯಿಂದ ವಿಧಾನಸಭೆಗೆ ಆರಿಸಿಬಂದರು. ವಿರೋಧ ಪಕ್ಷದ ನಾಯಕಿಯಾಗಿ ಕಾರ್ಯನಿರ್ವಹಿಸಿದ ಜಯಲಲಿತಾ ಅವರು 1991ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತಂದರು. ಮುಖ್ಯಮಂತ್ರಿ ಆದರು.



ಶಶಿಕಲಾ–ದಿನಕರನ್

ತಮಿಳುನಾಡು ರಾಜಕಾರಣದಲ್ಲಿ ಚಿನ್ನಮ್ಮ ಎಂದೇ ಪರಿಚಿತರಾದ ವಿ.ಕೆ.ಶಶಿಕಲಾ ಸಹ ಎಐಎಡಿಎಂಕೆಯ ಬಿಕ್ಕಟ್ಟಿಗೆ ಕಾರಣರಾಗಿದ್ದರು. 1980ರಿಂದ ಜಯಲಲಿತಾ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಶಶಿಕಲಾ ಅವರು, 1991ರ ನಂತರ ಜಯಲಲಿತಾ ಅವರ ಮನೆಯ ನಿವಾಸಿಯೇ ಆಗಿ ಹೋಗಿದ್ದರು. ಜಯಲಲಿತಾ ಅವರೊಂದಿಗೆ ಎಲ್ಲಾ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ಇರುತ್ತಿದ್ದ ಶಶಿಕಲಾ ಅವರನ್ನು ಪಕ್ಷದ ಕಾರ್ಯಕರ್ತರು, ನಾಯಕರು ಮತ್ತು ಕಾರ್ಯಕರ್ತರು ಚಿನ್ನಮ್ಮ ಎಂದೇ ಕರೆಯುತ್ತಿದ್ದರು. ಆದಾಯಕ್ಕಿಂತ ಹೆಚ್ಚು ಮೌಲ್ಯದ ಆಸ್ತಿ ಸಂಪಾದನೆ ಮಾಡಿದ ಪ್ರಕರಣದಲ್ಲಿ ಜಯಲಲಿತಾ ಅವರು ಜೈಲಿನಲ್ಲಿದ್ದಾಗ ಸರ್ಕಾರವನ್ನು ಒ.ಪನ್ನೀರಸೆಲ್ವಂ ಮುನ್ನಡೆಸಿದ್ದರೂ ಪಕ್ಷವನ್ನು ಶಶಿಕಲಾ ಅವರೇ ನಿಯಂತ್ರಿಸುತ್ತಿದ್ದರು. ಜಯಲಲಿತಾ ಅವರ ನಿಧನಾನಂತರ ಪನ್ನೀರಸೆಲ್ವಂ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು. ಅನಂತರ ಶಶಿಕಲಾ ಅವರೇ ಪಕ್ಷ ಮತ್ತು ಸರ್ಕಾರವನ್ನು ಮುನ್ನಡೆಸಲಿದ್ದಾರೆ, ಮುಖ್ಯಮಂತ್ರಿ ಆಗಲಿದ್ದಾರೆ ಎಂದು ನಿರೀಕ್ಷಿಸಲಾಗಿತ್ತು.

ಆದರೆ, ಶಶಿಕಲಾ ಅವರಿಗೆ ನಿರೀಕ್ಷಿತ ಬೆಂಬಲ ದೊರೆಯಲಿಲ್ಲ. ಅವರು ಅಧಿಕಾರದ ಗದ್ದುಗೆ ಏರುವ ಮುನ್ನವೇ, ಆದಾಯಕ್ಕಿಂತ ಹೆಚ್ಚು ಮೌಲ್ಯದ ಆಸ್ತಿ ಸಂಪಾದನೆ ಮಾಡಿದ ಪ್ರಕರಣದಲ್ಲಿ ಜೈಲಿಗೆ ಹೋಗಬೇಕಾಯಿತು. ನಂತರದ ರಾಜಕೀಯ ಸಮೀಕರಣಗಳು ಶಶಿಕಲಾ ಅವರಿಗೆ ಪೂರಕವಾಗಿ ಇರಲಿಲ್ಲ. ಶಶಿಕಲಾ ಅವರ ಸೋದರಳಿಯ ಟಿ.ಟಿ.ವಿ ದಿನಕರನ್ ಅವರೂ ಎಐಎಡಿಎಂಕೆ ನಾಯಕರ ವಿರೋಧ ಕಟ್ಟಿಕೊಂಡರು. ತಮ್ಮದೇ ಬೇರೆ ಪಕ್ಷ ಕಟ್ಟಿದರು. ಇದರ ಮಧ್ಯೆ ಎಐಎಡಿಎಂಕೆಯು ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿತ್ತು. 2019ರ ಲೋಕಸಭಾ ಚುನಾವಣೆ ಮತ್ತು 2021ರ ವಿಧಾನಸಭಾ ಚುನಾವಣೆಯಲ್ಲಿ ಎಐಎಡಿಎಂಕೆ ಮತ್ತು ಬಿಜೆಪಿ ಮಿತ್ರಪಕ್ಷಗಳಾಗಿದ್ದವು. 2021ರ ಚುನಾವಣೆಗೂ ಮುನ್ನ ಶಶಿಕಲಾ ಅವರು ಜೈಲಿನಿಂದ ಬಿಡುಗಡೆಯಾಗಿದ್ದರು. ಅವರ ಬರುವಿಕೆಯು ಎಐಎಡಿಎಂಕೆ ಮತ್ತು ತಮಿಳುನಾಡು ರಾಜಕಾರಣದಲ್ಲಿ ಭಾರಿ ಬದಲಾವಣೆಗೆ ಕಾರಣವಾಗುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದರು ಮತ್ತು ರಾಜಕೀಯದಿಂದ ದೂರ ಉಳಿದರು.



ಜಾತಿ ಲೆಕ್ಕಾಚಾರ

ಎಐಎಡಿಎಂಕೆಯಲ್ಲಿ ಪನ್ನೀರಸೆಲ್ವಂ ಹಾಗೂ ಪಳನಿಸ್ವಾಮಿ ನಡುವಣ ತಿಕ್ಕಾಟಕ್ಕೆ ಕಾರಣವಾಗಿರುವ ಹಲವು ಅಂಶಗಳಲ್ಲಿ ಜಾತಿ ಸಮೀಕರಣವೂ ಒಂದು. ಉಭಯ ನಾಯಕರ ನಡುವೆ ಆಗಿದ್ದ ದ್ವಿನಾಯಕತ್ವ ಒಪ್ಪಂದ ಕೊನೆಯಾಗಲಿದೆ ಎಂಬ ಸುಳಿವು ಪನ್ನೀರಸೆಲ್ವಂ ಅವರಿಗೆ ಸಿಕ್ಕಿದ್ದು 2021ರ ತಮಿಳುನಾಡು ವಿಧಾನಸಭಾ ಚುನಾವಣೆಯ ಬಳಿಕ. ತಮಿಳುನಾಡಿನ ತೇವರ್ ಸಮುದಾಯಕ್ಕೆ ಸೇರಿದ ಪನ್ನೀರಸೆಲ್ವಂ ಅವರು ರಾಜ್ಯದ ದಕ್ಷಿಣ ಭಾಗದಲ್ಲಿ ಪ್ರಾಬಲ್ಯ ಸಾಧಿಸಿದ್ದಾರೆ. ಪಳನಿಸ್ವಾಮಿ ಅವರು ಗೌಂಡರ್ ಸಮುದಾಯಕ್ಕೆ ಸೇರಿದ್ದು, ರಾಜ್ಯದ ಪಶ್ಚಿಮ ಭಾಗದಲ್ಲಿ ಪ್ರಭಾವಿ ಎನಿಸಿದ್ದಾರೆ.

ತಮಿಳುನಾಡು ವಿಧಾನಸಭೆಗೆ ಕಳೆದಬಾರಿ ನಡೆದ ಚುನಾವಣೆಯಲ್ಲಿ ಅಧಿಕಾರಕ್ಕೆ ಬೇಕಾದ ಸಂಖ್ಯಾಬಲ ಗಳಿಸಲು ಪಕ್ಷ ವಿಫಲವಾಗಿತ್ತು. ಪಳನಿಸ್ವಾಮಿ ಪ್ರಾಬಲ್ಯವಿರುವ ಪಶ್ಚಿಮ ಭಾಗದ 54 ವಿಧಾನಸಭಾ ಕ್ಷೇತ್ರಗಳಲ್ಲಿ ಎಐಎಡಿಎಂಕೆಯ 33 ಶಾಸಕರು ಆರಿಸಿಬಂದರು. ಆದರೆ ಪನ್ನೀರಸೆಲ್ವಂ ಅವರ ಪ್ರಾಬಲ್ಯವಿದ್ದ ದಕ್ಷಿಣ ಭಾಗದ 60 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷ 16 ಕಡೆ ಮಾತ್ರ ಗೆದ್ದಿತು. ದ್ವಿನಾಯಕತ್ವವನ್ನು ನೆಚ್ಚಿಕೊಂಡರೆ ಪಕ್ಷಕ್ಕೆ ಉಳಿಗಾಲವಿಲ್ಲ ಎಂಬುದನ್ನು ಅರಿತ ಪಳನಿಸ್ವಾಮಿ ಅವರು ಏಕನಾಯಕತ್ವಕ್ಕೆ ಒಲವು ತೋರಿದರು. ಪನ್ನೀರಸೆಲ್ವಂ ಅವರನ್ನು ಪಕ್ಷದಿಂದ ಕೈಬಿಟ್ಟರೂ, ತೇವರ್ ಸಮುದಾಯದ ಮತಗಳನ್ನು ಸೆಳೆಯುವ ಲೆಕ್ಕಾಚಾರ ಹಾಕಿಕೊಂಡೇ ಕ್ರಮ ತೆಗೆದುಕೊಂಡಿದ್ದಾರೆ. ತೇವರ್ ಸಮುದಾಯಕ್ಕೆ ಸೇರಿದ ನಾಯಕರೊಬ್ಬರಿಗೆ ಪಕ್ಷದಲ್ಲಿ ಮಹತ್ವದ ಸ್ಥಾನಮಾನ ಕಲ್ಪಿಸಿದ್ದಾರೆ.



ಪನ್ನೀರಸೆಲ್ವಂಗೆ ಮತ್ತೆ ಮತ್ತೆ ಹಿನ್ನಡೆ

ಕೆಲವು ದಿನಗಳಿಂದ ಪನ್ನೀರಸೆಲ್ವಂ ಅವರಿಗೆ ಹಿನ್ನಡೆಯಾಗುವ ಹಲವು ವಿದ್ಯಮಾನಗಳು ನಡೆದಿವೆ. ಕೋರ್ಟ್ ಮೆಟ್ಟಿಲೇರಿದರೂ ಅವರ ವಾದಕ್ಕೆ ಬೆಲೆ ಸಿಗಲಿಲ್ಲ. ಸೋಮವಾರ ನಡೆದ ಜನರಲ್ ಕೌನ್ಸಿಲ್ ಸಭೆಯಲ್ಲಿ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ಪಳನಿಸ್ವಾಮಿ ಅವರನ್ನು ನೇಮಿಸುವ ನಿರ್ಣಯ ತೆಗೆದುಕೊಳ್ಳಲಾಗಿದೆ. ಪನ್ನೀರಸೆಲ್ವಂ ಅವರನ್ನು ಉಚ್ಚಾಟನೆ ಮಾಡುವಂತಹ ನಿರ್ಧಾರವನ್ನೂ ತೆಗೆದುಕೊಳ್ಳಲಾಗಿದೆ. ಶಶಿಕಲಾ ಅವರನ್ನು ಪಕ್ಷದಿಂದ ಶಾಶ್ವತವಾಗಿ ಹೊರಗಿಡಲು ಸಾಧ್ಯವಾಗುವ ನಿರ್ಣಯವೊಂದನ್ನು ತೆಗೆದುಕೊಳ್ಳಲಾಗಿದೆ. 10 ವರ್ಷ ಸತತವಾಗಿ ಪಕ್ಷದ ಸದಸ್ಯತ್ವ ಹೊಂದಿರುವವರು ಮಾತ್ರ ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಸ್ಪರ್ಧಿಸಬಹುದು ಎಂದು ನಿಯಮ ಬದಲಿಸಲಾಗಿದೆ. ಒಟ್ಟು 16 ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದ್ದು, ಇವು ರಾಜಕೀಯವಾಗಿ ಮಹತ್ವದ್ದಾಗಿದ್ದು, ಪಳನಿಸ್ವಾಮಿ ಕೈ ಮೇಲಾಗಿರುವುದು ಸ್ಪಷ್ಟ.

2017ರಲ್ಲಿ ಶಶಿಕಲಾ ವಿರುದ್ಧ ಬಂಡಾಯ ಸಾರಿದ್ದ ಪನ್ನೀರಸೆಲ್ವಂ ಜೊತೆ ಗುರುತಿಸಿಕೊಂಡಿದ್ದವರು 11 ಶಾಸಕರು ಮಾತ್ರ. ಈಗಲೂ ಪರಿಸ್ಥಿತಿ ಭಿನ್ನವಾಗಿಲ್ಲ. ಜೆ.ಸಿ.ಡಿ. ಪ್ರಭಾಕರನ್, ಮನೋಜ್ ಪಾಂಡ್ಯನ್ ಅವರಂತಹ ಕೆಲವೇ ಹಿರಿಯರು ಅವರ ಜೊತೆಗಿದ್ದಾರೆ. ಮೈತ್ರೇಯನ್ ಮೊದಲಾದವರು ಪನ್ನೀರಸೆಲ್ವಂ ಬಣವನ್ನು ತೊರೆದು ಪಳನಿಸ್ವಾಮಿ ಅವರಿಗೆ ನಿಷ್ಠೆ ತೋರಿದ್ದಾರೆ.

ರಾಜ್ಯಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅಭ್ಯರ್ಥಿ ಆಯ್ಕೆಯು ಪಳನಿಸ್ವಾಮಿ ಹಾಗೂ ಪನ್ನೀರಸೆಲ್ವಂ ನಡುವಿನ ಬಿರುಕನ್ನು ಇನ್ನಷ್ಟು ದೊಡ್ಡದಾಗಿಸಿತು. ಎರಡು ಸ್ಥಾನಗಳ ಪೈಕಿ ಒಂದನ್ನು ತಮ್ಮ ಬೆಂಬಲಿಗರಿಗೆ ನೀಡುವಂತೆ ಪನ್ನೀರಸೆಲ್ವಂ ಅವರು ಪಟ್ಟು ಹಿಡಿದಿದ್ದರು. ಇದು ಪಳನಿಸ್ವಾಮಿ ಅವರ ಅತೃಪ್ತಿಗೆ ಕಾರಣವಾಯಿತು.



ನೆಲೆ ಕಂಡುಕೊಳ್ಳಲು ಬಿಜೆಪಿ ಯತ್ನ

ತಮಿಳುನಾಡಿನಲ್ಲಿ ಬಿಜೆಪಿಗೆ ಗಟ್ಟಿ ನೆಲೆಯೇನೂ ಇಲ್ಲ. ಎಐಎಡಿಎಂಕೆಯ ಜೊತೆಗೆ ಬಿಜೆಪಿ ಮೈತ್ರಿ ಮಾಡಿಕೊಂಡಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಬಲ ಪ್ರತಿಪಕ್ಷವಾಗಿ ಹೊರಹೊಮ್ಮಲು ಬಿಜೆಪಿ ಯತ್ನಿಸುತ್ತಿರುವುದು ಎಐಎಡಿಎಂಕೆಯಲ್ಲಿ ನಡುಕ ಹುಟ್ಟಿಸಿತ್ತು. ಎರಡು ಶಕ್ತಿ ಕೇಂದ್ರಗಳು ಸೃಷ್ಟಿಯಾಗಿರುವ ದ್ವಿನಾಯಕತ್ವ ಸೂತ್ರವನ್ನು ಇನ್ನಷ್ಟು ದಿನ ಮುಂದುವರಿಸಿದರೆ ಅದು ಪಕ್ಷವನ್ನು ಸಂಕಷ್ಟಕ್ಕೆ ದೂಡಬಹುದು ಎಂಬುದನ್ನು ಪಳನಿಸ್ವಾಮಿ ಬಣ ಅರಿತುಕೊಂಡಿತು. ಹೀಗಾಗಿ ಪಕ್ಷವನ್ನು ಏಕನಾಯಕನ ನಿಯಂತ್ರಣಕ್ಕೆ ತರಲು ಈ ಬಣ ಮುಂದಾಯಿತು ಎನ್ನಲಾಗಿದೆ.


ಸದ್ಯಕ್ಕೆ ತಟಸ್ಥ ನಿಲುವು ತಾಳಿದಂತೆ ಕಂಡರೂ, ಎರಡೂ ಬಣಗಳಿಂದ ಹೊರಬರುವ ಸದಸ್ಯರನ್ನು ಸೆಳೆದುಕೊಂಡು ಪಕ್ಷವನ್ನು ಬಲಗೊಳಿಸಲು ಬಿಜೆಪಿ ಯತ್ನಿಸುವ ಸಾಧ್ಯತೆಯೇ ಹೆಚ್ಚು ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಪನ್ನೀರಸೆಲ್ವಂ ಬಣವು ಕೊನೆಗೆ ಬಿಜೆಪಿಯಲ್ಲಿ ಸೇರಿಹೋದರೂ ಅಚ್ಚರಿಯಿಲ್ಲ. ಆಗ, ಪಳನಿಸ್ವಾಮಿ ಬಣ ಮಾತ್ರ ಉಳಿಯಲಿದೆ. ಬಿಜೆಪಿ ಪ್ರಬಲವಾದರೆ, ಪಳನಿಸ್ವಾಮಿ ಬಣದ ಮುಖಂಡರೂ ಬಿಜೆಪಿಗೆ ಸೇರಿಕೊಳ್ಳಬಹುದು ಎಂದು ವಿಶ್ಲೇಷಿಸಲಾಗಿದೆ.

ಆಧಾರ: ಪಿಟಿಐ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಕಳಂಕಿತ ಅಧಿಕಾರಿಗಳನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದಂತಹ ಸಂಸ್ಥೆಗಳಿಗೆ ನೇಮಕ ಮಾಡಬಾರದು ಎಂದು ಹೈಕೋರ್ಟ್ ನಿರ್ದೇಶನ ನೀಡಿರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 171

ಯಜ್ಞಕ್ಕೆ ರುದ್ರನನ್ನು ಕರೆಯದ ದಕ್ಷ

‘ಎಲೈ ನಾರದ! ಪ್ರಯಾಗದ ಯಜ್ಞಕಾರ್ಯದಲ್ಲಿ ಶಿವನನ್ನು ನಿಂದಿಸಿದ್ದ ದಕ್ಷಬ್ರಹ್ಮ, ಮುಂದೆ ಮಹಾಯಜ್ಞವೊಂದನ್ನು ಆಯೋಜಿದ. ಆ ಯಜ್ಞಕ್ಕೆ ದೇವಋಷಿಗಳಾದ ಅಗಸ್ತ್ಯ, ಕಶ್ಯಪ, ಅತ್ರಿ, ವಾಮದೇವ, ಭೃಗು, ದಧೀಚಿ, ವ್ಯಾಸ, ಭಾರದ್ವಾಜ, ಗೌತಮ, ಪೈಲಮುನಿ, ಪರಾಶರ, ಗರ್ಗಮುನಿ, ಭಾರ್ಗವ, ಕಕುಪ, ಸಿತಮುನಿ, ಸುಮಂತುಮುನಿ, ತ್ರಿಕಮುನಿ, ಕಂಕಮುನಿ, ವೈಶಂಪಾಯನಮುನಿ ಮುಂತಾದ ಅನೇಕ ಮಹರ್ಷಿಗಳನ್ನು ಆಹ್ವಾನಿಸಿದ್ದ’ ಎಂದು ಮುಂದುವರೆಸಿದ ಬ್ರಹ್ಮ.

‘ಲೋಕಪಾಲಕರು, ಗಂಧರ್ವರು, ವಿದ್ಯಾಧರರು, ಸಿದ್ಧರು, ದ್ವಾದಶಾದಿತ್ಯರು, ನಾಗಪುರುಷರು, ಕಿನ್ನರರು, ಕಿಂಪುರುಷ ಮೊದಲಾದ ದೇವಜಾತಿಯವರೂ ಆಗಮಿಸಿದ್ದರು. ಸತ್ಯಲೋಕದಿಂದ ಬ್ರಹ್ಮ ತನ್ನ ಪರಿವಾರದೊಂದಿಗೆ ವೇದಪುರುಷರು, ಸನಕಾದಿಗಳೊಡನೆ ಬಂದ. ವಿಷ್ಣು ಸಹ ದಕ್ಷನಿಂದ ಆಹ್ವಾನಿತನಾಗಿ ಆ ಯಾಗಕ್ಕೆ ಬಂದಿದ್ದ. ಸತೀ ಹೊರತು ದಕ್ಷನ ತನ್ನ ಎಲ್ಲಾ ಪುತ್ರಿಯರಿಗೂ ಆಹ್ವಾನವಿತ್ತಿದ್ದ. ಆದರೆ ಅಕ್ಕರೆಯ ಮಗಳಾದ ಸತೀ ಮತ್ತು ಅಳಿಯನಾದ ಶಿವನನ್ನು ಕರೆಯಲಿಲ್ಲ. ಕನಖಲವೆಂಬ ತೀರ್ಥಕ್ಷೇತ್ರದಲ್ಲಿ ನಡೆಯುವ ಯಜ್ಞಕ್ಕಾಗಿ ದೇವಶಿಲ್ಪಿಯಾದ ತ್ವಷ್ಟ ಬ್ರಹ್ಮ ಸುಂದರವಾದ ಮಹಾಭವನವನ್ನ ನಿರ್ಮಿಸಿದ್ದ. ಅಲ್ಲಿ ದಕ್ಷಬ್ರಹ್ಮ ಅತಿಥಿಗಳ ವಾಸಕ್ಕೆ ವ್ಯವಸ್ಥೆ ಮಾಡಿದ್ದ. ಯಜ್ಞಕ್ಕೆ ಭೃಗುಮುನಿ ಮೊದಲಾದ ತಪೋಧನರನ್ನು ಋತ್ವಿಜರನ್ನಾಗಿ ನೇಮಕ ಮಾಡಿದ್ದ. ವಿಷ್ಣುವನ್ನು ಯಜ್ಞಕ್ಕೆ ಸರ್ವಾಧ್ಯಕ್ಷನಾಗಿಸಿದ್ದ. ವೇದತ್ರಯಗಳ ವಿಧಿಯನ್ನು ಬ್ರಹ್ಮ ನಿರ್ದೇಶಿಸುವವನಾಗಿದ್ದ. ದಿಕ್ಪಾಲಕರು ದ್ವಾರಪಾಲಕರಾಗಿ, ಯಾಗವನ್ನು ರಕ್ಷಿಸುವವರಾಗಿದ್ದರು.

‘ಯಜ್ಞದಲ್ಲಿ ಯಜ್ಞಪುರುಷನು ಸುಂದರವಾದ ರೂಪವನ್ನು ಧರಿಸಿ ಸನ್ನಿಹಿತನಾದ. ಮಹಾಮುನಿಗಳೆಲ್ಲರೂ ವೇದಘೋಷವನ್ನು ಮಾಡಿದರು. ಅಗ್ನಿಯು ಯಾಗದಲ್ಲಿ ಅನೇಕ ರೂಪದ ಜ್ವಾಲೆಗಳನ್ನು ಪ್ರಕಟಿಸಿ, ಹವಿಸ್ಸನ್ನು ಸ್ವೀಕರಿಸತೊಡಗಿದ. ಎಂಬತ್ತೆಂಟು ಸಾವಿರ ಋತ್ವಿಜರು ಹೋಮವನ್ನು ಮಾಡುತ್ತಲಿದ್ದರು. ಅರವತ್ತನಾಲ್ಕುಸಾವಿರ ದೇವಮುನಿಗಳು ಸಾಮಗಾನವನ್ನು ಮಾಡುತ್ತಲಿದ್ದರು. ಅಧ್ವರ್ಯುಗಳು ಮತ್ತು ಹೋತೃಗಳು ಅರವತ್ತುನಾಲ್ಕುಸಾವಿರದಷ್ಟಿದ್ದರು. ನಾರದಮುನಿ ಮೊದಲಾದ ಋಷಿಗಳು ಆಖ್ಯಾನಗಳನ್ನು ಹೇಳುತ್ತಲಿದ್ದರು.

‘ದಕ್ಷ ತನ್ನ ಪತ್ನಿಯೊಡನೆ ಯಜ್ಞದೀಕ್ಷೆಯನ್ನು ಕೈಗೊಂಡ. ದಧೀಚಿಯು ‘ಶಂಕರನು ಯಜ್ಞಮಹೋತ್ಸವಕ್ಕೆ ಏಕೆ ಬರಲಿಲ್ಲ? ಶಿವನು ಅನುಗ್ರಹಿಸಿದರೆ ಅಮಂಗಳಗಳೂ ಮಂಗಳಕರವಾಗುವುವು. ಎಲೈ ದಕ್ಷನೆ, ಶಿವನನ್ನು ಕರೆದುಕೊಂಡು ಬಂದರೆ ಯಜ್ಞವು ಸಾಂಗವಾಗಿ ನೆರವೇರುವುದು‘ ಎಂದ.

‘ದಧೀಚಿಯ ಮಾತುಗಳನ್ನು ಕೇಳಿ ಮೂರ್ಖನಾದ ದಕ್ಷ ‘ಎಲೈ ದಧೀಚಿ, ವಿಷ್ಣುವು ದೇವತೆಗಳಿಗೆ ಆದಿಕಾರಣನು. ವೇದಗಳು, ಯಜ್ಞಗಳು, ಎಲ್ಲಾ ವೈದಿಕ ಲೌಕಿಕರ್ಮಗಳು ನೆಲಸಿರುವಂತಹ ವಿಷ್ಣು ಬಂದಿದ್ದಾನೆ. ಜಗತ್ಪಿತಾಮಹನಾದ ಬ್ರಹ್ಮನೂ ಯಜ್ಞಕ್ಕೆ ಬಂದಿರುವಾಗ, ಸ್ಮಶಾನವಾಸಿ ರುದ್ರನಿಂದ ಆಗಬೇಕಾದುದೇನೂ ಇಲ್ಲ’ ಎಂದ. ‘ಎಲೈ ದಕ್ಷನೇ, ಶಿವನು ಇಲ್ಲದ ಈ ಯಜ್ಞವು ಯಜ್ಞವಲ್ಲ‘ ಎಂದು ಹೇಳಿ ದಧೀಚಿಯು ಹೊರಟುಹೋದ. ಶಿವಭಕ್ತ ತಪಸ್ವಿಗಳೂ ದಕ್ಷನಿಗೆ ಶಾಪವನ್ನು ಕೊಟ್ಟುಹೋದರು. ವಿಚಲಿತನಾಗದ ದಕ್ಷಬ್ರಹ್ಮ, ಉಳಿದವರನ್ನುದ್ದೇಶಿಸಿ ‘ಎಲೈ ತಪೋಧನರೆ, ನೀವೆಲ್ಲರೂ ವಿಷ್ಣುಭಕ್ತರಾಗಿದ್ದು, ವೇದವಿದ್ವಾಂಸರಾಗಿರುವಿರಿ. ನೀವೆಲ್ಲಾ ಯಜ್ಞ ಸಫಲವಾಗುವಂತೆ ಮಾಡಿರಿ‘ ಎಂದು ಕೋರಿದ. ದೇವಮುನಿಗಳು ಯಜ್ಞವನ್ನು ಪ್ರಾರಂಭಿಸಿದರು. ‘ಎಲೈ ನಾರದ, ಯಜ್ಞ ಧ್ವಂಸವಾದ ವಿವರ ಹೇಳುತ್ತೇನೆ ಕೇಳು‘ ಎಂದು ಬ್ರಹ್ಮ ಹೇಳುವಲ್ಲಿಗೆ ಸತೀಖಂಡದ ಇಪ್ಪತ್ತೇಳನೆಯ ಅಧ್ಯಾಯ ಮುಗಿಯುತ್ತದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಉದಯಪುರದಲ್ಲಿ ಟೇಲರ್ ಕನ್ಹಯ್ಯ ಲಾಲ್ ಅವರನ್ನು ಹತ್ಯೆ ಮಾಡಿದ ಹಂತಕರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದ ಪೊಲೀಸ್ ಕಾನ್‌ಸ್ಟೆಬಲ್‌ಗೆ ಕತ್ತಿಯಿಂದ ಇರಿಯಲಾಗಿದೆ. ಮುಸ್ಲಿಂ ಸಮುದಾಯದ ವ್ಯಕ್ತಿಯೊಬ್ಬರು ಇವರ ಮೇಲೆ ಹಲ್ಲೆ ನಡೆಸಿದ್ದು, ದೇಶವು ಇಸ್ಲಾಮೀಕರಣಗೊಳುತ್ತಿದೆ. ಮೊದಲು ಹತ್ಯೆ, ನಂತರ ವಿಡಿಯೊ, ಇದೀಗ ಪೊಲೀಸರ ಮೇಲೆ ದಾಳಿ ನಡೆದಿದೆ’ ಎಂಬ ಬರಹ ಇರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.



ಈ ವಿಡಿಯೊಗೆ ನೀಡಲಾಗಿರುವ ವಿವರಣೆ ತಪ್ಪು ಎಂದು ಲಾಜಿಕಲ್ ಇಂಡಿಯನ್ ವೆಬ್‌ಸೈಟ್ ತಿಳಿಸಿದೆ. ರಾಜಸ್ಥಾನದ ಬದನೋರ್ ಎಂಬಲ್ಲಿ ಜುಲೈ 4ರಂದು ನಡೆದ ಬೇರೆ ಘಟನೆಯಲ್ಲಿ ಕಾನ್‌ಸ್ಟೆಬಲ್ ಭಜೇರಾಮ್ ಎಂಬುವರ ಮೇಲೆ ಹಲ್ಲೆ ನಡೆದಿದೆ. ಆರೋಪಿಯನ್ನು ಬಂಧಿಸಲಾಗಿದೆ. ಈ ಸುದ್ದಿಯನ್ನು ಅಮರ್ ಉಜಾಲ ಸೇರಿದಂತೆ ಹಲವು ಪತ್ರಿಕೆಗಳು ಪ್ರಕಟಿಸಿವೆ. ಹಲ್ಲೆ ನಡೆಸಿದ ಯುವಕ ಹಿಂದೂ ಧರ್ಮಕ್ಕೆ ಸೇರಿದವನಾಗಿದ್ದು, ಕನ್ಹಯ್ಯ ಲಾಲ್ ಹಂತಕರನ್ನು ಬಂಧಿಸಿದ ಪೊಲೀಸರಿಗೂ, ಕಾನ್‌ಸ್ಟೆಬಲ್ ಭಜೇರಾಮ್‌ಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದೆ.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ತಾಳುವ ಅನಿವಾರ್ಯತೆ

ಬರುವೆಲ್ಲ ಬೇನೆಗಂ ಮದ್ದನಾರಿರಿಸಿಹರು ? |
ನರರ ಕೀಳ್ತನಕೆಲ್ಲ ಪರಿಹಾರವೆಂತು ? ||
ಕಿರಿದು ಪಲ್ಲನು ತಾಳಿಕೊಳಲೆಬೇಕಷ್ಟಿಷ್ಟು |
ಧರೆಯಂತರುಷ್ಣವನು – ಮಂಕುತಿಮ್ಮ || 670 ||

ಪದ-ಅರ್ಥ: ಬರುವೆಲ್ಲ = ಬರುವ + ಎಲ್ಲ, ಬೇನೆಗಂ = ಬೇನೆಗೆ,ಮದ್ದು ನಾರಿರಿಸಿಹರು = ಮದ್ದನು + ಆರು + ಇರಿಸಿಹರು, ಕೀಳ್ತನಕೆಲ್ಲ = ಕೀಳ್ತನಕೆ(ಕೀಳುಬುದ್ಧಿಗೆ) + ಎಲ್ಲ, ಪಲ್ಲನು = ಹಲ್ಲನು,ಧರೆಯ ತರುಷ್ಣವನು = ಧರೆಯ + ಅತರ + ಉಷ್ಣವನು

ವಾಚ್ಯಾರ್ಥ: ಮುಂದೆ ಬರುವ ರೋಗಗಳಿಗೆ ಔಷಧಗಳನ್ನು ಯಾರು ಸಿದ್ಧಮಾಡಿದ್ದಾರೆ? ಮನುಷ್ಯರ ಕೀಳುಬುದ್ಧಿಗೆ ಪರಿಹಾರವಿದೆಯೆ? ಹಲ್ಲನ್ನು ಕಿರಿದು ಅದನ್ನು ಅಷ್ಟಿಷ್ಟು ತಾಳಿಕೊಳ್ಳಲೇಬೇಕು, ಭೂಮಿ ತನ್ನ ಗರ್ಭದ ಬೆಂಕಿಯನ್ನು ತಾಳಿಕೊಂಡಂತೆ.

ವಿವರಣೆ: ಜಾಗತೀಕರಣದಿಂದ ಮಾಹಿತಿ, ಸರಕುಗಳು ಮತ್ತು ವ್ಯಕ್ತಿಗಳ ಹರಿವು ಪ್ರಪಂಚದಲ್ಲೆಲ್ಲ ಹೆಚ್ಚಾಗಿದೆ. ಮೊದಲು ಜನರು ತಮ್ಮ ತಮ್ಮ ಸೀಮಿತ ಕ್ಷೇತ್ರಗಳಲ್ಲೇ ಬದುಕು ಸಾಗಿಸುತ್ತಿದ್ದರು. ಆದ್ದರಿಂದ ಅವರಿಗೆ ಬಂದ ರೋಗಗಳು ಕೂಡ ಅದೇ ಸಣ್ಣ ಪ್ರದೇಶದಲ್ಲಿ ಉಳಿದು, ನಶಿಸಿ ಹೋಗುತ್ತಿದ್ದವು. ಈಗ ಒಂದು ಪ್ರದೇಶದಲ್ಲಿ ಕಾಣಿಸಿಕೊಂಡ ರೋಗ ಬಹುಬೇಗ ಪ್ರಪಂಚದ ಎಲ್ಲೆಡೆಗೆ ಹರಡುವ ಸಾಧ್ಯತೆ ಇದೆ. ಯಾವುದೋ ದೇಶದಲ್ಲಿ ಒಂದು ರೋಗ ಕಂಡರೆ, ನಾವು ಮತ್ತೊಂದು ದೇಶದಲ್ಲಿ ಕ್ಷೇಮವಾಗಿದ್ದೇವೆ ಎಂದು ಭಾವಿಸುವಂತಿಲ್ಲ. ಅದು ಮರುದಿನವೇ ಯಾರೋ ಪ್ರಯಾಣಿಕರೊಂದಿಗೆ ನಮ್ಮಲ್ಲಿಗೆ ಬಂದು ಸೇರಬಹುದು.

ಅದಕ್ಕೊಂದು ಮದ್ದು ಹುಡುಕಬೇಕು. ನಾವೆಲ್ಲ ಕಂಡಿದ್ದೇವೆ, ಮೊದಲು ನ್ಯುಮೋನಿಯಾ, ಕಾಲರಾ, ಪ್ಲೇಗುಗಳಂಥ ರೋಗಗಳು ಬಂದಾಗ ಜನ ಸಾವಿರಾರು ಸಂಖ್ಯೆಯಲ್ಲಿ ಪ್ರಾಣಕಳೆದುಕೊಂಡರು. ನಿಧಾನವಾಗಿ ಅವುಗಳಿಗೆ ಔಷಧಿ ಕಂಡು ಹಿಡಿದು ಅವುಗಳ ನಿವಾರಣೆಯಾಯಿತು ಎನ್ನುವಷ್ಟರಲ್ಲಿ ಹೃದಯದ ಕಾಯಿಲೆಗಳು ತೀವ್ರವಾದವು.

ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಹೊತ್ತಿಗೆ ಏಡ್ಸ್ ಹಾಮಾರಿ ಧುತ್ತೆಂದು ಮುಂದೆನಿಂತಿತು. ಅದನ್ನು ನಿರ್ವಹಿಸಿ ಇನ್ನು ನಿರಾಳರಾದೆವು ಎಂದುಕೊಳ್ಳುವಾಗ ಕೊರೊನಾ ಎಂಬ ಪ್ರಚಂಡರೋಗ ಇಡೀ ಪ್ರಪಂಚವನ್ನು ದು:ಖದಲ್ಲಿ ಬೇಯಿಸಿತು. ಈಗ ಅದು ಶಾಂತವಾದಂತೆ ತೋರುತ್ತದೆ. ಆದರೆ ಮತ್ತೊಂದು ಹೊಸರೋಗ ಬರುವುದಿಲ್ಲವೆಂದು ಹೇಗೆ ಹೇಳುವುದು? ಅದಕ್ಕೆ ನಮ್ಮ ಬಳಿ ಮದ್ದು ಇದೆಯೆ? ಹಾಗೆಯೇ ಮನುಷ್ಯನ ಕೀಳುತನಕ್ಕೆ ಏನಾದರೂ ಪರಿಹಾರವಿದೆಯೆ? ಪುರಾಣದ ಕಥೆಗಳಲ್ಲಿ ದೇವತೆಗಳಿಗೆ ಅಹಂಕಾರ ಬಂದು ಒದ್ದಾಡಿದ್ದು, ಶಿಕ್ಷೆ ಅನುಭವಿಸಿದ್ದು ಇಲ್ಲವೆ? ಸ್ವರ್ಗಲೋಕದ ಅಧಿಪತಿಯಾದ ಇಂದ್ರನಿಗೇ ಪರಸ್ತ್ರೀ ಮೋಹ ತಪ್ಪಲಿಲ್ಲ. ಧರ್ಮದ ಅವತಾರವೆನ್ನಿಸಿದ ಧರ್ಮರಾಜನಿಗೆ ಜೂಜಿನ ಮೋಹ ಬಿಡಲಿಲ್ಲ.

ರಾವಣನ ಮೋಹ, ದುರ್ಯೋಧನನ ರಾಜ್ಯದಾಸೆ, ಅಲೆಗ್ಸಾಂಡರ್‌ನ ಮಹತ್ವಾಕಾಂಕ್ಷೆ, ಹಿಟ್ಲರ್‌ನ ಜನಾಂಗೀಯ ದ್ವೇಷ, ಒಡೆದು ಆಳುವ ಬ್ರಿಟಿಷ್ ನಾಯಕರ ಬುದ್ಧಿ, ಜಾತಿಯನ್ನು ಮುಂದಿಟ್ಟು ಸಮುದಾಯಗಳನ್ನು ಒಡೆಯುವ ರಾಜಕೀಯ ಹೇಸಿತನ ಇವೆಲ್ಲ ಮನುಷ್ಯನ ಕೀಳುತನ ಅನಾದಿಕಾಲದಿಂದ ಉಳಿದೇ ಬಂದದ್ದನ್ನು ಹೇಳುತ್ತವೆ. ಈ ಕೀಳುತನಕ್ಕೇನಾದರೂ ಪರಿಹಾರ ವಿದೆಯೆ? ಕಗ್ಗ ಹೇಳುತ್ತದೆ, ಇವುಗಳಿಗೆ ಒಂದೇ ಪರಿಹಾರ. ಅದು ಹಲ್ಲನ್ನು ಕಚ್ಚಿ ತಾಳಿಕೊಳ್ಳುವುದು.

ಕಾಲಕಾಲಕ್ಕೆ ರೋಗಗಳು ಮತ್ತು ಮನುಷ್ಯನ ನೀಚತನ ಮರಮರಳಿ ಬರುತ್ತವೆ. ಅವು ಸಂಪೂರ್ಣವಾಗಿ ನಿಂತು ಹೋಗುವುದಿಲ್ಲ. ಆದ್ದರಿಂದ ಅವುಗಳನ್ನು ತಾಳಿಕೊಳ್ಳದೆ ಬೇರೆ ವಿಧಿಯಿಲ್ಲ. ಭೂಮಿ ತನ್ನ ಗರ್ಭದಲ್ಲಿ ಇನ್ನೂ ಕುದಿಯುವ ಬೆಂಕಿಯನ್ನು ಇಟ್ಟುಕೊಂಡಂತೆ, ತಾಳಿಕೊಂಡಂತೆ ನಾವೂ ಈ ಅನಿವಾರ್ಯತೆಗಳನ್ನು ಸಹಿಸಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜುಲೈ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪೂರ್ಣಿಮಾ ಗಂ. 24-08 ನಕ್ಷತ್ರ: ಪೂರ್ವಾಷಾಢ ಗಂ. 23-19 ಯೋಗ: ಐಂದ್ರ ಗಂ. 12-44,ಕರಣ: ವಿಷ್ಟಿ ಗಂ. 14-05, ಮಿಥುನ ಮಾಸದ 28 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00 – 01:30
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 13 ಜುಲ್ ಹಿಜಾನ್. ದಿನ ವಿಶೇಷ : ಗುರು ಪೂರ್ಣಿಮಾ, ವ್ಯಾಸ ಪೂಜಾ, ಆಷಾಡಿ ಪೂರ್ಣಿಮಾ, ಹುತಾತ್ಮರ ದಿನ ಅದೃಷ್ಟ ಸಂಖ್ಯೆ : 3, 9

ಮೇಷ : ಆತ್ಮವಿಶ್ವಾಸದಿಂದ ಹೊಸದಾದ ಕೆಲಸವನ್ನು ಆರಂಭಿಸುವಿರಿ. ಸಂಶೋಧನಾ ಕ್ಷೇತ್ರದಲ್ಲಿನ ಕಾರ್ಯಗಳಲ್ಲಿ ಹೆಚ್ಚಿನ ಪ್ರಗತಿ. ಹಿರಿಯರೊಬ್ಬರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿಯೇ ಉತ್ತಮ ಸಂಬಂಧ ಕೂಡಿ ಬರುವುದು.

ವೃಷಭ : ಸಂಸಾರದ ಹೊಣೆಗಾರಿಕೆಯ ಕಾರಣದಿಂದಾಗಿ ಆದಾಯ ವೆಚ್ಚಗಳು ಸರಿ ಸಮವಾಗಿರುವುದು. ಕಿರಿಯ ಸೋದರ ನಿಮ್ಮ ನೆರವಿಗೆ ಬರಲಿದ್ದಾನೆ. ಕೆಲಸದ ಒತ್ತಡಕ್ಕೆ ಶಿರೋವೇದನೆಯು, ಬೆನ್ನುನೋವು ಎದುರಾಗಬಹುದು.

ಮಿಥುನ: ಸಮಾಜದಲ್ಲಿ ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ಪಾಠವನ್ನು ಇಂದಿನ ದಿನವೇ ನಿಮಗೆ ಬೋಧಿಸುವುದು. ಖರ್ಚು ವೆಚ್ಚಗಳ ಮೇಲೆ ಬಿಗಿ ಹಿಡಿತ ಅನಿವಾರ್ಯವೆನಿಸುವುದು. ಹಿರಿಯರ ಆಶೀರ್ವಾದ ನಿಮ್ಮ ಪಾಲಿಗಿದೆ.

ಕರ್ಕಾಟಕ: ಉದ್ಯೋಗ ಬದಲಾವಣೆಯ ಯೋಚನೆ ಮಾಡುವವರು ಸದ್ಯ ಸಿಕ್ಕಿರುವ ಕೆಲಸದಲ್ಲೇ ತೃಪ್ತಿಪಡುವುದು ಒಳ್ಳೆಯದು. ಗುಪ್ತಚರ ಇಲಾಖೆ ಉದ್ಯೋಗಿಗಳಿಗೆ ಸರ್ಕಾರದಿಂದ ಪ್ರಶಸ್ತಿ ಮತ್ತು ಬಹುಮಾನ ದೊರೆಯಲಿದೆ.

ಸಿಂಹ : ಕೆಲಸ ಕಾರ್ಯಗಳು ಲಾಭಯುಕ್ತವಾಗಿ ಪೂರೈಸುವುದು. ಮಕ್ಕಳೊಂದಿಗೆ ವ್ಯವಹಾರದ ವಿಚಾರಗಳ ಬಗ್ಗೆ ಸುದೀರ್ಘ ಮಾತುಕತೆ ನಡೆಸುವಿರಿ. ಹೊಸ ಮನೆಯ ಕೆಲಸಗಳು ಮುಕ್ತಾಯ ಹಂತ ತಲುಪುವುದರಿಂದ ಮನಸ್ಸಿಗೆ ನೆಮ್ಮದಿ.

ಕನ್ಯಾ : ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಕಳೆದ ವಾರದ ಎಲ್ಲ ಕೆಲಸಗಳು ಈ ದಿನ ಸಂಪೂರ್ಣಗೊಂಡು ವಿಪುಲ ಆದಾಯ ಪಡೆದುಕೊಳ್ಳುವಿರಿ.

ತುಲಾ: ಅನಿರೀಕ್ಷಿತವಾಗಿ ಆದ ವರ್ಗಾವಣೆಯಿಂದ ಅನುಕೂಲ ಪಡೆದುಕೊಳ್ಳುವಿರಿ. ಸಿಮೆಂಟ್ ವ್ಯಾಪಾರಸ್ಥರಿಗೆ ಅಧಿಕ ಲಾಭ. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ. ಶ್ರೀ ಗುರು ನರಸಿಂಹ ದೇವರ ಸ್ತುತಿ, ಸೇವೆ ಮಾಡಿ

ವೃಶ್ಚಿಕ : ಈ ದಿನ ಹೊಂದಾಣಿಕೆ ಅಗತ್ಯ. ಧನಾಗಮನಕ್ಕೆ ಯಾವುದೇ ತೊಂದರೆ, ಅಡ್ಡಿ-ಆತಂಕ ಇರುವುದಿಲ್ಲ. ಅಧಿಕ ಒತ್ತಡದ ಕೆಲಸ ದೇಹಕ್ಕೆ ಆಯಾಸವನ್ನು ಮಾಡಲಿದೆ. ಆರೋಗ್ಯದ ಬಗ್ಗೆ ಮತ್ತು ಆಹಾರದ ಬಗ್ಗೆ ಕಾಳಜಿ ವಹಿಸಿ.

ಧನು : ಕಾರ್ಮಿಕರ ಬೇಡಿಕೆ ಪರಿಶೀಲಿಸಿ. ನ್ಯಾಯ ಸಮ್ಮತವಾಗಿ ವ್ಯವಹರಿಸಿ. ಹಳೆಯ ಬಾಕಿ ಮೊತ್ತ ನಿಮ್ಮ ಕೈ ಸೇರಲಿದೆ. ಹೊಸ ಯೋಜನೆಗಳ ತಯಾರಿ ಕೆಲಸಗಳಿಗೆ ಒಳ್ಳೆಯ ಸಮಯ. ದಿನವಿಡೀ ಸಂತೋಷ ನಿಮಗಿರುವುದು.

ಮಕರ : ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಕೆಲಸದಲ್ಲಿ ಸತ್ಯ ಮಾರ್ಗವನ್ನು ಬಿಡಬೇಕಾದ ಪರಿಸ್ಥಿತಿ ಎದುರಾಗಬಹುದು. ಮಕ್ಕಳ ಆರೋಗ್ಯದಲ್ಲಿನ ಕ್ಷೀಣತೆಯು ತಲೆನೋವಿಗೆ ಕಾರಣವಾಗುತ್ತದೆ. ವಸ್ತ್ರ ಖರೀದಿಯ ಯೋಗವಿದೆ.

ಕುಂಭ : ಸಾಮಾಜಿಕ ಬದುಕಿನಲ್ಲಿ ಉತ್ತಮವಾದ ಸಾಧನೆಯನ್ನು ಮಾಡಲು ಸೂಕ್ತವಾದ ಅವಕಾಶ ಸಿಗಲಿದೆ. ನೀವು ಅಪೇಕ್ಷಿಸಿದ ಪ್ರಗತಿಯು ದೇವತಾನುಗ್ರಹದಿಂದ ಪ್ರಾಪ್ತಿಯಾಗುವುದು. ಯಶಸ್ಸಿನ ಹೊಸ ಮಾರ್ಗ ಸಿಗುವುದು.

ಮೀನ : ಶತ್ರುಗಳ ಬಲೆಗೆ ಬೀಳದಂತೆ ಈ ದಿನ ನೀವು ಎಚ್ಚರವಹಿಸಬೇಕು. ಹೊಸ ಸ್ಥಾನ ಅಥವಾ ಹೊಸ ಮನೆಗೆ ಹೋಗಬಹುದು. ಉದ್ಯೋಗವನ್ನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ದೊರಕಿಸಿಕೊಳ್ಳಬಹುದು.

ಪದಬಂಧ 5017

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಚಾರ ಕೊನೆಗಿದ್ದಾಗ ವಿರುದ್ಧವಾದ ಆಚರಣೆ! (4)
3. ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ! (3)
4. ಬೆಂಕಿಯ ಕಿಡಿ (4)
6. ಮನೋರಥದಲ್ಲಿರುವ ತೇರು (2)
7. ಅಡಿಯಲ್ಲಿ ಈ ಆತುರವೇ? (4)
8. ಇದು ಸ್ವಭಾವಸಿದ್ಧವಾದುದು (3)
9. ಬುದ್ಧಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
12. ಕೆಂಪು ಮಿಶ್ರಿತ ಕಪ್ಪು ಬಣ್ಣ (2)
13. ಕನ್ನಡಿಗ ಧರಿಸಿರುವ ಚಾಳೀಸು (4)
15. ಇದೊಂದು ಬಗೆಯ ಅಲೋಹ ಮೂಲಧಾತು (3)
16. ಶಿವನ ಬಳಿಯಿರುವ ಚರ್ಮವಾದ್ಯ (4)

ಮೇಲಿಂದ ಕೆಳಕ್ಕೆ

1. ಓದು ಬರಹಗಳನ್ನು ಬಲ್ಲವನು (4)
2. ವಿಹಾರದಲ್ಲಿದ್ದಾಗ ಸೂರ್ಯ ಕಾಣಿಸಿದನೇ? (2)
3. ಪರೀಕ್ಷೆ ಸಮಯದಲ್ಲಿಯೇ ಈ ಜಾತ್ರೆ! (3)
5. ಗಡಿಯಲ್ಲಿರುವ ವ್ಯಾಯಾಮ ಶಾಲೆ (3)
7. ಅನುಜನ ಹತ್ತಿರವಿರುವ ಆಡು (2)
8. ವಸತಿ ಹತ್ತಿರವಿರುವ ಪತ್ನಿ (2)
9. ಇದು ಶಿಥಿಲವಾದುದು (3)
10. ಚತುರರು ಆಡುವ ಒಳಾಂಗಣದ ಆಟ (4)
11. ಪಂಚಭೂತಗಳಿಗೆ ಸಂಬಂಧಿಸಿರುವುದು (3)
14. ಕಡಲ ಹತ್ತಿರ ಪಡೆದುಕೊಂಡಿರುವ ಸಾಲ (2)

■	■	1			2	■	■	■
3			■	■	4			5
	■	6		■	■	■	■	
	■		■	■	7			
■	■	■	8			■	■	■
9				■	■	10	■	11
	■	■	■	■	12		■	
13			14	■	■	15		
■	■	■	16				■	■

5016ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಣಾಳಿಕೆ 2.ಪ್ರಣವ 4.ಪಲ್ಲವಿ 6.ಉತ್ತರ 7.ಸಮೂಹಗಾನ 10.ಬವಣೆ 11.ಬಣ್ಣನೆ 13.ಪಗಾರ 14.ರತ್ನಪಡಿ

ಮೇಲಿಂದ ಕೆಳಕ್ಕೆ:
1.ಪ್ರತಾಪ 2.ಪ್ರಖರ 3.ವರ್ತಮಾನ 5.ವಿಲಾಸ 6.ಉದಾಹರಣೆ 8.ನವಾಬ 9.ಪಶ್ಚಾತ್ತಾಪ 10.ಬರ್ಬರ 12.ನೆಗಡಿ

ಸುಡೊಕು 5403

	9			3			6	
4					7		2	9
	8	3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5402 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

ಶ್ರೀಲಂಕಾದ ಮಾಜಿ ಹಣಕಾಸು ಸಚಿವರಿಗೆ ಅಧಿಕಾರಿಗಳ ಮಾಹಿತಿ

ದೇಶ ತೊರೆಯದಂತೆ ಬಸಿಲ್‌ಗೆ ತಡೆ

ಕೊಲಂಬೊ (ಪಿಟಿಐ/ರಾಯಿಟರ್ಸ್): ದೇಶ ಬಿಟ್ಟು ತೆರಳಲು ಯತ್ನಿಸಿದ ಮಾಜಿ ಹಣಕಾಸು ಸಚಿವ ಬಸಿಲ್ ರಾಜಪಕ್ಸ ಅವರನ್ನು ತಡೆದು ನಿಲ್ಲಿಸಿರುವುದಾಗಿ ಕೊಲಂಬೊ ಅಂತರರಾಷ್ಟ್ರೀಯ ನಿಲ್ದಾಣದ ವಲಸೆ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ಬಸಿಲ್ ಅವರು ಅಧ್ಯಕ್ಷ ಗೊಟಬಯ ರಾಜಪಕ್ಸ ಅವರ ತಮ್ಮ. ಅಮೆರಿಕ ಪೌರತ್ವವನ್ನೂ ಹೊಂದಿರುವ ಬಸಿಲ್ ರಾಜಪಕ್ಸ ಎಲ್ಲಿಗೆ ಹೋಗಲು ಪ್ರಯತ್ನ ನಡೆಸಿದ್ದರು ಎಂಬುದು ಸದ್ಯ ಸ್ಪಷ್ಟವಾಗಿಲ್ಲ.


ಬಸಿಲ್ ರಾಜಪಕ್ಸ

ಆಹಾರ, ಇಂಧನ ಮುಂತಾದ ಅಗತ್ಯ ವಸ್ತುಗಳ ಕೊರತೆ ಖಂಡಿಸಿ ಜನರು ಬೀದಿಗಿಳಿದು ಉಗ್ರ ಹೋರಾಟ ನಡೆಸಿದ ಬಳಿಕ ಏಪ್ರಿಲ್‌ನಲ್ಲಿ ಬಸಿಲ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಜೂನ್‌ನಲ್ಲಿ ಸಂಸದ ಸ್ಥಾನಕ್ಕೂ ರಾಜೀನಾಮೆ ಸಲ್ಲಿಸಿದ್ದರು.

ಈ ಮಧ್ಯೆ, ದೇಶದ ಅಗ್ರ ನಾಯಕರಿಗೆ ದೇಶ ಬಿಟ್ಟು ತೆರಳಲು ಅನುವು ಮಾಡಿಕೊಡದಂತೆ ವಲಸೆ ಅಧಿಕಾರಿಗಳ ಮೇಲೆ ತೀವ್ರ ಒತ್ತಡವಿದೆ ಎಂದು ವಲಸೆ ಅಧಿಕಾರಿಗಳ ಸಂಘದ ಅಧ್ಯಕ್ಷ ಕೆ.ಎ.ಎಸ್ ಕನುಗಾಲ ಹೇಳಿದ್ದಾರೆ. ಬಸಿಲ್ ರಾಜಪಕ್ಸ ಅವರು ವಿಮಾನ ನಿಲ್ದಾಣದ ಲಾಂಜ್‌ನಲ್ಲಿರುವ ಚಿತ್ರವನ್ನು ಸ್ಥಳೀಯ ಮಾಧ್ಯಮವೊಂದು ಪ್ರಸಾರ ಮಾಡಿದ್ದು, ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಇಂದು ರಾಜೀನಾಮೆ: ಅಧ್ಯಕ್ಷ ಗೊಟಬಯ ಮಾಹಿತಿ

ಜನರ ಆಕ್ರೋಶ ಕಟ್ಟೆಯೊಡೆದು, ದೇಶವ್ಯಾಪಿ ಪ್ರತಿಭಟನೆಗಳು ನಡೆಯುತ್ತಿರುವ ನಡುವೆಯೇ, ಜುಲೈ 13ರಂದು ರಾಜೀನಾಮೆ ನೀಡುವುದಾಗಿ ಅಧ್ಯಕ್ಷ ಗೊಟಬಯ ರಾಜಪಕ್ಸ ತಿಳಿಸಿದ್ದಾರೆ.

ಈ ಕುರಿತು ಅವರು ಸಂಸತ್‌ನ ಸ್ಪೀಕರ್ ಯಾಪಾ ಅಬೇವರ್ದೆನಾ ಹಾಗೂ ಪ್ರಧಾನಿ ರಾನಿಲ್ ವಿಕ್ರಮಸಿಂಘೆ ಅವರಿಗೆ ಮಾಹಿತಿ ನೀಡಿದ್ದಾರೆ. ಆದರೆ, ಗೊಟಬಯ ಅವರು ಎಲ್ಲಿದ್ದಾರೆ ಎಂಬ ಬಗ್ಗೆ ಈ ವರೆಗೆ ಮಾಹಿತಿ ಇಲ್ಲ ಎಂದು ಮೂಲಗಳು ಹೇಳಿವೆ.

ತಾಪಮಾನ ಹೆಚ್ಚಳ: ಚೀನಾ, ಬ್ರಿಟನ್‌ನಲ್ಲಿ ಜನರ ಪರದಾಟ

ಮ್ಯಾಡ್ರಿಡ್/ಬೀಜಿಂಗ್ (ಎಎಫ್‌ಪಿ/ರಾಯಿಟರ್ಸ್): ಯುರೋಪ್‌ನ ಹಲವು ರಾಷ್ಟ್ರಗಳು ಹಾಗೂ ಚೀನಾದ 10ಕ್ಕೂ ಹೆಚ್ಚು ನಗರಗಳಲ್ಲಿ ಅಧಿಕ ತಾಪಮಾನ ದಾಖಲಾಗಿದ್ದು, ಜನರು ಪರದಾಡುವಂತಾಗಿದೆ.

ಚೀನಾದ ವಾಣಿಜ್ಯನಗರಿ ಶಾಂಘೈ ಸೇರಿದಂತೆ ಹಲವು ನಗರಗಳಲ್ಲಿ ಬಿಸಿಲಿನ ತಾಪದಿಂದ ಬಳಲಿದ ಜನರು ತಂಪು ಪ್ರದೇಶಗಳತ್ತ ಮುಖ ಮಾಡಿದ್ದಾರೆ. ಬಿಸಿಲಿನ ಝಳದಿಂದಾಗಿ ರಸ್ತೆಗಳು, ಚಾವಣಿಗಳು ಕಾದ ಕಾವಲಿಯಂತಾಗಿದೆ.

ಶಾಂಘೈ ಸೇರಿದಂತೆ 86 ನಗರಗಳಲ್ಲಿ ಮಂಗಳವಾರ 'ರೆಡ್ ಅಲರ್ಟ್' ಘೋಷಿಸಲಾಗಿತ್ತು. ಮುಂದಿನ 24 ಗಂಟೆಗಳಲ್ಲಿ ತಾಪಮಾನ 40 ಡಿಗ್ರಿ ಸೆ. ದಾಟಲಿದೆ ಎಂದು ಎಚ್ಚರಿಸಲಾಗಿದೆ. ಅಲ್ಲದೇ, ಕಟ್ಟಡ ನಿರ್ಮಾಣ ಸೇರಿ ದಂತೆ ಇತರ ಕಾಮಗಾರಿಗಳನ್ನು ಸ್ಥಗಿತಗೊಳಿಸಲು ಆದೇಶಿಸಲಾಗಿದೆ.

ಸ್ಪೇನ್, ಪೋರ್ಚುಗಲ್ ಸೇರಿದಂತೆ ಯುರೋಪ್‌ನ ಕೆಲ ರಾಷ್ಟ್ರಗಳಲ್ಲಿಯೂ ಬಿಸಿಲಿನ ಝಳ ಹೆಚ್ಚಾಗಿದೆ. ಬರುವ ದಿನಗಳಲ್ಲಿ ಫ್ರಾನ್ಸ್ ಹಾಗೂ ಬ್ರಿಟನ್‌ನಲ್ಲಿ ತಾಪಮಾನ ಇನ್ನಷ್ಟು ಹೆಚ್ಚಲಿದೆ ಎಂದು ಮುನ್ಸೂಚನೆ ನೀಡಲಾಗಿದೆ.

ಪಿಎಸ್‌ಐ ಅಕ್ರಮ: ಗಣಪತಿ ಭಟ್ ವಿಚಾರಣೆ

ಒಂದನೇ ಪುಟದಿಂದ

ಬಿಜೆಪಿ, ಕಾಂಗ್ರೆಸ್ ಮುಖಂಡರ ಆಪ್ತ: ಕೃಷಿಕರಾಗಿರುವ ಗಣಪತಿ ಅವರು ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷದ ಹಲವು ಮುಖಂಡರ ಆಪ್ತರಾಗಿ ಗುರುತಿಸಿಕೊಂಡಿರುವುದಾಗಿ ಹೇಳಲಾಗುತ್ತಿದೆ.

'ಹಿರಿಯ ಪೊಲೀಸ್ ಅಧಿಕಾರಿಗಳ ಮೂಲಕ ಕೆಲ ಪೊಲೀಸರನ್ನೂ ಗಣಪತಿ ವರ್ಗಾವಣೆ ಮಾಡಿಸಿದ್ದರು. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಸೇರಿದಂತೆ ಕೆಲ ಠಾಣೆಗಳಿಗೆ ಇನ್‌ಸ್ಪೆಕ್ಟರ್, ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳಿಗೆ ತಮ್ಮವರನ್ನೇ ನಿಯೋಜಿಸಲು ಲಾಬಿ ಮಾಡುತ್ತಿದ್ದರು' ಎಂಬ ಆರೋಪವೂ ಅವರ ಮೇಲಿದೆ.

ಈ ಹಿಂದೆ, ಕಾಂಗ್ರೆಸ್ ಮುಖಂಡ, ಹಳಿಯಾಳ ಶಾಸಕ ಆರ್.ವಿ.ದೇಶಪಾಂಡೆ ಅವರ ಬೆಂಬಲಿಗರಾಗಿ ಗುರುತಿಸಿಕೊಂಡಿದ್ದ ಗಣಪತಿ ಭಟ್, ಅಣಲೆಬೈಲ್ ಗ್ರಾಮ ಪಂಚಾಯಿತಿಯ ಹೇರೂರು ವಾರ್ಡ್‌ಗೆ ಕಾಂಗ್ರೆಸ್ ಬೆಂಬಲಿತ ಸದಸ್ಯರಾಗಿಯೂ ಹಿಂದೊಮ್ಮೆ ಆಯ್ಕೆಯಾಗಿದ್ದರು.

ಈಚೆಗೆ ವಿಧಾನಸಭಾಧ್ಯಕ್ಷ ಹಾಗೂ ಶಿರಸಿ-ಸಿದ್ದಾಪುರ ಕ್ಷೇತ್ರದ ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಹಾಗೂ ಕಾರ್ಮಿಕ ಸಚಿವರೂ ಆಗಿರುವ ಯಲ್ಲಾಪುರ ಶಾಸಕ ಶಿವರಾಮ ಹೆಬ್ಬಾರ ಅವರ ಆಪ್ತ ವಲಯದ ಲ್ಲಿಯೂ ಕಾಣಿಸಿಕೊಂಡಿದ್ದರು.

ಎಡಿಜಿಪಿ ಕಸ್ಟಡಿ ಮುಕ್ತಾಯ: 'ಎಡಿಜಿಪಿ ಅಮ್ರಿತ್ ಪೌಲ್ ಅವರ ಕಸ್ಟಡಿ ಅವಧಿ ಬುಧವಾರ ಮುಗಿಯಲಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ.

'ಗೃಹಸಚಿವರ ಕಚೇರಿಗೆ ಬರುತ್ತಿದ್ದುದು ನಿಜವೆ?'

ಬೆಂಗಳೂರು: 'ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದಿರುವ ಗಣಪತಿ ಭಟ್ ಗೃಹ ಸಚಿವರ ಕಚೇರಿಗೆ ಬಂದು ಹೋಗುತ್ತಿದ್ದರು ಎಂಬುದು ನಿಜವೆ' ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

ಈ ಕುರಿತು ಮಂಗಳವಾರ ಟ್ವೀಟ್ ಮಾಡಿರುವ ಅವರು, 'ಸಿಐಡಿ ವಶದಲ್ಲಿರುವ ಗಣಪತಿ ಭಟ್‌ಗೂ ಗೃಹ ಸಚಿವರ ಕಚೇರಿಗೂ ಏನು ಸಂಬಂಧ? ಪಿಎಸ್‌ಐ ನೇಮಕಾತಿ ಹಗರಣ ನಡೆಯುತ್ತಿದ್ದ ದಿನಗಳ ಅವಧಿಗೆ ಸಂಬಂಧಿಸಿದ ಗೃಹ ಸಚಿವರ ಕಚೇರಿ ಹಾಗೂ ಮನೆಯ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಬಹಿರಂಗಪಡಿಸುತ್ತಾರೆಯೆ' ಎಂದು ಕೇಳಿದ್ದಾರೆ.

'ಈ ಪ್ರಕರಣದ ತನಿಖೆ ಸೂತ್ರಧಾರಿಗಳನ್ನು ಬಿಟ್ಟು ಪಾತ್ರಧಾರಿಗಳ ಸುತ್ತ ಗಿರಕಿ ಹೊಡೆಯುತ್ತಿದೆ ಎಂದು ನಾನು ಮೊದಲೇ ಹೇಳಿದ್ದೆ. ಜನರಿಗೆ ವದಂತಿಗಳಿಂದ ಮುಕ್ತಿ ಕೊಟ್ಟು ಪಾರದರ್ಶಕವಾಗಿರಬೇಕಾದುದು ಗೃಹ ಸಚಿವರ ಕರ್ತವ್ಯ. ನ್ಯಾಯಾಂಗ ತನಿಖೆಯಿಂದ ಮಾತ್ರ ಈ ಹಗರಣಕ್ಕೆ ಮುಕ್ತಿ ಸಿಗಲಿದೆ' ಎಂದಿದ್ದಾರೆ.

ವೀಸಾ ನೀಡಲು ಲಂಚ: ಕಾರ್ತಿ ಆಪ್ತನಿಗೆ ನೋಟಿಸ್

ನವದೆಹಲಿ (ಪಿಟಿಐ): ಚೀನಾದ 263 ಪ್ರಜೆಗಳಿಗೆ ವೀಸಾ ಮಂಜೂರಾತಿಗೆ ಲಂಚ ಪಡೆಯಲಾಗಿದೆ ಎಂಬ ಪ್ರಕರಣದಲ್ಲಿ ದೆಹಲಿ ಹೈಕೋರ್ಟ್ ಮಂಗಳವಾರ ಮಾಜಿ ಸಂಸದ ಕಾರ್ತಿ ಚಿದಂಬರಂ ಅವರ ಆಪ್ತ, ಲೆಕ್ಕಪರಿಶೋಧಕ ಎಸ್.ಭಾಸ್ಕರರಾಮನ್ ಅವರಿಗೆ ನೋಟಿಸ್ ನೀಡಿದೆ. ಕೆಳಹಂತದ ಕೋರ್ಟ್ ಭಾಸ್ಕರರಾಮನ್ ಅವರಿಗೆ ಜಾಮೀನು ನೀಡಿತ್ತು.

ಇದನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿಗೆ ಸಂಬಂಧಿಸಿದಂತೆ ಈಗ ನೋಟಿಸ್ ಜಾರಿ ಮಾಡಲಾಗಿದೆ.

ಈ ಪ್ರಕರಣದ ವಿಚಾರಣೆಯನ್ನು ಸೆಪ್ಟೆಂಬರ್ 27ಕ್ಕೆ ನಿಗದಿಪಡಿಸಿದೆ.

ತನಿಖಾ ಸಂಸ್ಥೆಯು ಭಾಸ್ಕರರಾಮನ್ ಅವರನ್ನು ಮೇ 18ರಂದು ಬಂಧಿಸಿದ್ದು, ವಿಚಾರಣಾ ನ್ಯಾಯಾಲಯ ಜೂನ್ 9ರಂದು ಜಾಮೀನು ನೀಡಿತ್ತು. ಉಲ್ಲೇಖಿತ ಪ್ರಕರಣ 2011ರಲ್ಲಿ ನಡೆದಿತ್ತು.

ಆಗ ಕಾರ್ತಿ ಚಿದಂಬರಂ ಅವರ ತಂದೆ ಪಿ.ಚಿದಂಬರಂ ಅವರು ಕೇಂದ್ರ ಹಣಕಾಸು ಸಚಿವರಾಗಿದ್ದರು.

'ಜಾಗತಿಕ ತುರ್ತುಸ್ಥಿತಿಯಾಗಿ 'ಕೋವಿಡ್'

ಲಂಡನ್: ಕೋವಿಡ್–19 ಪತ್ತೆಯಾದ ಎರಡೂವರೆ ವರ್ಷಗಳ ನಂತರವೂ ಅದು ಜಾಗತಿಕ ಆರೋಗ್ಯ ತುರ್ತುಸ್ಥಿತಿಯಾಗಿ ಉಳಿದಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮಂಗಳವಾರ ಹೇಳಿದೆ.

'ಹಲವು ದೇಶಗಳಲ್ಲಿ ಇನ್ನೂ ವರದಿಯಾಗುತ್ತಿರುವ ಕೋವಿಡ್ ಪ್ರಕರಣಗಳು, ಪತ್ತೆಯಾಗುತ್ತಿರುವ ಉಪ ತಳಿಗಳು ಹಾಗೂ ಆರೋಗ್ಯ ಸೇವೆಯ ಮೇಲೆ ಉಂಟಾಗುತ್ತಿರುವ ಒತ್ತಡದಿಂದಾಗಿ ಕೋವಿಡ್–19 ಇನ್ನೂ ಜಾಗತಿಕ ಆರೋಗ್ಯ ತುರ್ತುಸ್ಥಿತಿಯಾಗಿ ಉಳಿದಿದೆ' ಎಂದು ವಿಶ್ವಸಂಸ್ಥೆಯ ತುರ್ತು ಸಮಿತಿಯ ಸ್ವತಂತ್ರ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಕೊರೊನಾ: ಫ್ರಿಡ್ಜ್‌ನಲ್ಲಿಟ್ಟ ಮಾಂಸದಲ್ಲಿ 30 ದಿನ ಬದುಕಬಲ್ಲದು'

ವಾಷಿಂಗ್ಟನ್: ಕೋವಿಡ್–19ಗೆ ಕಾರಣವಾಗುವ 'ಸಾರ್ಸ್–ಕೋವ್–2' ವೈರಸ್ ರೆಫ್ರಿಜರೇಟರ್ ಅಥವಾ ಫ್ರೀಜರ್‌ನಲ್ಲಿಟ್ಟ ಮಾಂಸ ಮತ್ತು ಮೀನಿನ ಉತ್ಪನ್ನಗಳಲ್ಲಿ 30 ದಿನಗಳವರೆಗೆ ಜೀವಂತವಾಗಿರಬಲ್ಲದು ಎಂದು ಅಧ್ಯಯನವೊಂದು ಹೇಳಿದೆ.

ಈ ಕುರಿತ ಅಧ್ಯಯನ ವರದಿಯೊಂದು 'ಅಪ್ಲೈಡ್ ಅಂಡ್ ಎನ್ವಿರಾನ್‌ಮೆಂಟಲ್ ಮೈಕ್ರೊ ಬಯಾಲಜಿ' ಎಂಬ ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ. ಚಿಕನ್, ಗೋಮಾಂಸ, ಹಂದಿ ಮಾಂಸ, ಸಾಲ್ಮೊನ್ ಮೀನುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಅಧ್ಯಯನಕ್ಕೆ ಬಳಸಲಾಗಿದ್ದ ಮಾಂಸ ಮತ್ತು ಮೀನು ಉತ್ಪನ್ನಗಳನ್ನು ರೆಫ್ರಿಜರೇಷನ್ (4 ಡಿಗ್ರಿ ಸೆಲ್ಸಿಯಸ್) ಹಾಗೂ ಫ್ರೀಜರ್‌ನ (–20 ಡಿಗ್ರಿ ಸೆಲ್ಸಿಯಸ್) ತಾಪಮಾನಗಳಲ್ಲಿ ಶೇಖರಣೆ ಮಾಡಲಾಗಿತ್ತು ಎಂದು ಅಧ್ಯಯನ ಕೈಗೊಂಡ ತಂಡದ ಲೇಖಕ, ಅಮೆರಿಕದ ಕ್ಯಾಂಪ್‌ಬೆಲ್ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕಿ ಎಮಿಲಿ ಎಸ್.ಬೈಲಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಸೆ.5ರಂದು ಬ್ರಿಟನ್ ನೂತನ ಪ್ರಧಾನಿ ಹೆಸರು ಘೋಷಣೆ

ಲಂಡನ್ (ಪಿಟಿಐ): ಬೋರಿಸ್ ಜಾನ್ಸನ್ ರಾಜೀನಾಮೆಯಿಂದ ತೆರವಾಗಲಿರುವ ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ನೂತನ ನಾಯಕನ ಹೆಸರನ್ನು ಆಡಳಿತರೂಢ ಕನ್ಸರ್ವೇಟಿವ್ ಪಕ್ಷ (ಟೋರಿ) ಸೆಪ್ಟೆಂಬರ್ 5ರಂದು ಘೋಷಿಸಲಿದೆ ಎಂದು ಪಕ್ಷದ ನಾಯಕತ್ವ ಚುನಾವಣೆಯ ಸಮಿತಿಯು ಹೇಳಿದೆ.

ಟೋರಿ ಸಂಸದರ 1922 ಬ್ಯಾಕ್‌ಬೆಂಚ್ ಸಮಿತಿಯು ಸೋಮವಾರ ಚುನಾವಣಾ ವೇಳಾಪಟ್ಟಿ ಮತ್ತು ನಿಯಮಗಳನ್ನು ಪ್ರಕಟಿಸಿದೆ. ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಬುಧವಾರ ಆರಂಭವಾಗಲಿದ್ದು, ಅಂದೇ ಕೊನೆ ದಿನವೂ ಆಗಿದೆ.

ಹೊಸ ನಿಯಮಾವಳಿ ಪ್ರಕಾರ, ಟೋರಿಯ ನಾಯಕ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮನಿರ್ದೇಶಿತವಾಗಲು ಮೊದಲು ಪಕ್ಷದ ಕನಿಷ್ಠ 20 ಸಂಸದರ ಬೆಂಬಲ ಬೇಕು.

ಸಂಸದರಿಂದ ಮೊದಲ ಸುತ್ತಿನ ಮತದಾನ ಬುಧವಾರ ನಡೆಯಲಿದೆ.

ಇದರಲ್ಲಿ ಕನಿಷ್ಠ 30 ಮತಗಳನ್ನು ಪಡೆದ ಅಭ್ಯರ್ಥಿಗಳು ಗುರುವಾರ ನಡೆಯುವ ಎರಡನೇ ಸುತ್ತಿನ ಚುನಾವಣೆಗೆ ಪ್ರವೇಶ ಪಡೆಯಲಿದ್ದಾರೆ.

'ಐ2ಯು2' ಶೃಂಗಸಭೆ: ಆಹಾರ ಭದ್ರತೆ ಬಗ್ಗೆ ಚರ್ಚೆ

ವಾಷಿಂಗ್ಟನ್ (ಪಿಟಿಐ): ಈ ವಾರ ಇಸ್ರೇಲ್ ಪ್ರವಾಸ ಕೈಗೊಂಡಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು, 'ಐ2ಯು2' ಸಂಘಟನೆಯ ಮೊದಲ ವರ್ಚುವಲ್ ಶೃಂಗಸಭೆಯಲ್ಲಿ ಭಾರತ, ಇಸ್ರೇಲ್ ಹಾಗೂ ಯುಎಇ ನಾಯಕರೊಂದಿಗೆ ಚರ್ಚೆ ನಡೆಸಲಿದ್ದಾರೆ.


'ಅಧ್ಯಕ್ಷ ಬೈಡನ್ ಅವರು ಜುಲೈ 13ರಿಂದ 16ರ ವರೆಗೆ ಪಶ್ಚಿಮ ಏಷ್ಯಾ ರಾಷ್ಟ್ರಗಳ ಪ್ರವಾಸ ಕೈಗೊಂಡಿದ್ದಾರೆ. 'ಐ2ಯು2'ದ ಮೊದಲ ಶೃಂಗಸಭೆ ಗುರುವಾರ ನಡೆಯಲಿದೆ' ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜೇಕ್ ಸುಲ್ಲಿವನ್ ತಿಳಿಸಿದ್ದಾರೆ.

'ಉಕ್ರೇನ್–ರಷ್ಯಾ ಯುದ್ಧದ ಹಿನ್ನೆಲೆಯಲ್ಲಿ ಜಾಗತಿಕವಾಗಿ ಆಹಾರ ಮತ್ತು ಇಂಧನ ಸಮಸ್ಯೆ ಕಂಡುಬಂದಿದೆ. ಆದರೆ, ಆಹಾರ ಭದ್ರತೆ ಕುರಿತ ಚರ್ಚೆಗೆ ಈ ಶೃಂಗಸಭೆಯಲ್ಲಿ ಹೆಚ್ಚು ಒತ್ತು ನೀಡಲಾಗುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ, ಇಸ್ರೇಲ್ ಪ್ರಧಾನಿ ಯಾಯಿರ್ ಲಾಪಿಡ್ ಹಾಗೂ ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಝಾಯೇದ್ ಅಲ್ ನಹ್ಯಾನ್ ಅವರೊಂದಿಗೆ ಬೈಡನ್ ಅವರು ಸಭೆ ನಡೆಸುವರು' ಎಂದು ತಿಳಿಸಿದ್ದಾರೆ.

ನಾಲ್ಕು ರಾಷ್ಟ್ರಗಳ ಸಂಘಟನೆಯೇ 'ಐ2ಯು2'. ಇಲ್ಲಿ, 'ಐ' ಎಂಬುದು ಭಾರತ ಹಾಗೂ ಇಸ್ರೇಲ್ ಅನ್ನು ಸೂಚಿಸಿದರೆ, 'ಯು' ಎಂಬುದು ಅಮೆರಿಕ ಹಾಗೂ ಸಂಯುಕ್ತ ಅರಬ್ ಸಂಸ್ಥಾನಗಳನ್ನು (ಯುಎಇ) ಸೂಚಿಸುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16216
ಇಂದಿನ ಅಂತ್ಯ	16058
▼	157
ದಿನದ ಗರಿಷ್ಠ	16158

ವಿನಿಮಯ ದರ

$ ಡಾಲರ್	79.59
£ ಪೌಂಡ್	94.21
€ ಯುರೊ	79.7
¥ ಯೆನ್ (100ಕ್ಕೆ)	58.22

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ	₹500
12 ಮೊಟ್ಟೆಗೆ	₹70

ಮೈಸೂರು

100 ಮೊಟ್ಟೆಗೆ	₹560

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1615(1605)
ಸೋಯಾ (ರಿಫೈನ್ಡ್)	₹1270(1275)
ಸೂರ್ಯಕಾಂತಿ (ರಿಫೈನ್ಡ್)	₹1600 (1600)
ಪಾಮೋಲಿನ್	₹1205 (1210)

ತೆಂಗು ಧಾರಣೆ (ಸಾವಿರಕ್ಕೆ)



ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಕೊಬ್ಬರಿ ಧಾರಣೆ



ಅರಸೀಕೆರೆ	₹13000-14510
ತುರುವೇಕೆರೆ	₹14000-14500

ಬೆಂಗಳೂರು ಈರುಳ್ಳಿ ಧಾರಣೆ



ಕ್ವಿಂಟಲ್‌ಗೆ

ದೊಡ್ಡ	₹1500-1800
ಮಧ್ಯಮ	₹1000-1500
ಸಣ್ಣ	₹500-1000

ಹಣದುಬ್ಬರ ಅತ್ಯಲ್ಪ ಇಳಿಕೆ, ರೆಪೊ ಹೆಚ್ಚಳ ಸಾಧ್ಯತೆ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ದರವು ಜೂನ್ ತಿಂಗಳಲ್ಲಿ ಶೇಕಡ 7.01ರಷ್ಟಾಗಿದೆ. ಮೇ ತಿಂಗಳಲ್ಲಿ ದಾಖಲಾಗಿದ್ದ ಶೇ 7.04ಕ್ಕೆ ಹೋಲಿಸಿದರೆ, ಅತ್ಯಲ್ಪ ಇಳಿಕೆ ಕಂಡಿದೆ. ಆದರೆ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿಗದಿ ಮಾಡಿಕೊಂಡಿರುವ ಮಿತಿಗಿಂತ (ಶೇ 6) ಹೆಚ್ಚಿನ ಮಟ್ಟದಲ್ಲಿಯೇ ಉಳಿದಿದೆ.

ಇದರಿಂದಾಗಿ, ಆರ್‌ಬಿಐ ಮುಂದಿನ ದಿನಗಳಲ್ಲಿ ರೆಪೊ ದರವನ್ನು ಇನ್ನಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಜೂನ್ ತಿಂಗಳ ಅಂಕಿ–ಅಂಶವನ್ನೂ ಪರಿಗಣಿಸಿದರೆ ಹಣದುಬ್ಬರವು ಸತತ ಆರು ತಿಂಗಳಿನಿಂದ ಆರ್‌ಬಿಐ ಮಿತಿಗಿಂತ ಹೆಚ್ಚಿನ ಮಟ್ಟದಲ್ಲಿ ಉಳಿದಂತಾಗಿದೆ.

ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಮೇ ತಿಂಗಳಲ್ಲಿ 12 ತಿಂಗಳ ಗರಿಷ್ಠ ಮಟ್ಟವಾದ ಶೇ 19.6ಕ್ಕೆ ತಲುಪಿದೆ. ಏಪ್ರಿಲ್ ತಿಂಗಳಲ್ಲಿ ಇದು ಶೇ 6.7ರಷ್ಟು ಇತ್ತು.

ಚಿಲ್ಲರೆ ಹಣದುಬ್ಬರ ಪ್ರಮಾಣ (%)	
ಮಾಂಸ, ಮೀನು	8.61
ಮೊಟ್ಟೆ	-5.48
ಹಾಲು, ಹಾಲಿನ ಉತ್ಪನ್ನ	6.08
ಎಣ್ಣೆ, ಕೊಬ್ಬಿನ ಅಂಶದ ಪದಾರ್ಥ	9.36
ತರಕಾರಿ	17.37
ಸಂಬಾರ ಪದಾರ್ಥ	11.04
ಆಹಾರ, ಪಾನೀಯ	7.56
ಬಟ್ಟೆ, ಪಾದರಕ್ಷೆ	9.52

(ಜೂನ್ ತಿಂಗಳ ಹಣದುಬ್ಬರ. ಮಾಹಿತಿ: ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯ)

ಪ್ರತಿ ಉತ್ಪನ್ನದ ಬೆಲೆಯ ಮೇಲೆ ನಿಗಾ ಇರಿಸುವುದು ಹಾಗೂ ಹಣದುಬ್ಬರದ ಮೇಲಿನ ನಿಖರ ದಾಳಿಯು ಮುಂದುವರಿಯಬೇಕಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. 'ಆರ್‌ಬಿಐ ಅಂದಾಜು ಮಾಡಿರುವಂತೆ, ಹಣಕಾಸು ವರ್ಷದ ದ್ವಿತೀಯಾರ್ಧ ಶುರುವಾಗುವವರೆಗೆ ಆರ್‌ಬಿಐ ಮತ್ತು ಸರ್ಕಾರ ಎಚ್ಚರಿಕೆ ವಹಿಸಬೇಕಿದೆ' ಎಂದು ನಿರ್ಮಲಾ ಹೇಳಿದ್ದಾರೆ.

'ಅಗತ್ಯ ವಸ್ತುಗಳ ಬೆಲೆಯ ಮೇಲೆ ನಾನು ಕಣ್ಣಿಡುತ್ತೇನೆ' ಎಂದೂ ನಿರ್ಮಲಾ ಭರವಸೆ ನೀಡಿದ್ದಾರೆ. ಏಪ್ರಿಲ್‌ನಿಂದ ಜೂನ್‌ವರೆಗಿನ ಅವಧಿಯಲ್ಲಿ ಹಣದುಬ್ಬರ ಪ್ರಮಾಣವು ಸರಾಸರಿ ಶೇ 7.3ರಷ್ಟು ದಾಖಲಾಗಿದೆ. ಇದು ಆರ್‌ಬಿಐ ಅಂದಾಜಿಗಿಂತ (ಶೇ 7.5) ತುಸು ಕಡಿಮೆ.

ಹಣದುಬ್ಬರದ ಪ್ರಮಾಣ ತೀರ್ಮಾನಿಸುವಲ್ಲಿ ಮುಖ್ಯ ಪಾತ್ರ ವಹಿಸುವ ಆಹಾರ ವಸ್ತುಗಳ ಬೆಲೆಯು ಹೆಚ್ಚಿನ ಮಟ್ಟದಲ್ಲಿಯೇ ಇರುವ ಸಾಧ್ಯತೆ ಇದೆ ಎಂದು ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ರೂಪಾಯಿ ಮೌಲ್ಯ ಕುಸಿಯುತ್ತಲೇ ಇರುವ ಕಾರಣ, ಆಮದು ಮಾಡಿಕೊಳ್ಳುವ ಸರಕುಗಳ ಬೆಲೆ ಜಾಸ್ತಿ ಆಗುವ ಸಾಧ್ಯತೆ ಹೆಚ್ಚಿದೆ. ರಷ್ಯಾದಿಂದ ಕಚ್ಚಾ ತೈಲವನ್ನು ರಿಯಾಯಿತಿ ಬೆಲೆಗೆ ತರಿಸಿಕೊಳ್ಳುತ್ತಿರುವುದು ಹಾಗೂ ವಿದೇಶಿ ವಿನಿಮಯವನ್ನು ಕಾಪಿಟ್ಟುಕೊಳ್ಳಲು ಆರ್‌ಬಿಐ ಕ್ರಮ ಕೈಗೊಂಡಿರುವುದು ಸಮಸ್ಯೆಯ ತೀವ್ರತೆಯನ್ನು ತುಸು ಕಡಿಮೆ ಮಾಡಬಹುದು' ಎಂದು ವಿಶ್ಲೇಷಕ ಸುಮನ್ ಚೌಧರಿ ಹೇಳಿದ್ದಾರೆ.

ಜುಲೈ ತಿಂಗಳ ಹಣದುಬ್ಬರ ಪ್ರಮಾಣವು ಜೂನ್ ತಿಂಗಳ ಮಟ್ಟಕ್ಕಿಂತ ಶೇ 0.20ರಿಂದ ಶೇ 0.30ರಷ್ಟು ಜಾಸ್ತಿ ಆಗಬಹುದು ಎಂಬ ಅಂದಾಜು ಇದೆ. ಹೀಗಾಗಿ, ಆರ್‌ಬಿಐ ರೆಪೊ ದರವನ್ನು ಶೇ 0.35ರವರೆಗೆ ಹೆಚ್ಚಿಸುವ ಸಾಧ್ಯತೆ ಇದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಹೇಳಿದೆ.

ಬ್ಯಾಂಕ್ ಆಫ್ ಬರೋಡ ಶೈಕ್ಷಣಿಕ ಸಾಲ

ಬೆಂಗಳೂರು: ನರ್ಸರಿಯಿಂದ ಆರಂಭಿಸಿ ಉನ್ನತ ಶಿಕ್ಷಣದ ಹಂತದವರೆಗೆ ವಿದ್ಯಾರ್ಥಿಗಳಿಗೆ ಹಲವು ಬಗೆಯ ಸಾಲಗಳನ್ನು ವಿತರಿಸುವುದಾಗಿ ಬ್ಯಾಂಕ್ ಆಫ್ ಬರೋಡ ಹೇಳಿದೆ.

'ಬರೋಡ ವಿದ್ಯಾ' ಹೆಸರಿನಲ್ಲಿ ಹನ್ನೆರಡನೆಯ ತರಗತಿವರೆಗಿನ ಶಾಲಾ ಶಿಕ್ಷಣಕ್ಕೆ ₹ 4 ಲಕ್ಷದವರೆಗೆ ಸಾಲ ನೀಡಲಾಗುತ್ತದೆ. 'ಬರೋಡ ಗ್ಯಾನ್' ಹೆಸರಿನಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿ, ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಸಾಲ ವಿತರಣೆ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಎಂಬಿಎ, ಎಂಸಿಎ, ಎಂಎಸ್‌ನಂತಹ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 'ಬರೋಡ ಸ್ಕಾಲರ್' ಹೆಸರಿನಲ್ಲಿ ಗರಿಷ್ಠ ₹ 80 ಲಕ್ಷದವರೆಗೆ ಸಾಲ ವಿತರಣೆ ಮಾಡಲಾಗುತ್ತದೆ. ವಿದೇಶಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ ಸಾಲ ಸಿಗುತ್ತದೆ.

ತಾಂತ್ರಿಕ ಶಿಕ್ಷಣ ಪಡೆಯುವವರಿಗೆ ಕೌಶಲ ಸಾಲ ಯೋಜನೆಯ ಅಡಿಯಲ್ಲಿ ಗರಿಷ್ಠ ₹ 1.50 ಲಕ್ಷದವರೆಗೆ ಸಾಲ ನೀಡಲಾಗುತ್ತದೆ.

5ಜಿ ಹರಾಜಿನಲ್ಲಿ ಅದಾನಿ, ಏರ್‌ಟೆಲ್, ಜಿಯೊ

ನವದೆಹಲಿ (ಪಿಟಿಐ): ಗೌತಮ್ ಅದಾನಿ ನೇತೃತ್ವದ ಅದಾನಿ ಡೇಟಾ ನೆಟ್‌ವರ್ಕ್ಸ್, ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಗಳು 5ಜಿ ತರಂಗಾಂತರಗಳ ಹರಾಜಿನಲ್ಲಿ ಪಾಲ್ಗೊಳ್ಳಲು ಅರ್ಜಿ ಸಲ್ಲಿಸಿವೆ ಎಂದು ಕೇಂದ್ರ ದೂರಸಂಪರ್ಕ ಇಲಾಖೆ ತಿಳಿಸಿದೆ.

ಅರ್ಜಿಗಳನ್ನು ಹಿಂಪಡೆಯಲು ಜುಲೈ 19ರವರೆಗೆ ಅವಕಾಶ ಇದೆ.

5ಜಿ ತರಂಗಾಂತರ ಹರಾಜು ಪ್ರಕ್ರಿಯೆ ಜುಲೈ 26ರಿಂದ ಶುರುವಾಗಲಿದೆ. ದೂರಸಂಪರ್ಕ ಉದ್ಯಮದಲ್ಲಿ ನೆಲೆಗಟ್ಟಿ ಮಾಡಿಕೊಳ್ಳಲು ಜಿಯೊ ಹಾಗೂ ಏರ್‌ಟೆಲ್ ಯತ್ನಿಸುತ್ತಿವೆ. ಈಗ ಅದಾನಿ ಸಮೂಹ ಕೂಡ 5ಜಿ ತರಂಗಾಂತರ ಖರೀದಿಗೆ ಉತ್ಸುಕತೆ ತೋರಿಸಿರುವ ಕಾರಣ, ಕೆಲವು ತರಂಗಾಂತರಗಳಿಗೆ ಬಿಡ್ ಜೋರಾಗಿ ನಡೆಯುವ ಸಾಧ್ಯತೆ ಇದೆ.

ಖಾಸಗಿ ನೆಟ್‌ವರ್ಕ್ ಸೇವೆ ನೀಡಲು ತಾನು ತರಂಗಾಂತರ ಹರಾಜಿನಲ್ಲಿ ಭಾಗಿಯಾಗುತ್ತಿರುವುದಾಗಿ ಅದಾನಿ ಸಮೂಹವು ಶನಿವಾರ ಹೇಳಿದೆ. ಕನಿಷ್ಠ ₹ 4.3 ಲಕ್ಷ ಕೋಟಿ ಮೌಲ್ಯದ ತರಂಗಾಂತರಗಳನ್ನು ಹರಾಜಿಗೆ ಇರಿಸಲಾಗುತ್ತದೆ.

'ಅದಾನಿ ಸಮೂಹವು 5ಜಿ ತರಂಗಾಂತರ ಖರೀದಿಗೆ ಮುಂದಾಗಿರುವುದು ದೂರಸಂಪರ್ಕ ಉದ್ಯಮದಲ್ಲಿ ಈಗಾಗಲೇ ತೊಡಗಿಸಿಕೊಂಡಿರುವ ಕಂಪನಿಗಳ ಪಾಲಿಗೆ ನಕಾರಾತ್ಮಕ ಸುದ್ದಿ' ಎಂದು ಬ್ಯಾಂಕ್ ಆಫ್ ಅಮೆರಿಕ ಸೆಕ್ಯುರಿಟೀಸ್ ಸೋಮವಾರ ಹೇಳಿದೆ.

'ಮುಂಬರುವ ಹರಾಜು ಸಂದರ್ಭದಲ್ಲಿ ಅದಾನಿ ಸಮೂಹಕ್ಕೆ ತರಂಗಾಂತರ ಖರೀದಿಸಲು ಸಾಧ್ಯವಾದಲ್ಲಿ, ಖಾಸಗಿ ನೆಟ್‌ವರ್ಕ್‌ಗಾಗಿನ 5ಜಿ ತರಂಗಾಂತರಗಳ ಬೆಲೆ ಹೆಚ್ಚಳಕ್ಕೆ ಅದು ಕಾರಣವಾಗಬಹುದು. ಅಲ್ಲದೆ, ಮುಂದಿನ ದಿನಗಳಲ್ಲಿ ಅದಾನಿ ಸಮೂಹವು ಸಾರ್ವಜನಿಕರಿಗೆ ದೂರಸಂಪರ್ಕ ಸೇವೆ ಆರಂಭಿಸುವುದಕ್ಕೆ ದಾರಿ ಮಾಡಿಕೊಡಬಹುದು' ಎಂದು ಗೋಲ್ಡ್‌ಮನ್ ಸಾಚ್ಸ್ ಸಂಸ್ಥೆ ಹೇಳಿದೆ.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹111-439

ದ್ವಿತಳಿ (ಬಿ.ವಿ) ₹222-752

ಮುಂಬೈ ಧಾರಣೆ

ಶೇಂಗಾ

12-7-2022

ಜಾವಾ 70/80(ಹೊಸ)	11050-11100
ಜಾವಾ 80/90(ಹೊಸ)	10450-10500
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10850-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1625 (1615)
ಒಂದು ವಾರದ ಡೆಲಿವರಿ	1620 (1610)
ಸೋಯಾ ಕಚ್ಚಾ	1240 (1260)
ಪಾಮ್ ವಾರದ ಡೆಲಿವರಿ	1203 (1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1540(1540)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 50,675 (50,675)

ಬೆಳ್ಳಿ ಕೆ.ಜಿ 56,100 (56,745)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೊಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿ ಉತ್ತಮ	1,150-1,250
ಕಾಳು ಮೆಣಸು	470

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಭದ್ರಾವತಿ	
ರಾಶಿ	47199-49699
ಚನ್ನಗಿರಿ	
ರಾಶಿ	47036-49899
ಚಿತ್ರದುರ್ಗ	
ಆಪಿ	49219-49629
ಬೆಟ್ಟೆ	39110-39559
ಕೆಂಪುಗೋಟು	29200-29600
ರಾಶಿ	48739-49169
ಕಾರ್ಕಳ	
ಹೊಸತು	40000-45000
ಪುತ್ತೂರು	
ಕೋಕ	11000-26000
ಹೊಸತು	30500-43500
ಸಾಗರ	
ಬಿಳಿಗೋಟು	27729-28639
ಚಾಲಿ	35299-36409
ಕೋಕ	16989-32989
ಕೆಂಪುಗೋಟು	35699-35699
ರಾಶಿ	43319-48709
ಸಿಪ್ಪೆಗೋಟು	19850-20650
ಶಿವಮೊಗ್ಗ	
ಗೊರಬಲು	24200-38139
ರಾಶಿ	44009-49810
ಸರಕು	56089-80376
ಸಿದ್ದಾಪುರ	
ಬಿಳಿಗೋಟು	26399-32699
ಚಾಲಿ	34599-38799
ಕೋಕ	23469-32889
ಕೆಂಪುಗೋಟು	30911-32499
ರಾಶಿ	45099-48699
ತಟ್ಟಿಬೆಟ್ಟೆ	37219-46749
ಶಿರಸಿ	
ಬೆಟ್ಟೆ	31000-45099
ಬಿಳಿಗೋಟು	22599-32469
ಚಾಲಿ	30311-39071
ರಾಶಿ	43399-49399
ಸೊರಬ	
ರಾಶಿ	48500-48500
ಯಲ್ಲಾಪುರ	
ಬಿಳಿಗೋಟು	26899-33133
ಚಾಲಿ	34899-39389
ಕೋಕ	17609-29499
ಕೆಂಪುಗೋಟು	30161-34599
ರಾಶಿ	46019-53399
ತಟ್ಟಿಬೆಟ್ಟೆ	38899-45499

ರಬ್ಬರ್ ಧಾರಣೆ ನರಸಿಂಹರಾಜಪುರ ಮಾರುಕಟ್ಟೆ

ಆರ್‌ಎಸ್‌ಎಸ್ 4 -	₹173.50
ಆರ್ ಎಸ್‌ಎಸ್ 5 -	₹164.50
ಗುಡ್ ಲಾಟ್ -	₹158

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,800	15,500	15,700	213.25 ಸೆಂಟ್ಸ್
ಎಸಿ	8,820	8,500	8,550	
ಆರ್‌ಪಿ	9,500	9,500	9,500	ಲಂಡನ್
ಆರ್‌ಸಿ	4,700	4,500	4,550	1966 ಡಾಲರ್ಸ್

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ

ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಊರು ಬೇಡ

- **ಪ್ರಶ್ನೆ:** ನಾನು ನಿವೃತ್ತ ನೌಕರ. ಮನೆ ಕಟ್ಟಲು ಸಾಲವಾಗಿ ₹ 15 ಲಕ್ಷ ಪಡೆದಿದ್ದು, ಅದರಲ್ಲಿ ₹ 7 ಲಕ್ಷ ಬಾಕಿ ಇದೆ. ಕೋವಿಡ್–19ರ ವಿಚಾರವಾಗಿ ಪಡೆದ ₹ 2 ಲಕ್ಷ ಸಾಲವಿದೆ. ಇನ್ನೊಂದು ಮನೆ ಮೇಲೆ ಸಾಲ ₹ 20 ಲಕ್ಷ ಇದೆ. ಚಿನ್ನದ ಮೇಲಿನ ಸಾಲ ₹ 4 ಲಕ್ಷ ಇದೆ. ಹೀಗೆ ಒಟ್ಟು ₹ 33 ಲಕ್ಷ ಸಾಲ ಒಂದೇ ಬ್ಯಾಂಕಿನಲ್ಲಿದೆ. ಕುಟುಂಬದ ಒಂದು ಆಸ್ತಿ ಮಾರಾಟ ಮಾಡಿದರೆ ಸುಮಾರು ₹ 50 ಲಕ್ಷ ನನಗೆ ಬರಬಹುದು. ಅದರಲ್ಲಿ ₹ 33 ಲಕ್ಷವನ್ನು ಸಾಲ ತೀರಿಸಲು ಬಳಸಿದರೆ, ಎಷ್ಟು ಹಣಕ್ಕೆ ತೆರಿಗೆ ಕಟ್ಟಬೇಕು? ಈ ಜಮೀನು ತಾತನ ಕಾಲದ ಇನಾಂ ಭೂಮಿ.

ಉತ್ತರ: ಯಾವುದೇ ಆಸ್ತಿ ಮಾರಾಟ ಮಾಡಿದಾಗ ತೆರಿಗೆ ನಿರ್ಣಯವಾಗುವುದು ಅದರ ಮಾರಾಟದಿಂದ ಬಂದ ಲಾಭ ಅಥವಾ ನಷ್ಟದ ಆಧಾರದಲ್ಲಿ. ನಿಮ್ಮ ಒಡೆತನದ ಮೂರು ವರ್ಷಕ್ಕಿಂತ ಹಳೆಯ ಆಸ್ತಿ ಮಾರಾಟದಿಂದ ಸುಮಾರು ₹ 50 ಲಕ್ಷ ನಿರೀಕ್ಷಿಸುತ್ತಿದ್ದೀರಿ. ಈ ಆಸ್ತಿಯ ಮೂಲ ಬೆಲೆ ಅಥವಾ ಅದಕ್ಕೆ ಸಮನಾದ ಅಂದಿನ ನ್ಯಾಯಸಮ್ಮತ ಮೌಲ್ಯದ ಆಧಾರದ ಮೇಲೆ ಪ್ರಸ್ತುತ ಅನ್ವಯವಾಗುವ ಹಣದುಬ್ಬರ ಸೂಚ್ಯಂಕದಂತೆ ಅದರ ಇಂದಿನ ಬೆಲೆಯನ್ನು ನಿರ್ಧರಿಸಲಾಗುತ್ತದೆ. ನಿಮ್ಮ ಮಾರಾಟದ ಬೆಲೆ ಇದಕ್ಕಿಂತ ಅಧಿಕವಿದ್ದರೆ, ಹೆಚ್ಚುವರಿ ಮೊತ್ತವನ್ನು ಬಂಡವಾಳ ಲಾಭವೆಂದು ಪರಿಗಣಿಸಲಾಗುತ್ತದೆ. ಮಾರಾಟ ಬೆಲೆ ಅದಕ್ಕಿಂತ ಕಡಿಮೆ ಇದ್ದರೆ ಆ ವ್ಯತ್ಯಾಸವನ್ನು ಬಂಡವಾಳ ನಷ್ಟವೆಂದು ತಿಳಿಯಲಾಗುತ್ತದೆ. ಲಾಭವಾದ ಸಂದರ್ಭದಲ್ಲಿ ಶೇಕಡ 20ರಷ್ಟು ಮೂಲ ತೆರಿಗೆ ಹಾಗೂ ಸೆಸ್ ಅನ್ವಯವಾಗುತ್ತದೆ.

ನಿಮ್ಮ ಪ್ರಶ್ನೆಯಲ್ಲಿ ತಿಳಿಸಿದಂತೆ, ಬಂದ ಹಣವನ್ನು ಉಪಯೋಗಿಸಿ ಸಾಲ ಮರುಪಾವತಿ ಮಾಡುವ ಯೋಜನೆ ಹೊಂದಿದ್ದೀರಿ. ಇದು ಒಳ್ಳೆಯ ನಿರ್ಧಾರ. ಆದರೆ, ಮಾರಾಟದಿಂದ ಬರುವ ಹಣವನ್ನು ಸಾಲ ಮರುಪಾವತಿಗೆ ಬಳಸಿದಾಗ ಆ ಮೊತ್ತವನ್ನು ತೆರಿಗೆ ವಿನಾಯಿತಿಗೆ ಪರಿಗಣಿಸಲು ಆಗುವುದಿಲ್ಲ. ನಿಮ್ಮ ಜಮೀನಿನ ಈಗಿನ ನ್ಯಾಯಸಮ್ಮತ ಮಾರುಕಟ್ಟೆ ಬೆಲೆ (fair market value) ಅರಿಯಲು ಜಮೀನು ಇರುವ ಪ್ರದೇಶದ ಮಾಹಿತಿಯೂ ಬೇಕಾಗುತ್ತದೆ. ಈ ಬಗ್ಗೆ ಹೆಚ್ಚಿನ ವಿವರಕ್ಕಾಗಿ ಸಮೀಪದ ತೆರಿಗೆ ಸಲಹೆಗಾರರನ್ನು ಒಮ್ಮೆ ಸಂಪರ್ಕಿಸಿ.

ಅನಂತ ಪದ್ಮನಾಭ, ಬದಿಯಡ್ಕ

- **ಪ್ರಶ್ನೆ:** ನಾವು ಗಡಿನಾಡಿನವರು. ನಮ್ಮ ಊರಲ್ಲಿ ಹೆಚ್ಚಾಗಿ ಅಡಿಕೆ, ಬಾಳೆ, ತೆಂಗು, ಗೇರು, ಭತ್ತ ಇತ್ಯಾದಿ ಬೆಳೆಯುತ್ತೇವೆ. ಇವು ನಮ್ಮ ಜೀವನಾಧಾರ. ಅಲ್ಲದೆ, ನಾವು ರಬ್ಬರ್ ಕೃಷಿಯನ್ನೂ ಮಾಡುತ್ತಿದ್ದೇವೆ. ಇದರಿಂದ ವಾರ್ಷಿಕವಾಗಿ ₹ 6 ಲಕ್ಷದಿಂದ ₹ 8 ಲಕ್ಷ ಹೆಚ್ಚುವರಿ ಆದಾಯ ಸಿಗುತ್ತದೆ. ನಾವು ಈ ಆದಾಯವನ್ನು ಕೃಷಿ ಆದಾಯ ಎಂದೇ ಪರಿಗಣಿಸುತ್ತಿದ್ದೇವೆ. ಆದರೆ ರಬ್ಬರ್ ವಾಣಿಜ್ಯ ಬೆಳೆ ಎಂದು ಒಬ್ಬರು ತಿಳಿಸಿದರು. ಆದಾಯ ತೆರಿಗೆಯ ಅಡಿ ಅಂತಹ ಯಾವುದಾದರೂ ತೆರಿಗೆ ನಿಬಂಧನೆಗಳಿವೆಯೇ? ಈ ಬಗ್ಗೆ ಮಾಹಿತಿ ನೀಡಿದರೆ ನನ್ನಂತಹ ಅನೇಕ ಕೃಷಿಕರಿಗೆ ಉಪಯುಕ್ತ ಆಗಬಹುದು.

ಉತ್ತರ: ರಬ್ಬರ್ ಒಂದು ವಾಣಿಜ್ಯ ಬೆಳೆ. ಆದಾಯ ತೆರಿಗೆ ನಿಯಮದ ಪ್ರಕಾರ, ಕಾಫಿ ಹಾಗೂ ಚಹಾ ಬೆಳೆಗಳೂ ಈ ಪಟ್ಟಿಯಲ್ಲಿ ಸೇರಿಕೊಳ್ಳುತ್ತವೆ. ಬೆಳೆಗಾರ ಅಥವಾ ಎಸ್ಟೇಟ್ ಮಾಲೀಕ ಸ್ವತಃ ಉತ್ಪಾದಿಸುವ ರಬ್ಬರ್, ಚಹಾ ಹಾಗೂ ಕಾಫಿಯ ಮೇಲೆ ಅವುಗಳ ವಿವಿಧ ಹಂತಗಳ ಪರಿಷ್ಕರಣೆಯ ಆಧಾರದಲ್ಲಿ ತೆರಿಗೆ ಅನ್ವಯವನ್ನು ತೀರ್ಮಾನಿಸಲಾಗುತ್ತದೆ. ಇದು ಮೊದಲ ಕೆಲವು ಹಂತಗಳತನಕ ಸಂಪೂರ್ಣ ಕೃಷಿ ಆದಾಯವೆಂದು ಪರಿಗಣಿತವಾಗಬಹುದು. ಮುಂದಿನ ಕೆಲವು ಹಂತವನ್ನು ತಲುಪಿದಂತೆ ಭಾಗಶಃ ಕೃಷಿ ಆದಾಯವಾಗಿ ಪರಿಗಣಿತವಾಗಬಹುದು.

ಮಾರಾಟಗಾರ ತನ್ನ ಜಮೀನಿನಲ್ಲಿ ಬೆಳೆದ ಕೃಷಿ ಉತ್ಪನ್ನವನ್ನು ಕೊನೆಯ ಹಂತದ ತನಕ ಪರಿಷ್ಕರಿಸಿ ರಬ್ಬರ್, ಚಹಾ ಅಥವಾ ಕಾಫಿ ಇತ್ಯಾದಿ ಉತ್ಪಾದಿಸಿದಲ್ಲಿ ಒಟ್ಟು ಆದಾಯದಲ್ಲಿ ಕೃಷಿ ಆದಾಯ ಹಾಗೂ ವ್ಯಾಪಾರದ ಆದಾಯವೆಂದು ವರ್ಗೀಕರಿಸಲಾಗುತ್ತದೆ. ರಬ್ಬರ್ ಉತ್ಪಾದನೆಗೆ ಸಂಬಂಧಪಟ್ಟು ಹೇಳುವುದಾದರೆ, ಆದಾಯ ತೆರಿಗೆಯ ನಿಯಮ 7ಎ ಅನ್ವಯ 'ರಬ್ಬರ್ ಉತ್ಪಾದನೆ'ಯಿಂದ ಮಾರಾಟ ಮಾಡಿ ಗಳಿಸಿದ ಆದಾಯದ ಶೇಕಡ 35ರಷ್ಟನ್ನು ಕೃಷಿಯೇತರ ಆದಾಯವೆಂದೂ ಉಳಿದ ಶೇ 65ರಷ್ಟನ್ನು ಕೃಷಿ ಆದಾಯವಾಗಿಯೂ ವರ್ಗೀಕರಿಸಲಾಗುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಯಾವುದೇ ಮೊತ್ತವನ್ನು ಮೇಲಿನ ಅನುಪಾತದ ಪ್ರಕಾರ ವ್ಯವಹಾರದ ಆದಾಯವೆಂದು ಪರಿಗಣಿಸಿ ತೆರಿಗೆಗೆ ಒಳಪಡಿಸಬೇಕಾದರೆ, ಅಲ್ಲಿ ಮೂಲ ಕೃಷಿ ಉತ್ಪನ್ನದಿಂದ ಹೊಸದಾದ ವಸ್ತುವೊಂದು ಉತ್ಪಾದನೆಯಾಗಿರಬೇಕು.

ನೀವು ನೈಸರ್ಗಿಕ ರಬ್ಬರನ್ನು ಹಾಗೆಯೇ ಮಾರಾಟ ಮಾಡುತ್ತಿದ್ದರೆ ನಿಮ್ಮ ಆದಾಯ ಕೃಷಿ ಆದಾಯವೆಂದೇ ಪರಿಗಣಿಸಲ್ಪಡುತ್ತದೆ. ನೀವು ರಬ್ಬರ್ ಬೆಳೆಯುವುದರ ಜೊತೆ ಅದೇ ನೈಸರ್ಗಿಕ ರಬ್ಬರನ್ನು ನಿಮ್ಮದೇ ಉತ್ಪಾದನಾ ಘಟಕಗಳಲ್ಲಿ ಹಲವಾರು ರಾಸಾಯನಿಕಗಳ ಮೂಲಕ ಮುಂದಿನ ಹಂತದ ಪರಿಷ್ಕರಣೆಗೆ ಒಗ್ಗಿಸಿ ಲ್ಯಾಟೆಕ್ಸ್ ಅಥವಾ ವಿವಿಧ ರೀತಿಯ, ಮಾರುಕಟ್ಟೆ ಅಗತ್ಯಕ್ಕೆ ತಕ್ಕಂತೆ ಪರಿಷ್ಕೃತ ಉತ್ಪನ್ನಗಳನ್ನು ತಯಾರಿಸಿದಾಗ ಅದು ರಬ್ಬರ್ ಉತ್ಪಾದನೆ ಎಂದು ಪರಿಗಣಿತವಾಗುತ್ತದೆ. ಇಂತಹ ಸಂದರ್ಭದಲ್ಲಷ್ಟೇ ಮೇಲೆ ಉಲ್ಲೇಖಿಸಿದ ಶೇಕಡಾವಾರು ದರದಲ್ಲಿ ಆದಾಯವನ್ನು ತೆರಿಗೆಗೆ ಒಳಪಡಿಸಲಾಗುತ್ತದೆ. ಎಲ್ಲಿಯತನಕ ನೀವೇ ಕೃಷಿ ಮಾಡಿದ ಉತ್ಪನ್ನ ನೈಸರ್ಗಿಕ ರೂಪದಲ್ಲಿ ಮಾರಾಟ ಆಗುತ್ತದೆಯೋ ಅಲ್ಲಿಯತನಕ ಅದರ ಮಾರಾಟದಿಂದ ಬಂದ ಆದಾಯ ಕೃಷಿ ಆದಾಯವಾಗಿ ಪರಿಗಣಿತವಾಗುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.

ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001

ಇ–ಮೇಲ್: businessdesk@prajavani.co.in



ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್ ಗೆದ್ದುಕೊಂಡ ಎಂಇಜಿ ತಂಡ. ಮಂಡಿಯೂರಿದವರು (ಎಡದಿಂದ) ಮೋನಿ ಸಿಂಗ್, ಧುವೊರಿ ಪಾಂಡಿ, ಸೂರಜ್ ಅನ್ಸಾರಿ, ಸುಧಾಕರ್, ಸುನಿಲ್. ನಿಂತವರು: ದೀಪಕ್, ಪುಲಯ್ಯ, ಕಿರಣ್, ಅಪ್ಪಣ್ಣ, ದಿಶಾಂತ್, ಅನಿಲ್ ಮಿಂಜ್ (ಕೋಚ್), ನಜ್ಮುದ್ದೀನ್ (ಕೋಚ್), ಸಿ.ಎ.ಸುಬ್ಬಯ್ಯ, ಶಶಾಂಕ್, ರೊಂಜಿತ್, ಪುನೀತ್, ಎಂ.ದಿಲಮ್, ಪಳನಿ ಮತ್ತು ಪಾಂಡಿ ಇದ್ದಾರೆ –ಪ್ರಜಾವಾಣಿ ಚಿತ್ರ

ಹಾಕಿ: ಎಂಇಜಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಮತ್ತು ಸೆಂಟರ್ (ಎಂಇಜಿ) ತಂಡದವರು ಮಂಗಳವಾರ ಇಲ್ಲಿ ಕೊನೆಗೊಂಡ ಆರನೇ ಋತುವಿನ ಹಾಕಿ ಕರ್ನಾಟಕ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ಡಿವೈಇಎಸ್ 'ಎ' ತಂಡ 'ರನ್ನರ್ಸ್ ಅಪ್' ಆದರೆ,ಎಜಿಒಆರ್‌ಸಿ ಮೂರನೇ ಸ್ಥಾನ ಗಳಿಸಿತು.

ಎಫ್‌ಎಂಕೆಎಂಸಿ ಹಾಕಿ ಅರೆನಾನದಲ್ಲಿ ನಡೆದ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಎಂಇಜಿ 5–2 ರಲ್ಲಿ ಪೋಸ್ಟಲ್ ತಂಡವನ್ನು ಮಣಿಸಿತು.

ಹ್ಯಾಟ್ರಿಕ್ ಗೋಲು ಗಳಿಸಿದ ಎಚ್. ಮಣಿ (17, 26 ಮತ್ತು 38ನೇ ನಿ.) ತಂಡದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಇನ್ನೆರಡು ಗೋಲುಗಳನ್ನು ಪುಲಯ್ಯ (14) ಮತ್ತು ಬಿ.ಪಳನಿಸ್ವಾಮಿ (59) ತಂದಿತ್ತರು. ಪೋಸ್ಟಲ್ ಪರ ವಿನಾಯಕ ಬಿಜವಾಡ್ (52) ಮತ್ತು ವಿ.ಎಂ.ಅಜಿತ್ (56) ಗೋಲು ಗಳಿಸಿದರು.

ಡಿವೈಇಎಸ್ 'ಎ' ಮತ್ತು ಕೆನರಾ ಬ್ಯಾಂಕ್ ನಡುವಿನ ಪಂದ್ಯ 3–3 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಡಿವೈಇಎಸ್‌ಗೆ ಹರೀಶ್ (2), ಪ್ರಣಾಮ್ ಗೌಡ (4 ಮತ್ತು 44) ಹಾಗೂ ಕೆನರಾ ಬ್ಯಾಂಕ್‌ಗೆ ಕೆ.ಪಿ.ಸೋಮಯ್ಯ (9 ಮತ್ತು 14), ಪೃಥ್ವಿರಾಜ್ (43) ಗೋಲುಗಳನ್ನು ತಂದಿತ್ತರು.


ವಿಜೇತ ತಂಡ ₹ 50 ಸಾವಿರ ನಗದು ಬಹುಮಾನ ತನ್ನದಾಗಿಸಿಕೊಂಡಿತು. ಎರಡು ಮತ್ತು ಮೂರನೇ ಸ್ಥಾನ ಪಡೆದ ತಂಡಗಳು ಕ್ರಮವಾಗಿ ₹ 30 ಸಾವಿರ ಹಾಗೂ ₹ 20 ಸಾವಿರ ನಗದು ಬಹುಮಾನ ಗೆದ್ದುಕೊಂಡವು.

ವಿಶ್ವಕಪ್ ಹಾಕಿ: ಭಾರತಕ್ಕೆ ಮೊದಲ ಜಯ

ಟೆರಸ್ಸಾ, ಸ್ಪೇನ್ (ಪಿಟಿಐ): ಗೋಲುಪೆಟ್ಟಿಗೆಗೆ ಭದ್ರಕೋಟೆಯಾಗಿ ನಿಂತ ನಾಯಕಿ ಸವಿತಾ ಪೂನಿಯಾ ಭಾರತ ಮಹಿಳಾ ಹಾಕಿ ತಂಡಕ್ಕೆ ಈ ಬಾರಿಯ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಜಯ ಗಳಿಸಿಕೊಟ್ಟರು. ಮಂಗಳವಾರ ನಡೆದ ಕೆನಡಾ ಎದುರಿನ ಪಂದ್ಯದಲ್ಲಿ ತಂಡವು 3–2ರಿಂದ ಶೂಟೌಟ್‌ನಲ್ಲಿ ಗೆಲುವು ಸಾಧಿಸಿತು.

ಈಗಾಗಲೇ ಟೂರ್ನಿಯ ಪ್ರಶಸ್ತಿ ಸ್ಪರ್ಧೆಯಿಂದ ಹೊರಬಿದ್ದಿದ್ದ ಭಾರತಕ್ಕೆ ಈ ಜಯ ಸಮಾಧಾನ ತಂದಿತು.

ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಒಂದು ಗೋಲು ದಾಖಲಿಸಿದ್ದವು. ಕೆನಡಾ ತಂಡದ ಮೇಡ್‌ಲಿನ್ ಸೆಕೊ 11ನೇ ನಿಮಿಷದಲ್ಲಿ ತಂಡಕ್ಕೆ ಮುನ್ನಡೆ ಗಳಿಸಿಕೊಟ್ಟರು. ಭಾರತದ ಪರ 58ನೇ ನಿಮಿಷದಲ್ಲಿ ಸಲೀಮಾ ಟೆಟೆ ಕೈಚಳಕ ತೋರಿದರು.



ಭಾರತದ ಆಟಗಾರ್ತಿಯರ ಸಂಭ್ರಮ – ಹಾಕಿ ಇಂಡಿಯಾ ಟ್ವಿಟರ್ ಚಿತ್ರ

ಶೂಟೌಟ್‌ನಲ್ಲಿ ಭಾರತ ಮೂರು ಬಾರಿ ಯಶಸ್ಸು ಕಂಡರೆ, ಎದುರಾಳಿ ತಂಡಕ್ಕೆ ಎರಡು ಗೋಲುಗಳನ್ನು ಗಳಿಸಲು ಮಾತ್ರ ಸಾಧ್ಯವಾಯಿತು. ಶೂಟೌಟ್‌ನಲ್ಲಿ ಸವಿತಾ ಎದುರಾಳಿ ತಂಡದ ಆರು ಪ್ರಯತ್ನಗಳನ್ನು ವಿಫಲಗೊಳಿಸಿದರು. ನವನೀತ್ ಕೌರ್, ಸೋನಿಕಾ ಮತ್ತು ನೇಹಾ ಭಾರತ ತಂಡಕ್ಕಾಗಿ ಗೋಲು ಗಳಿಸಿದರು.

ಪಂದ್ಯದಲ್ಲಿ ಉಭಯ ತಂಡಗಳು ಜಿದ್ದಾಜಿದ್ದಿ ಪೈಪೋಟಿ ನಡೆಸಿದವು. ಆರಂಭದಲ್ಲೇ ಕೆನಡಾ ಮುನ್ನಡೆ ಸಾಧಿಸಿದ್ದು, ಭಾರತ ತಂಡದ ಒತ್ತಡ ಹೆಚ್ಚಿಸಿತು. 25ನೇ ನಿಮಿಷದಲ್ಲಿ ನವನೀತ್ ಮತ್ತು ವಂದನಾ ಗೋಲು ಗಳಿಕೆಯ ಉತ್ತಮ ಅವಕಾಶವೊಂದನ್ನು ಸೃಷ್ಟಿಸಿದ್ದರು. ಆದರೆ ಎದುರಾಳಿ ಗೋಲ್‌ಕೀಪರ್ ರೋವನ್ ಹ್ಯಾರಿಸ್ ಚೆಂಡನ್ನು ತಡೆದರು. ಆ ಬಳಿಕವೂ ಕೆಲವು ಅವಕಾಶಗಳು ದೊರೆತರೂ ತಂಡವು 58ನೇ ನಿಮಿಷದಲ್ಲಿ ಸಮಬಲ ಸಾಧಿಸಿತು. ಸಲೀಮಾ ಗೋಲು ದಾಖಲಿಸಿದರು.

ಜಪಾನ್ ಎದುರಾಳಿ: ಭಾರತ ತಂಡವು 9–12ನೇ ಸ್ಥಾನ ನಿರ್ಧರಿಸುವ ಮುಂದಿನ ಪಂದ್ಯದಲ್ಲಿ ಜಪಾನ್ ಸವಾಲು ಎದುರಿಸಲಿದೆ. ಬುಧವಾರ ರಾತ್ರಿ 8 ಗಂಟೆಗೆ ಈ ಪಂದ್ಯ ನಡೆಯಲಿದೆ. ಸ್ಟಾರ್ ಸ್ಪೋರ್ಟ್ಸ್ ಮತ್ತು ಡಿಸ್ನಿ ಪ್ಲಸ್ ಹಾಟ್‌ಸ್ಟಾರ್‌ನಲ್ಲಿ ನೇರ ಪ್ರಸಾರವಾಗಲಿದೆ.

ಚಿನ್ನದ ಪದಕದ ಸುತ್ತಿಗೆ ಮೆಹುಲಿ– ಮಾನೆ

ಚಾಂಗ್ವಾನ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಮೆಹುಲಿ ಘೋಷ್ ಮತ್ತು ಶಾಹು ತುಷಾರ್ ಮಾನೆ ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯ 10 ಮೀಟರ್ಸ್ ಏರ್ ರೈಫಲ್ ಸ್ಪರ್ಧೆಯ ಮಿಶ್ರ ತಂಡ ವಿಭಾಗದಲ್ಲಿ ಚಿನ್ನದ ಪದಕದ ಸುತ್ತು ಪ್ರವೇಶಿಸಿದರು. ಇದರೊಂದಿಗೆ ಮತ್ತೊಂದು ಪದಕ ಖಚಿತಪಡಿಸಿದರು.

30 ತಂಡಗಳಿದ್ದ ಏರ್ ರೈಫಲ್ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ ಶಾಹು ಮತ್ತು ಮೆಹುಲಿ ಅಗ್ರಸ್ಥಾನ ಗಳಿಸಿದರು. ಒಟ್ಟು 634.3 ಪಾಯಿಂಟ್ಸ್ ಕಲೆಹಾಕಿದರು. ಹಂಗರಿಯ ಇಸ್ತವಾನ್ ಪೆನಿ ಮತ್ತು ಈಸ್ತರ್ ಮೆಸ್‌ಜರೋಸ್ ಜೋಡಿ (630.3) ಎರಡನೇ ಸ್ಥಾನ ಗಳಿಸಿತು.

ಶಿವ ನರ್ವಾಲ್ ಮತ್ತು ಪಲಕ್ (574) ಅವರಿದ್ದ ತಂಡ 10 ಮೀ. ಏರ್ ಪಿಸ್ತೂಲ್‌ನಲ್ಲಿ ಮೂರನೇ ಸ್ಥಾನ ಗಳಿಸಿತು.

ಚಿನ್ನ ಮತ್ತು ಕಂಚಿನ ಪದಕದ ಸುತ್ತಿನ ಪಂದ್ಯಗಳು ಬುಧವಾರ ನಡೆಯಲಿವೆ.

10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿದ್ದ ಭಾರತದ ಇನ್ನೊಂದು ಜೋಡಿ ನವೀನ್ ಮತ್ತು ರಿಧಮ್ ಸಂಗ್ವಾನ್, ಏರ್ ರೈಫಲ್ ವಿಭಾಗದಲ್ಲಿದ್ದ ಅರ್ಜುನ್ ಬಬೂತಾ ಮತ್ತು ಇಳವೆನ್ನಿಲ್ ವಾಳರಿವನ್ ಎಂಟನೇ ಸ್ಥಾನ ಗಳಿಸಿ ನಿರಾಸೆ ಮೂಡಿಸಿದರು.



ಮೆಹುಲಿ ಘೋಷ್

ಗುರಿ ತಪ್ಪಿದ ಶೂಟರ್‌ಗಳು: ಇದಕ್ಕೂ ಮೊದಲು ಪದಕದ ಸುತ್ತುಗಳಲ್ಲಿ ಭಾರತದ ಸ್ಪರ್ಧಿಗಳು ಸ್ವಲ್ಪದರಲ್ಲೇ ವಿಫಲರಾದರು. 10 ಮೀ. ಏರ್ ಪಿಸ್ತೂಲ್‌ನಲ್ಲಿ ನವೀನ್ 250.7 ಪಾಯಿಂಟ್ಸ್ ಗಳಿಸಿ ನಾಲ್ಕನೇ ಸ್ಥಾನ ಗಳಿಸಿದರು. ಶಿವ ನರ್ವಾಲ್ ಐದು ಮತ್ತು ಸಾಗರ್ ಡಾಂಗಿ ಆರನೇ ಸ್ಥಾನಕ್ಕೆ ತೃಪ್ತಿಪಟ್ಟರು.

ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಯುವಿಕಾ ಥೋಮರ್ ಏಳನೇ ಸ್ಥಾನ ಗಳಿಸಿದರು. ಪುರುಷರ ಟ್ರ್ಯಾಪ್ ಸ್ಪರ್ಧೆಯ ರ‍್ಯಾಂಕಿಂಗ್ ಸುತ್ತಿನಲ್ಲಿ ವಿವಾನ್ ಕಪೂರ್ ಮೂರನೇ ಸ್ಥಾನ ಪಡೆದರು.

ಬ್ಯಾಸ್ಕೆಟ್‌ಬಾಲ್: ಜೆಎಸ್‌ಸಿ ಜಯಭೇರಿ

ಬೆಂಗಳೂರು: ದಿನೇಶ್ ಗಳಿಸಿದ 40 ಪಾಯಿಂಟ್ಸ್ ಬಲದಿಂದ ಜೆಎಸ್‌ಸಿ ತಂಡವು ಎಂ.ಸಿ. ಶ್ರೀನಿವಾಸ್ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಬಿ ಡಿವಿಷನ್ ಲೀಗ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಜಯಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಜೆಎಸ್‌ಸಿ 138–84ರಿಂದ ರಾಜ್‌ಮಹಲ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ಎದುರು ಗೆದ್ದಿತು.

ಇನ್ನುಳಿದ ಪಂದ್ಯಗಳಲ್ಲಿ ದೇವಾಂಗ ಯೂನಿಯನ್ 75–59ರಿಂದ ಬಾಷ್ ವಿರುದ್ಧ, ಭಾರತ್ ಎಸ್‌ಯು 87–69ರಿಂದ ಕೆಎಸ್‌ಪಿ ಎದುರು, ಬಿಎಸ್‌ಎನ್‌ಎಲ್ ತಂಡವು 74–45ರಿಂದ ರೈಸಿಂಗ್ ಸ್ಟಾರ್ ಬಿ.ಸಿ. ಮೈಸೂರು ವಿರುದ್ಧ ಜಯ ಗಳಿಸಿದವು.

ಭಾರತ ಜಯಭೇರಿ: ಅಲ್ಪಮೊತ್ತಕ್ಕೆ ಕುಸಿದ ಆತಿಥೇಯ ಇಂಗ್ಲೆಂಡ್

ಬೂಮ್ರಾ ಬಿರುಗಾಳಿ ಬೌಲಿಂಗ್

ಲಂಡನ್ (ಪಿಟಿಐ): ತಮ್ಮ ವೃತ್ತಿಜೀವನದ ಶ್ರೇಷ್ಠ ಬೌಲಿಂಗ್ ಸಾಧನೆ ಮಾಡಿದ ಜಸ್‌ಪ್ರೀತ್ ಬೂಮ್ರಾ ಇಂಗ್ಲೆಂಡ್ ಎದುರಿನ ಮೊದಲ ಏಕದಿನ ಪಂದ್ಯದಲ್ಲಿ ಭಾರತಕ್ಕೆ ಜಯದ ಕಾಣಿಕೆ ನೀಡಿದರು.

ದ ಓವಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬೂಮ್ರಾ (7.2–3–19–6) ಸ್ವಿಂಗ್ ದಾಳಿಗೆ ಆತಿಥೇಯ ಬಳಗವು ದೂಳೀಪಟವಾಯಿತು. 25.2 ಓವರ್‌ಗಳಲ್ಲಿ 110 ರನ್ ಗಳಿಸಿತು. ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಎದುರು ಇಂಗ್ಲೆಂಡ್ ಗಳಿಸಿದ ಅತ್ಯಂತ ಸಣ್ಣ ಮೊತ್ತ ಇದು. 2006ರಲ್ಲಿ ಜೈಪುರದಲ್ಲಿ ನಡೆದಿದ್ದ ಪಂದ್ಯದಲ್ಲಿ ಇಂಗ್ಲೆಂಡ್ 125 ರನ್ ಗಳಿಸಿತ್ತು.

ಅಲ್ಪಮೊತ್ತವನ್ನು ಬೆನ್ನಟ್ಟಿದ ಭಾರತ ತಂಡವು 18.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 114 ರನ್ ಗಳಿಸಿತು. ನಾಯಕ ರೋಹಿತ್ ಶರ್ಮಾ (ಅಜೇಯ 76; 58ಎ, 4X7, 6X5) ಮತ್ತು ಶಿಖರ್ ಧವನ್ (ಅಜೇಯ 31; 54ಎ, 4X4) ಸುಂದರ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು 10 ವಿಕೆಟ್‌ಗಳ ಜಯ ದಾಖಲಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ ಭಾರತ 1–0 ಮುನ್ನಡೆ ಗಳಿಸಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ರೋಹಿತ್ ನಿರ್ಧಾರವನ್ನು ಬೂಮ್ರಾ ಸಮರ್ಥಿಸಿಕೊಂಡರು. ಇನ್ನೊಂದು ಬದಿಯಿಂದ ಮೊಹಮ್ಮದ್ ಶಮಿ (31ಕ್ಕೆ3) ಕೂಡ ಅಮೋಘ ಬೌಲಿಂಗ್ ಮಾಡಿದರು.



ಭಾರತದ ಬೌಲರ್ ಜಸ್‌ಪ್ರೀತ್ ಬೂಮ್ರಾ ಸಂಭ್ರಮ –ಎಎಫ್‌ಪಿ ಚಿತ್ರ

ಕನ್ನಡಿಗ ಪ್ರಸಿದ್ಧ ಕೃಷ್ಣ ಒಂದು ವಿಕೆಟ್ ಗಳಿಸಿದರು. ಇದರೊಂದಿಗೆ ಇಂಗ್ಲೆಂಡ್‌ನ ಎಲ್ಲ ವಿಕೆಟ್‌ಗಳೂ ಮಧ್ಯಮವೇಗಿಗಳ ಖಾತೆ ಸೇರಿದವು.

ಬೂಮ್ರಾ ತಮ್ಮ ಮೊದಲ ಓವರ್‌ನಲ್ಲಿಯೇ ಆರಂಭಿಕ ಬ್ಯಾಟರ್ ಜೇಸನ್ ರಾಯ್ ಮತ್ತು ಜೋ ರೂಟ್ ಅವರನ್ನು ಪೆವಿಲಿಯನ್‌ಗೆ ಕಳಿಸಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಜಾನಿ ಬೆಸ್ಟೊ (7) ವಿಕೆಟ್ ಕಬಳಿಸಿದ ಬೂಮ್ರಾ ಸಂಭ್ರಮಿಸಿದರು. ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ಲಿವಿಂಗ್‌ಸ್ಟೋನ್ ಸ್ಟಂಪ್ ಉರುಳಿಸಿದರು. ತಮ್ಮ ಮೊದಲ ಐದು ಓವರ್‌ಗಳಲ್ಲಿ ನಾಲ್ಕು ವಿಕೆಟ್ ಗಳಿಸಿದ ಅವರು, ಎರಡನೇ ಸ್ಪೆಲ್‌ನಲ್ಲಿ ಹಾಕಿದ 14 ಎಸೆತಗಳಲ್ಲಿ ಎರಡು ವಿಕೆಟ್ ಪಡೆದರು.

30 ರನ್ ಗಳಿಸಿದ ನಾಯಕ ಜೊಸ್ ಬಟ್ಲರ್, ಬೆನ್ ಸ್ಟೋಕ್ಸ್ ಮತ್ತು ಕ್ರೇಗ್ ಓವರ್ಟನ್ ಅವರಿಗೆ ಪೆವಿಲಿಯನ್ ಹಾದಿ ತೋರಿದ ಶಮಿ ಏಕದಿನ ಕ್ರಿಕೆಟ್‌ನಲ್ಲಿ 150 ವಿಕೆಟ್ ಗಳಿಸಿದರು.

ಮುಖ್ಯಾಂಶಗಳು

- ಏಕದಿನ ಕ್ರಿಕೆಟ್‌ನಲ್ಲಿ ಜಸ್‌ಪ್ರೀತ್ ದಾಖಲೆ
- ಮೊದಲ ಏಕದಿನ ಪಂದ್ಯದಲ್ಲಿ 10 ವಿಕೆಟ್‌ಗಳ ಜಯ
- ರೋಹಿತ್ ಅರ್ಧಶತಕ



ರೋಹಿತ್ ಶರ್ಮಾ

ಇಂಗ್ಲೆಂಡ್‌ನಲ್ಲಿ ಉತ್ತಮ ಸಾಧನೆ ಮಾಡಿದ ಬೌಲರ್‌ಗಳು

ವಿಕೆಟ್	ಆಟಗಾರ	ದೇಶ	ಎದುರಾಳಿ	ಸ್ಥಳ	ವರ್ಷ
36ಕ್ಕೆ7	ವಕಾರ್ ಯೂನಿಸ್	ಪಾಕಿಸ್ತಾನ	ಇಂಗ್ಲೆಂಡ್	ಲೀಡ್ಸ್	2001
51ಕ್ಕೆ7	ವಿನ್‌ಸ್ಟನ್ ಡೇವಿಸ್	ವೆಸ್ಟ್ ಇಂಡೀಸ್	ಆಸ್ಟ್ರೇಲಿಯಾ	ಲೀಡ್ಸ್	1983
14ಕ್ಕೆ6	ಗ್ಯಾರಿ ಗಿಲ್ಮೊರ್	ಆಸ್ಟ್ರೇಲಿಯಾ	ಇಂಗ್ಲೆಂಡ್	ಲೀಡ್ಸ್	1975
19ಕ್ಕೆ6	ಜಸ್‌ಪ್ರೀತ್ ಬೂಮ್ರಾ	ಭಾರತ	ಇಂಗ್ಲೆಂಡ್	ದ ಓವಲ್	2022

ಏಕದಿನ ಕ್ರಿಕೆಟ್‌ನಲ್ಲಿ ಭಾರತದ ಬೌಲರ್‌ಗಳ ಶ್ರೇಷ್ಠ ಸಾಧನೆ

ವಿಕೆಟ್	ಬೌಲರ್	ಎದುರಾಳಿ	ಸ್ಥಳ	ವರ್ಷ
4ಕ್ಕೆ6	ಸ್ಟುವರ್ಟ್ ಬಿನ್ನಿ	ಬಾಂಗ್ಲಾ	ಮೀರ್‌ಪುರ್	2014
12ಕ್ಕೆ6	ಅನಿಲ್ ಕುಂಬ್ಳೆ	ವೆಸ್ಟ್ ಇಂಡೀಸ್	ಕೋಲ್ಕತ್ತ	1993
19ಕ್ಕೆ6	ಜಸ್‌ಪ್ರೀತ್ ಬೂಮ್ರಾ	ಇಂಗ್ಲೆಂಡ್	ದ ಓವಲ್	2022
23ಕ್ಕೆ6	ಆಶಿಶ್ ನೆಹ್ರಾ	ಇಂಗ್ಲೆಂಡ್	ಡರ್ಬನ್	2003
25ಕ್ಕೆ6	ಕುಲದೀಪ್ ಯಾದವ್	ಇಂಗ್ಲೆಂಡ್	ನಾಟಿಂಗ್‌ಹ್ಯಾಮ್	2018

ಸ್ಕೋರ್ ಕಾರ್ಡ್

ಇಂಗ್ಲೆಂಡ್ 110 (25.2 ಓವರ್)
ಜೇಸನ್ ಬಿ ಬೂಮ್ರಾ 0 (5ಎ), ಬೆಸ್ಟೊ ಸಿ ಪಂತ್ ಬಿ ಬೂಮ್ರಾ 7 (20ಎ, 4X1), ರೂಟ್ ಸಿ ಪಂತ್ ಬಿ ಬೂಮ್ರಾ 0 (2ಎ), ಸ್ಟೋಕ್ಸ್ ಸಿ ಪಂತ್ ಬಿ ಶಮಿ 0 (1ಎ), ಬಟ್ಲರ್ ಸಿ ಸೂರ್ಯಕುಮಾರ್ ಬಿ ಶಮಿ 30 (32ಎ, 4X6), ಲಿವಿಂಗ್‌ಸ್ಟೋನ್ ಬಿ ಬೂಮ್ರಾ 0 (8ಎ), ಮೋಯಿನ್ ಸಿ ಮತ್ತು ಬಿ ಪ್ರಸಿದ್ಧ ಕೃಷ್ಣ 14 (18ಎ, 4X2), ವಿಲಿ ಬಿ ಬೂಮ್ರಾ 21 (26ಎ, 4X3), ಕ್ರೇಗ್ ಬಿ ಶಮಿ 8 (7ಎ, 4X2), ಬ್ರೈಡನ್ ಬಿ ಬೂಮ್ರಾ 15 (26ಎ, 4X2), ರೀಸ್ ಔಟಾಗದೆ 6 (7ಎ, 6X1)
ಇತರೆ (ಲೆಗ್‌ಬೈ 2, ವೈಡ್ 7) 9
ವಿಕೆಟ್ ಪತನ: 1-6 (ಜೇಸನ್ ರಾಯ್, 1.4), 2-6 (ಜೋ ರೂಟ್, 1.6), 3-7 (ಬೆನ್ ಸ್ಟೋಕ್ಸ್, 2.4), 4-17 (ಜಾನಿ ಬೆಸ್ಟೊ, 5.3), 5-26 (ಲಿಯಾಮ್ ಲಿವಿಂಗ್‌ಸ್ಟೋನ್, 7.5), 6-53 (ಮೋಯಿನ್ ಅಲಿ, 13.5), 7-59 (ಜೋಸ್ ಬಟ್ಲರ್, 14.3), 8-68 (ಕ್ರೇಗ್ ಓವರ್ಟನ್, 16.3), 9-103 (ಬ್ರೈಡನ್ ಕೇರ್ಸ್, 23.2), 10-110 (ಡೇವಿಡ್ ವಿಲಿ, 25.2)
ಬೌಲಿಂಗ್: ಮೊಹಮ್ಮದ್ ಶಮಿ 7–0–31–3, ಜಸ್‌ಪ್ರೀತ್ ಬೂಮ್ರಾ 7.2–3–19–6, ಹಾರ್ದಿಕ್ ಪಾಂಡ್ಯ 4–0–22–0, ಪ್ರಸಿದ್ಧ ಕೃಷ್ಣ 5–0–26–1, ಯಜುವೇಂದ್ರ ಚಾಹಲ್ 2–0–10–0

ಭಾರತ ವಿಕೆಟ್ ನಷ್ಟವಿಲ್ಲದೆ 114 (18.4 ಓವರ್)
ರೋಹಿತ್ ಔಟಾಗದೆ 76 (58ಎ, 4X7, 6X5), ಶಿಖರ್ ಔಟಾಗದೆ 31 (54ಎ, 4X4)
ಇತರೆ (ಲೆಗ್‌ಬೈ 2, ವೈಡ್ 5) 7
ಬೌಲಿಂಗ್: ಡೇವಿಡ್ ವಿಲಿ 3–0–8–0, ರೀಸ್ ಟೋಪ್ಲಿ 5–3–22–0, ಕ್ರೇಗ್ ಓವರ್ಟನ್ 4–0–34–0, ಬ್ರೈಡನ್ ಕೇರ್ಸ್ 3.4–0–38–0, ಬೆನ್ ಸ್ಟೋಕ್ಸ್ 1–0–1–0, ಮೋಯಿನ್ ಅಲಿ 2–0–9–0

ಫಲಿತಾಂಶ: ಭಾರತ ತಂಡಕ್ಕೆ 10 ವಿಕೆಟ್‌ಗಳ ಜಯ ಸರಣಿಯಲ್ಲಿ 1–0 ಮುನ್ನಡೆ



94 ವರ್ಷದ ಭಾರತೀಯ ಸ್ಪ್ರಿಂಟರ್ ವಿಶ್ವ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್‌ನಲ್ಲಿ ಚಿನ್ನ ಮತ್ತು ಕಂಚಿನ ಪದಕ ವಿಜೇತರಾಗಿದ್ದಾರೆ!

ಚೆಸ್: ಸೂರ್ಯಶೇಖರ್‌ಗೆ ಪ್ರಶಸ್ತಿ

ಬೀಲ್, ಸ್ವಿಟ್ಜರ್ಲೆಂಡ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಸೂರ್ಯ ಶೇಖರ್ ಗಂಗೂಲಿ ಅವರು ಇಲ್ಲಿ ನಡೆದ ಬೀಲ್ ಚೆಸ್ ಫೆಸ್ಟಿವಲ್‌ನ ಫಿಶರ್ ರ್‍ಯಾಂಡಮ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಭಾರತದವರೇ ಆದ ಎಸ್.ಪಿ. ಸೇತುರಾಮನ್ ಎರಡನೇ ಸ್ಥಾನ ಗಳಿಸಿದರು. 39 ವರ್ಷದ ಸೂರ್ಯಶೇಖರ್ ಏಳು ಸುತ್ತುಗಳ ಟೂರ್ನಿಯಲ್ಲಿ 6.5 ಪಾಯಿಂಟ್ಸ್ ಕಲೆ ಹಾಕಿದರು. ಸೇತುರಾಮನ್ ಮತ್ತು ಮೂರನೇ ಸ್ಥಾನ ಪಡೆದ ಫ್ರಾನ್ಸ್‌ನ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ವೆರಾ ನೆಬೊಲ್ಸಿನಾ ತಲಾ 5.5 ಪಾಯಿಂಟ್ಸ್ ಗಳಿಸಿದರು.



ಸೂರ್ಯಶೇಖರ್

‘ಐಪಿಎಲ್‌ನಲ್ಲಿ ಬೇಡದ ವಿಶ್ರಾಂತಿ ರಾಷ್ಟ್ರೀಯ ತಂಡದಲ್ಲೇಕೆ?’

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವಾಗ ಯಾವುದೇ ಪಂದ್ಯವನ್ನೂ ತಪ್ಪಿಸದ ಅನುಭವಿ ಆಟಗಾರರು ಅಂತರರಾಷ್ಟ್ರೀಯ ಪಂದ್ಯಗಳ ಸಂದರ್ಭದಲ್ಲಿ ವಿಶ್ರಾಂತಿ ಪಡೆಯುವುದು ಯಾಕೆ ಎಂದು ಕ್ರಿಕೆಟ್ ದಿಗ್ಗಜ ಸುನಿಲ್ ಗಾವಸ್ಕರ್ ಪ್ರಶ್ನಿಸಿದ್ದಾರೆ.

ವೆಸ್ಟ್ ಇಂಡೀಸ್ ಎದುರು ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯಿಂದ ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ, ಹಾರ್ದಿಕ್ ಪಾಂಡ್ಯ ಮತ್ತು ರಿಷಭ್ ಪಂತ್ ಅವರು ವಿಶ್ರಾಂತಿ ಪಡೆದಿದ್ದಾರೆ. ಈ ಕುರಿತು ಗಾವಸ್ಕರ್ ಸ್ಪೋರ್ಟ್ಸ್ ಟಾಕ್‌ನಲ್ಲಿ ಮಾತನಾಡಿದ್ದಾರೆ.

‘ಆಟಗಾರರು ಈ ರೀತಿ ವಿಶ್ರಾಂತಿ ಪಡೆಯುವುದರ ಬಗ್ಗೆ ನನಗೆ ಅಸಮಾಧಾನವಿದೆ. ಐಪಿಎಲ್‌ನಲ್ಲಿ ಒಂಚೂರು ವಿಶ್ರಾಂತಿ ತೆಗೆದುಕೊಳ್ಳದವರು, ಭಾರತ ತಂಡದಲ್ಲಿ ಆಡುವಾಗ ಪದೇ ಪದೇ ತಪ್ಪಿಸುತ್ತಾರೆ. ಇದು ಅವರಿಗೆ ರಾಷ್ಟ್ರೀಯ ತಂಡದ ಕುರಿತು ಇರುವ ಬದ್ಧತೆಯ ಕೊರತೆಯೇ’ ಎಂದು ವೀಕ್ಷಕ ವಿವರಣೆಗಾರರೂ ಆಗಿರುವ ಗಾವಸ್ಕರ್ ತರಾಟೆಗೆ ತೆಗೆದುಕೊಂಡಿದ್ದಾರೆ.

‘ಈ ವಿಷಯದ ಕುರಿತು ಬಿಸಿಸಿಐ ಗಮನ ಹರಿಸಬೇಕು. ಗುತ್ತಿಗೆಯಲ್ಲಿ ಎ ಗ್ರೇಡ್ ಹೊಂದಿರುವ ಆಟಗಾರರು ಉತ್ತಮ ವರಮಾನ ಗಳಿಸುತ್ತಾರೆ. ಪ್ರತಿ ಪಂದ್ಯಕ್ಕೂ ಅವರಿಗೆ ಭಾರಿ ಆದಾಯ ಇರುತ್ತದೆ. ಯಾವುದೇ ಕಂಪನಿಯ ಸಿಇಒ ಅಥವಾ ಎಂ.ಡಿ ಸ್ಥಾನದಲ್ಲಿರುವವರು ಎಷ್ಟು ಬಿಡುವು ಪಡೆಯುತ್ತಾರೆ ಹೇಳಿ ನನಗೆ’ ಎಂದು ಗಾವಸ್ಕರ್ ಪ್ರಶ್ನಿಸಿದರು.



ಸುನಿಲ್ ಗಾವಸ್ಕರ್

ಕಾಮನ್‌ವೆಲ್ತ್ ಕೂಟ: ಸ್ಕ್ವಾಷ್ ತಂಡದಲ್ಲಿ ಅನಾಹತ್‌ಗೆ ಸ್ಥಾನ

ನವದೆಹಲಿ (ಪಿಟಿಐ): ದೆಹಲಿಯ 14 ವರ್ಷದ ಆಟಗಾರ್ತಿ ಅನಾಹತ್ ಸಿಂಗ್ ಅವರು ಬರ್ಮಿಂಗ್‌ಹ್ಯಾಂನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಕೂಟಕ್ಕೆ ಭಾರತ ಸ್ಕ್ವಾಷ್ ತಂಡದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ.

15 ವರ್ಷದೊಳಗಿನ ವಿಭಾಗದಲ್ಲಿ ಅಮೋಘ ಪ್ರದರ್ಶನ ನೀಡುತ್ತಿರುವ ಅನಾಹತ್, ಜರ್ಮನಿಯಲ್ಲಿ ಇತ್ತೀಚೆಗೆ ನಡೆದ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು.

ಅನಾಹತ್ ಅಲ್ಲದೆ, ವೇಲಾವನ್ ಸೆಂಥಿಲ್‌ಕುಮಾರ್ ಮತ್ತು ಅಭಯ್ ಸಿಂಗ್ ಅವರು ಇದೇ ಮೊದಲ ಬಾರಿ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಸೌರವ್ ಘೋಷಲ್, ಜೋಷ್ನಾ ಚಿಣ್ಣಪ್ಪ ಮತ್ತು ದೀಪಿಕಾ ಪಳ್ಳಿಕಲ್ ಅವರು ಸ್ಕ್ವಾಷ್‌ನಲ್ಲಿ ಭಾರತದ ಪದಕದ ಭರವಸೆ ಎನಿಸಿಕೊಂಡಿದ್ದಾರೆ.

ತಂಡ ಹೀಗಿದೆ: ಪುರುಷರ ಸಿಂಗಲ್ಸ್: ಸೌರವ್ ಘೋಷಲ್, ರಮಿತ್ ಟಂಡನ್, ಅಭಯ್ ಸಿಂಗ್

ಮಹಿಳೆಯರ ಸಿಂಗಲ್ಸ್: ಜೋಷ್ನಾ ಚಿಣ್ಣಪ್ಪ, ಸುನಯನ ಕುರುವಿಲ, ಅನಾಹತ್ ಸಿಂಗ್

ಮಹಿಳೆಯರ ಡಬಲ್ಸ್: ದೀಪಿಕಾ ಪಳ್ಳಿಕಲ್/ ಜೋಷ್ನಾ

ಮಿಶ್ರ ಡಬಲ್ಸ್: ಸೌರವ್– ದೀಪಿಕಾ, ರಮಿತ್–ಜೋಷ್ನಾ

ಪುರುಷರ ಡಬಲ್ಸ್: ರಮಿತ್–ಹರಿಂದರ್ ಪಾಲ್ ಸಿಂಗ್ ಸಂಧು, ಸೆಂಥಿಲ್‌ಕುಮಾರ್– ಅಭಯ್

ಪ್ರಧಾನ ಹಂತಕ್ಕೆ ಮಿಥುನ್

ಸಿಂಗಪುರ (ಪಿಟಿಐ): ಭಾರತದ ಯುವ ಆಟಗಾರ ಮಿಥುನ್ ಮಂಜುನಾಥ್ ಅವರು ಇಲ್ಲಿ ಆರಂಭವಾದ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಪ್ರಧಾನ ಹಂತ ಪ್ರವೇಶಿಸಿದರು.

ಮಂಗಳವಾರ ನಡೆದ ಅರ್ಹತಾ ಹಂತದ ಎರಡೂ ಪಂದ್ಯಗಳಲ್ಲಿ ಅವರು ಗೆದ್ದರು. ಮೊದಲ ಹಣಾಹಣಿಯಲ್ಲಿ 21–11, 21–15 ರಲ್ಲಿ ಡೆನ್ಮಾರ್ಕ್‌ನ ಮ್ಯಾಡ್ಸ್ ಕ್ರೀಸ್ಟೋಫರ್‌ಸನ್ ಅವರನ್ನು ಮಣಿಸಿದರೆ, ಎರಡನೇ ಪಂದ್ಯದಲ್ಲಿ 21–14, 21–12 ರಲ್ಲಿ ಜರ್ಮನಿಯ ಮ್ಯಾಕ್ಸ್ ವೈಸ್‌ಕರ್ಚೆನ್ ಎದುರು ಜಯಿಸಿದರು.

ಬುಧವಾರ ನಡೆಯಲಿರುವ ಮೊದಲ ಸುತ್ತಿನ ಪಂದ್ಯದಲ್ಲಿ ಮಿಥುನ್, ಭಾರತದವರೇ ಆದ ಕೆ.ಶ್ರೀಕಾಂತ್ ಎದುರು ಆಡುವರು.

ಪ್ರೀ ಕ್ವಾರ್ಟರ್‌ಗೆ ಸುತ್ತಿಗೆ ಅರ್ಜುನ್–ಧ್ರುವ್: ಎಂ.ಆರ್.ಅರ್ಜುನ್ ಮತ್ತು ಧ್ರುವ್ ಕಪಿಲ ಜೋಡಿ ಪುರುಷರ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿತು. ಮೊದಲ ಸುತ್ತಿನಲ್ಲಿ ಅವರು 21–19, 21–9 ರಲ್ಲಿ ಜರ್ಮನಿಯ ಜೋನ್ಸ್ ರಾಲ್ಫಿ ಜನ್ಸೆನ್–ಜಾನ್ ಕಾಲಿನ್ ವೊಲ್ಕೆರ್ ವಿರುದ್ಧ ಜಯಿಸಿದರು.

ಉಳಿದಂತೆ ಮೊದಲ ದಿನದಲ್ಲಿ ಕಣಕ್ಕಿಳಿದ ಭಾರತದ ಎಲ್ಲ ಸ್ಪರ್ಧಿಗಳು ಸೋತುಹೊರಬಿದ್ದರು. ಪುರುಷರ ಸಿಂಗಲ್ಸ್ ವಿಭಾಗದ ಅರ್ಹತಾ ಹಂತದ ಪಂದ್ಯದಲ್ಲಿ ಚಿರಾಗ್ ಸೇನ್ 14–21, 14–21 ರಲ್ಲಿ ಮಲೇಷ್ಯದ ಚಿಯಾಮ್ ಜೂನ್ ವೀ ವಿರುದ್ಧ; ಕಿರಣ್ ಜಾರ್ಜ್ 17–21, 17–21 ರಲ್ಲಿ ಅಜರ್‌ಬೈಜಾನ್‌ನ ಅಡೆ ರೆಸ್ಕಿ ದ್ವಿಕಾವೊ ವಿರುದ್ಧ ಸೋತರು.

ಪುರುಷರ ಡಬಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಕೃಷ್ಣಪ್ರಸಾದ್–ಪಂಜಲ ವಿಷ್ಣುವರ್ಧನ್ 15–21, 21–19, 17–21 ರಲ್ಲಿ ಸಿಂಗಪುರದ ಹಿ ಯೊಂಗ್ ಕಾಯ್ ಟೆರಿ–ಲೊಹ್ ಕೀನ್ ಹೀನ್ ಎದುರು; ಶ್ಯಾಮ್ ಪ್ರಸಾದ್– ಎಸ್.ಸುಜಿತ್ 12–21, 10–21 ರಲ್ಲಿ ಮಲೇಷ್ಯದ ಗೊ ವಿ ಶೆಮ್– ಲೊ ಜುವಾನ್ ಶೆನ್ ಎದುರು ಮಣಿದರು.